Editor: **S.Y.GURUSHANTH** Publisher: **G.N.NAGARAJ**
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ–19 | ಸಂಚಿಕೆ–34 | ಆಗಸ್ಟ್ 18–24, 2025 | ಪುಟ 16 | ರೂ.10
Volume-19 | Issue-34 | Aug 18-24, 2025 | Pages 16 | Price 10/-



ಬಿಹಾರ:
“ಕಾರಣಸಹಿತ ಕೈಬಿಡಲಾದ ಪಟ್ಟಿ ಪ್ರಕಟಿಸಿ”
ಚುನಾವಣಾ ಆಯೋಗಕ್ಕೆ ಸುಪ್ರೀಂ ಆದೇಶ



ದೇವನಹಳ್ಳಿ ಭೂ ಹೋರಾಟ :


“ಗೆಜೆಟ್ ನೋಟಿಫಿಕೇಷನ್ ಆಗುವವರೆಗೂ ಐಕ್ಯತೆ ಮುಂದುವರೆಸಿ...”

- ಅಶೋಕ ಧವಳೆ

ಅತ್ಯಾಚಾರ, ಕೊಲೆ, ಭೂ ಕಬಳಿಕೆ ಬಡ್ಡಿ ದಂಧೆ ಬೆಂಬಲಿಸುತ್ತಿದೆಯೇ ಕಾಂಗ್ರೆಸ್ ಸರ್ಕಾರ ?

ಬಾಂಬೆ ಹೈಕೋರ್ಟ್ ತೀರ್ಪು:
ಪ್ಯಾಲೆಸ್ಟೈನ್ ಪರ ಪ್ರತಿಭಟನೆಗೆ ಒಪ್ಪಿಗೆ





ಜೆ.ಎನ್ ಕಾಲಂ

ಭಾಗ 35

ಚುನಾವಣಾ ಸುಧಾರಣೆಗಾಗಿ ಬಂಡವಾಳಶಾಹಿ ಭೂಮಾಲಕರ ನಡುವೆ ರಾಜಕೀಯ ಸಂಘರ್ಷ

ಸಾರ್ವತ್ರಿಕ ಮತದಾನದ ಹಕ್ಕಿಗಾಗಿ ಜನರ ಒತ್ತಾಯವನ್ನು ನಿರಾಕರಿಸಿ, ಕೇವಲ ಶೇ. 1.5ರಿಂದ ಶೇ. 2ಕ್ಕೆ, ಇಡೀ ಬ್ರಿಟನ್‌ನಲ್ಲಿ ಕೇವಲ ಹತ್ತು ಸಾವಿರ ದೊಡ್ಡ ಆಸ್ತಿವಂತರಿಗೆ ಮಾತ್ರ ಸೀಮಿತಗೊಳಿಸಿದ್ದರಿಂದಾಗಿ ಜನರಲ್ಲಿ ನಿರಂತರವಾಗಿ ಅಸಮಾಧಾನದ ಹೊಗೆಯಾಡುತ್ತಲೇ ಇತ್ತು.

ಪಾರ್ಲಿಮೆಂಟ್ ಪ್ರಭುತ್ವ ಮೇಲುಗೈ ಆದ ನಂತರ ಅಸ್ತಿತ್ವಕ್ಕೆ ಬಂದ ಬಜೆಟ್ ಮೂಲಕ ತೆರಿಗೆ ಹೊರೆಗಳು, ಯುದ್ಧಗಳು, ಮತ್ತಷ್ಟು ತೆರಿಗೆ ಹೊರೆ ಇವುಗಳ ವಿರುದ್ಧ ಜನರು ಸಂಘರ್ಷದಲ್ಲಿ ತೊಡಗಿದ್ದರು. ಈ ಹೋರಾಟಗಳ ಫಲವಾಗಿ ಒಂದೆರಡು ಅಂಶಗಳಲ್ಲಿ ಪಾರ್ಲಿಮೆಂಟ್‌ನಿಂದ ರಿಯಾಯತಿ ದೊರಕಿದರೂ ಕೂಡಾ ಮತ್ತೆ ಹತ್ತು ಹಲವು ರೂಪದ ತೆರಿಗೆಗಳ ಹೇರಿಕೆಯಿಂದ ಜನರ ಸುಲಿಗೆ ನಡೆಯುತ್ತಿತ್ತು.

ಹಲವು ಹೋರಾಟಗಳ ಅನುಭವ ಸಾಮಾನ್ಯ ದುಡಿಯುವ ಜನರಿಗೆ ಕಲಿಸಿದ ಪಾಠವೆಂದರೆ, ಪಾರ್ಲಿಮೆಂಟ್ ಅತಿ ಶ್ರೀಮಂತರ ಅಡ್ಡವಾಗಿ ಪರಿಣಮಿಸಿರುವುದರಿಂದ ತಮ್ಮನ್ನು ಸುಲಿಯುವುದಕ್ಕೆ ಅನುಕೂಲವಾಗಿದೆ. ಪಾರ್ಲಿಮೆಂಟ್ ಬ್ರಿಟನ್‌ನ ಬಹುಸಂಖ್ಯಾತ ದುಡಿಯುವ ಜನರನ್ನು ಪ್ರತಿನಿಧಿಸಬೇಕು. ಅದಕ್ಕಾಗಿ ತಮಗೆಲ್ಲರಿಗೂ ಮತದಾನದ ಹಕ್ಕು ದೊರೆಯಬೇಕು ಎಂಬ ವಿಚಾರ ಮತ್ತಷ್ಟು ತೀವ್ರಗೊಂಡಿತು.

ಚುನಾವಣೆಗಳ ಸುಧಾರಣೆ – ಟೋರಿ ಮತ್ತು ವಿಗ್ ಕದನ, ಪ್ರತಿಭಟನೆಗಳು

ಇದೇ ಸಮಯದಲ್ಲಿ ಪಾರ್ಲಿಮೆಂಟ್ ಒಳಗೆ ಆಗ ರೂಪುಗೊಳ್ಳುತ್ತಿದ್ದ ಎರಡು ರಾಜಕೀಯ ಪಕ್ಷಗಳಾದ ಟೋರಿ ಮತ್ತು ವಿಗ್‌ಗಳ ನಡುವೆ ದಶಕಗಳಿಂದಲೂ ತೀವ್ರ ಮೇಲಾಟ, ಜಗಳ ಆರಂಭವಾಗಿತ್ತು. ಮುಖ್ಯ ಕಾರಣವೇನೆಂದರೆ, ಬಹು ವೇಗವಾಗಿ ನಗರಗಳು ಬೆಳೆಯುತ್ತಿದ್ದರೂ, ಹೊಸ ಹೊಸ ಕೈಗಾರಿಕಾ ಪ್ರದೇಶಗಳು ಉಗಮವಾಗುತ್ತಿದ್ದರೂ, ವಿಸ್ತಾರವಾಗಿ ಬೆಳೆದು ಜನ ಸಾಂದ್ರತೆಯ ಪ್ರದೇಶಗಳಾಗುತ್ತಿದ್ದರೂ, ಶತಮಾನಗಳಿಂದ ಚುನಾವಣಾ ಕ್ಷೇತ್ರಗಳು ಬದಲಾಗದೆ ಉಳಿದದ್ದು. ಬಕಿಂಗ್‌ಹ್ಯಾಂ ಎಂಬ ಹೆಸರು ಬಹಳ ಪ್ರಸಿದ್ಧ. ಅದು ರಾಜಮನೆತನದ ಅರಮನೆ ಇರುವ ಪ್ರದೇಶ. ಇಂತಹ ಬಕಿಂಗ್ ಹ್ಯಾಂ ಪ್ರದೇಶದ ಎಂಪಿಯನ್ನು ಆಯ್ಕೆಮಾಡಲು ಇದ್ದ ಮತದಾರರು ಕೇವಲ 13. ಇಂತಹ ಹಲವು ಕ್ಷೇತ್ರಗಳು ಕೇವಲ ನೂರಕ್ಕಿಂತ ಕಡಿಮೆ ಮತದಾರರನ್ನು ಹೊಂದಿದ್ದವು. ಇಂತಹ ಎಂಪಿ ಕ್ಷೇತ್ರಗಳು ರಾಟನ್ – ಕೊಳೆತ ಕ್ಷೇತ್ರಗಳು ಎಂದು ಹೆಸರಾಗಿದ್ದವು. ಹಾಗೆಯೇ ಮತ್ತೆ ಕೆಲವು ಕ್ಷೇತ್ರಗಳಿಗೆ ಜಹಗೀರುದಾರರ ವಂಶಗಳ ಜೇಬಿನಲ್ಲಿರುವ ಕ್ಷೇತ್ರಗಳು ಎಂದು ಹೆಸರಾಗಿದ್ದವು. ಈ ಎರಡೂ ತೆರನ ಕ್ಷೇತ್ರಗಳಿಂದ ರಾಜಪ್ರಭುತ್ವ ಪ್ರೇಮಿಗಳು, ಪಾಳೆಯಗಾರಿ ಭೂಮಾಲಕರ ಪಕ್ಷವಾಗಿದ್ದ ಟೋರಿಗಳ ಬಲ ಹೆಚ್ಚಾಗಿತ್ತು. ಈ ಬಲದಿಂದ ಪಾರ್ಲಿಮೆಂಟ್‌ನಲ್ಲಿ ಆಗ ಹೆಚ್ಚಾಗುತ್ತ ನಡೆದಿದ್ದ ಕೈಗಾರಿಕೆಗಳ ಮಾಲಿಕರ, ವಸಾಹತುಗಳಲ್ಲಿ ವ್ಯಾಪಾರ ವ್ಯವಹಾರ ನಡೆಸಿದ್ದ ಕಂಪನಿಗಳ ಲಾಭಗಳಿಗೆ ಧಕ್ಕೆಯಾಗುವಂತಹ ತೀರ್ಮಾನಗಳನ್ನು ಕೈಗೊಳ್ಳುತ್ತಿದ್ದರು. ಬಜೆಟ್‌ನ ತೆರಿಗೆ, ಸುಂಕಗಳಲ್ಲಿ ಕೂಡಾ ಇದು ಪ್ರತಿಫಲನಗೊಳ್ಳುತ್ತಿತ್ತು. ಇದರಿಂದಾಗಿ ಬಂಡವಾಳಶಾಹಿ ಪ್ರಧಾನವಾಗಿದ್ದ ವಿಗ್‌ಗಳು ಇಂತಹ ಪೊಳ್ಳು ಕ್ಷೇತ್ರಗಳನ್ನು ಕಿತ್ತುಹಾಕಲು ಚುನಾವಣಾ ಸುಧಾರಣೆಗಳಿಗಾಗಿ ಒತ್ತಾಯಿಸುತ್ತಿದ್ದರು. ಆದರೆ ಟೋರಿಗಳು ತಾವೇ ತಮ್ಮ ಬಲ, ಪ್ರಭಾವ ಕುಗ್ಗಿಸಿಕೊಳ್ಳಲು ಬಯಸುವರೇ! ಈ ಎರಡು ಪಕ್ಷಗಳ ನಡುವೆ ಹಲವು ದಶಕಗಳ ಕಾಲ ಕದನ ನಡೆಯಿತು. ತಮ್ಮ ಸ್ವಂತ ಶಕ್ತಿಯಿಂದ ಈ ಪರಿಸ್ಥಿತಿಯನ್ನು ಬದಲಾಯಿಸಲಾಗದ ಬಂಡವಾಳಶಾಹಿಗಳಿಗೆ ಸಾಮಾನ್ಯ ಜನರ ಮೊರೆಹೋಗುವುದು ಅನಿವಾರ್ಯವಾಯಿತು.



1818ರಲ್ಲಿ ಪ್ರಸಿದ್ಧ ಕೈಗಾರಿಕಾ ಕೇಂದ್ರವಾಗಿ ಬೆಳೆಯುತ್ತಿದ್ದ, ಹತ್ತಾರು ಸಾವಿರ ಜನರು ವಾಸವಿದ್ದ ದೊಡ್ಡ ನಗರ ಮ್ಯಾಂಚೆಸ್ಟರ್‌ಗೆ ಪಾರ್ಲಿಮೆಂಟ್‌ನಲ್ಲಿ ಪ್ರಾತಿನಿಧ್ಯವೇ ಇರಲಿಲ್ಲ. ಆದರೆ ಮೇಲೆ ಹೇಳಿದಂತೆ ಕೇವಲ 13 ಜನ ಮತದಾರರಿದ್ದ ಪ್ರದೇಶ ಪಾರ್ಲಿಮೆಂಟ್ ಕ್ಷೇತ್ರವಾಗಿದ್ದುದು ಪ್ರಜಾಪ್ರಭುತ್ವದ ವ್ಯಂಗ್ಯವಾಗಿತ್ತು.

ಇಂತಹ ಸಂದರ್ಭದಲ್ಲಿ ಮ್ಯಾಂಚೆಸ್ಟರ್‌ನಲ್ಲಿ ಮತದಾನದ ಹಕ್ಕಿನಿಂದ ವಂಚಿತರಾಗಿದ್ದ ಕಾರ್ಮಿಕರು, ಸಣ್ಣ ವ್ಯಾಪಾರಿಗಳು, ಕುಶಲಕರ್ಮಿಗಳು ಮೊದಲಾದ ಜನರಲ್ಲಿ ಅತೃಪ್ತಿ ಬೆಳೆಯಿತು. ಅಲ್ಲಿ 50,000 ಜನರು ಪ್ರತಿಭಟನೆ ಮಾಡಿದರು. ಸರ್ಕಾರ ಸೈನ್ಯವನ್ನು ಕಳಿಸಿ ದೌರ್ಜನ್ಯ ಹರಿಬಿಟ್ಟಿತು. 11 ಜನರು ಹತ್ಯೆಯಾದರು. 400 ಜನ ತೀವ್ರ ಗಾಯಗಳಿಗೆ ಒಳಗಾದರು. ಈ ಪ್ರತಿಭಟನೆಯ ನಾಯಕರಿಗೆ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಯಿತು.

ಅಷ್ಟೇ ಅಲ್ಲ, ಇಂಗ್ಲೆಂಡ್‌ನಲ್ಲೆಲ್ಲ 50 ಜನರಿಗಿಂತ ಹೆಚ್ಚಿನ ಸಭೆಗಳನ್ನು ನಿಷೇಧಿಸಲಾಯಿತು. ಹೊಸದಾಗಿ ಆರಂಭವಾಗುತ್ತಿದ್ದ ಪತ್ರಿಕಾ ಯುಗದಲ್ಲಿ ಅವು ಚುನಾವಣಾ ಸುಧಾರಣೆಗಳಿಗಾಗಿ ನಿರಂತರ ಒತ್ತಾಯಿಸುತ್ತಿದ್ದ ಕಾರಣ, ಅವುಗಳ ಮೇಲೆ ತೆರಿಗೆಗಳನ್ನು ಹೆಚ್ಚಿಸಲಾಯಿತು. ಪತ್ರಿಕೆಗಳನ್ನು ಸಾಮಾನ್ಯ ಜನರು, ಮುಖ್ಯವಾಗಿ ಕೈಗಾರಿಕಾ ಕೇಂದ್ರಗಳ ಕಾರ್ಮಿಕರು ಓದದಂತೆ ಮಾಡಬೇಕೆಂಬುದು ಸರ್ಕಾರದ ದುರುದ್ದೇಶವಾಗಿತ್ತು.

ದೇಶಾದ್ಯಂತ ದಂಗೆಗಳು

ವಿಗ್‌ಗಳು ಈ ನಡುವೆ ಪಾರ್ಲಿಮೆಂಟ್‌ನಲ್ಲಿ ಹಲವು ಬಾರಿ ಚುನಾವಣಾ ಸುಧಾರಣಾ ಮಸೂದೆಗಳನ್ನು ಮಂಡಿಸಿದರು. ಅವೆಲ್ಲವನ್ನೂ ಪಾಳೆಯಗಾರಿ ರಾಜಪರ ಶಕ್ತಿಗಳು ವಿಫಲಗೊಳಿಸಿದರು. 1831ರಲ್ಲಿ ಇಂತಹ ಮಸೂದೆಯನ್ನು ಎರಡು ಬಾರಿ ಮತ್ತೆ ಸೋಲಿಸಲಾಯಿತು. ವಿಗ್ ಪಕ್ಷದಿಂದ ಆಯ್ಕೆಯಾಗಿದ್ದ ಪ್ರಧಾನಿಯೇ ಇದನ್ನು ಪ್ರತಿಭಟಿಸಿ ರಾಜೀನಾಮೆ ನೀಡುವಷ್ಟು ಪ್ರಧಾನ ವಿಷಯವಾಯಿತು. ಮತ್ತೆ ಇದೇ ವಿಷಯದ ಮೇಲೆ ಮಧ್ಯಂತರ ಚುನಾವಣೆಗಳು ನಡೆದವು. ವಿಗ್‌ಗಳು ಬಹುಮತ ಪಡೆದರು. ಆದರೂ ಚುನಾವಣಾ ಸುಧಾರಣಾ ಮಸೂದೆ ಹೌಸ್ ಆಫ್ ಲಾರ್ಡ್ಸ್ (ರಾಜ ಮಾಂಡಲಿಕರ ಸಭೆ) ಅದಕ್ಕೆ ಅಂಗೀಕಾರ ನೀಡಲಿಲ್ಲ. ದೇಶಾದ್ಯಂತ ಈ ವಿಷಯ ವ್ಯಾಪಕವಾಗಿ ಚರ್ಚೆಯಾಗಿತ್ತು. ಈ ಹಿನ್ನೆಲೆಯಲ್ಲಿ ಇಂಗ್ಲೆಂಡಿನಾದ್ಯಂತ ದಂಗೆಗಳು ಮೇಲೆದ್ದವು.

ನಾಟಿಂಗ್‌ಹ್ಯಾಂ ಎಂಬ ನಗರದ ರಾಜ ಮಾಂಡಲಿಕನ (ಡ್ಯೂಕ್) ಚುನಾವಣಾ ಸುಧಾರಣೆಯ ಬದ್ಧ ವಿರೋಧಿಯಾಗಿದ್ದುದು ಅವನ ವರ್ಗ ಸ್ವಾರ್ಥಕ್ಕೆ ಸಹಜವಾದುದೇ. ಆ ನಗರದ ಕಾರ್ಮಿಕರು, ಸಾಮಾನ್ಯ ಜನತೆ ಅವನ ವಿರುದ್ಧ ದಂಗೆ ಎದ್ದರು. ದೊಡ್ಡ ಪ್ರತಿಭಟನಾ ಸಭೆ ನಡೆಸಿದರು. ಅವನ ಅರಮನೆಯ ಮೇಲೆ ಧಾಳಿ ಮಾಡಿದರು. ಈ ಪ್ರತಿಭಟನಾಕಾರರಲ್ಲಿ ಹಲವರನ್ನು ಕೊಲ್ಲಲಾಯಿತು ಮತ್ತೆ ಹಲವರನ್ನು ಬಂಧಿಸಿದರು.

ಬ್ರಿಸ್ಟಲ್ ಎಂಬ ಬಂದರು ನಗರ. ಇಂಗ್ಲೆಂಡ್‌ನ ದೊಡ್ಡ ನಗರಗಳಲ್ಲೊಂದು. ಸರ್ಕಾರಕ್ಕೆ ಆದಾಯದ ಪ್ರಮುಖ ಮೂಲವಾಗಿತ್ತು. ಈ ಬ್ರಿಸ್ಟಲ್‌ನಲ್ಲಿ ಜನರು ದಂಗೆ ಎದ್ದರು. ಚುನಾವಣಾ ಸುಧಾರಣೆಗಳಿಗೆ ವಿರುದ್ಧವಾಗಿದ್ದ ನ್ಯಾಯಾಧಿಶನೊಬ್ಬ ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ಮೂರು ದಿನಗಳ ಕಾಲ ನಗರದಾದ್ಯಂತ ದಂಗೆಗಳು ಅವಿರತವಾಗಿ ನಡೆದವು. ನಗರದ ರಾಜ ಸಾಮಂತನ ಹಾಗೂ ಬಿಷಪ್‌ನ ಬಂಗಲೆಯನ್ನು ಸುಟ್ಟುಹಾಕಿದರು. ಸೆರೆಯಲ್ಲಿದ್ದವರನ್ನು ಬಿಡುಗಡೆ ಮಾಡಿ ಸೆರೆಮನೆಯನ್ನು ಸುಟ್ಟು ಹಾಕಿದರು. ಬರ್ಮಿಂಗ್‌ಹ್ಯಾಮ್ ನಗರ, ಲೈಸೆಸ್ಟರ್, ಬಾತ್ ಮೊದಲಾದ ಹತ್ತಾರು ನಗರ, ಪಟ್ಟಣಗಳಲ್ಲಿ ಗಲಭೆಗಳು ನಡೆದವು.

ಇಷ್ಟೆಲ್ಲಾ ಆದ ಮೇಲೆ, ದೀರ್ಘ ಕಾಲದ ನಂತರ 1832ರಲ್ಲಿ ಒಂದು ಚುನಾವಣಾ ಸುಧಾರಣಾ ಕಾಯಿದೆಯನ್ನು ಅಂಗೀಕರಿಸಲಾಯಿತು. ಆದರೆ ಜನಸಾಮಾನ್ಯರಿಗೆಲ್ಲ ಮತದಾನದ ಹಕ್ಕು ದೊರೆಯಬೇಕು ಎಂಬ ದುಡಿಯುವ ಜನರ, ಕಾರ್ಮಿಕರ ಆಶಯ ಪೂರೈಸಿತೇ?

ಮುಂದೇನಾಯಿತು? ವಿಶ್ವದ ಮೊತ್ತ ಮೊದಲ ಕಾರ್ಮಿಕ ರಾಜಕೀಯ ಚಳುವಳಿ ಚಿಮ್ಮಿ ಬಂತು. ಮಹಿಳೆಯರೂ ಮತದಾನದ ಹಕ್ಕಿಗಾಗಿ ಅರ್ಧ ಶತಮಾನ ಕಾಲ ಸೆಣೆಸಿದರು.

ಪ್ರಜಾಪ್ರಭುತ್ವದ ಉದ್ಘಾಟನೆಯೊಂದಿಗೇ ಮಹಾ ಭ್ರಷ್ಟಾಚಾರದ ಉದ್ಘಾಟನೆ

ರಾಜ ಪ್ರಭುತ್ವದೊಂದಿಗೆ ಪಾರ್ಲಿಮೆಂಟ್ ಪರ ಗುಂಪುಗಳ ಸಂಘರ್ಷ ಆರಂಭವಾದದ್ದೇ ರಾಜ ತನ್ನ ವರ್ಗದ ಜಹಗೀರುದಾರರಿಗೆ, ವಿಧೇಯರಿಗೆ ಮಾತ್ರ ಉಣ್ಣೆ ಉತ್ಪಾದನೆಗಾಗಿ ಊರೊಟ್ಟಿನ ಭೂಮಿ, ರೋಮಿನ ಚರ್ಚ್ ಅಧೀನದ ಭೂಮಿ ಆಕ್ರಮಿಸಿಕೊಳ್ಳಲು ಯಥೇಚ್ಛ ಅವಕಾಶ ನೀಡುತ್ತಿದ್ದಾನೆ. ವಿದೇಶಿ, ದೇಶಿ ವ್ಯಾಪಾರಗಳ, ಉತ್ಪಾದನೆಗಳ ಲೈಸೆನ್ಸ್, ಗುತ್ತೇದಾರಿಗಳನ್ನು ಕೊಡುತ್ತಿದ್ದಾನೆ ಎಂದು. ಅದು ತಮಗೂ ಸಿಗಬೇಕು ಎಂದು. ಆ ಸಂಘರ್ಷದ ನಡುವೆಯೇ ಪಾರ್ಲಿಮೆಂಟ್ ಪರ ಗುಂಪುಗಳು ಇದೇ ಭೂಮಿಯನ್ನು ರಾಜಪರ ಗುಂಪಿನವರ ಹಿಡಿತದಿಂದ ತಪ್ಪಿಸಿ ತಮ್ಮ ಕೈವಶ ಮಾಡಿಕೊಳ್ಳಲು ಪ್ರಯತ್ನಿಸಿದರು. ಪಾರ್ಲಿಮೆಂಟ್‌ನ ಕೈ ಮೇಲಾಗುತ್ತಿದ್ದಂತೆಯೇ ತಮ್ಮ ವಶಕ್ಕೆ ಬಂದ ಪ್ರದೇಶಗಳಲ್ಲಿ ತೆರಿಗೆ ಹೇರಿ ಯುದ್ಧದ ನೆಪದಲ್ಲಿ ದುರುಪಯೋಗ ಮಾಡಿಕೊಂಡರು. ರಾಜನ ವಿರುದ್ಧ ವಿಜಯಗಳಿಸಿದ ಕೂಡಲೇ, ಕ್ರೋಮ್‌ವೆಲ್ ಪಕ್ಷದ ಗ್ರಾಂಡಿಗಳು ಸೈನ್ಯದ ಬಲದಿಂದ ಬೇರೆಲ್ಲ ಪಾರ್ಲಿಮೆಂಟ್ ಸದಸ್ಯರನ್ನು ಹೊರಹಾಕಿ ಪಾರ್ಲಿಮೆಂಟ್ ಅನ್ನು ತಮ್ಮ ಕೈಗೊಂಬೆ ಮಾಡಿಕೊಂಡ ಕೂಡಲೇ ಊರೊಟ್ಟಿನ ಭೂಮಿ, ರಾಜಪರ ಜಹಗೀರುದಾರರ ಭೂಮಿಯನ್ನು ತಮ್ಮ ವಶಪಡಿಸಿಕೊಳ್ಳುವ ಕಾನೂನುಗಳನ್ನು ಮಾಡಿಕೊಂಡರು. ನಂತರ ರಾಜಕೀಯ ಪಕ್ಷಗಳು ರೂಪುಗೊಂಡ ಮೇಲೆ ಎರಡೂ ಪಕ್ಷಗಳ ನಡುವೆ ಇಂತಹವೇ ವಿಷಯಗಳಿಗಾಗಿ ತಿಕ್ಕಾಟ ನಡೆಯಿತು. ಎಂಟು ದಶಕಗಳ ಕಾಲ ನಿರಂತರ ವಿಗ್ ಪಕ್ಷದ ಏಕಪಕ್ಷ ಅಧಿಕಾರ ಏರ್ಪಟ್ಟಾಗ ಕೇಳಬೇಕೇ! ವೇಗವಾಗಿ ಬೆಳೆಯುತ್ತಿದ್ದ ದೂರ ವ್ಯಾಪಾರ, ಆಂತರಿಕ ವ್ಯಾಪಾರಗಳು, ಕೈಗಾರಿಕಾ ಉತ್ಪಾದನೆ, ಕೃಷಿ ಬಂಡವಾಳಶಾಹೀಕರಣ, ಇವುಗಳ ಮೇಲೆ ಈ ಪಕ್ಷಗಳ ಪಾರ್ಲಿಮೆಂಟ್ ಸದಸ್ಯರು ಅವರ ಬಳಗದವರು ತಮ್ಮ ಹಿಡಿತ

ಪುಟ 13 ನೋಡಿ

ಸಂಪಾದಕೀಯ

ಅತ್ಯಾಚಾರ ಕೊಲೆ, ಭೂಹಗರಣ, ಬಡ್ಡಿ ದಂಧೆಯನ್ನು ಬೆಂಬಲಿಸುತ್ತಿದೆಯೇ ಕಾಂಗ್ರೆಸ್ ಸರಕಾರ?

ಧರ್ಮಸ್ಥಳ, ಉಜಿರೆ, ಬೆಳ್ತಂಗಡಿಯ ವ್ಯಾಪ್ತಿಯಲ್ಲಿ ಅಸಂಖ್ಯ ಅಸಹಜ ಸಾವುಗಳು, ಪತ್ತೆಯಾಗದ ಅತ್ಯಾಚಾರಿಗಳು, ಭೂಮಿ ಕಳೆದುಕೊಂಡವರ ಪಟ್ಟಿಯು ತಲ್ಲಣಗೊಳಿಸುವಂತದ್ದಾಗಿದೆ. ಈಚೆಗೆ ಅನಾಮಿಕ ವ್ಯಕ್ತಿಯೊಬ್ಬನ ದೂರಿನ ಆಧಾರದಲ್ಲಿ ಸರಕಾರವು ಶ್ರೀ ಪ್ರಣವ ಮೊಹಂತಿ ನೇತೃತ್ವದಲ್ಲಿ ಎಸ್ಐಟಿ ತನಿಖೆ ನಡೆಸುತ್ತಿದೆ. ತನ್ನ ಕೈಯಾರೆ 80ಕ್ಕೂ ಹೆಚ್ಚು ಹೆಣಗಳನ್ನು ಹೂತಿರುವುದಾಗಿ, ಸೌಜನ್ಯಳನ್ನು ಅತ್ಯಾಚಾರ ಮಾಡಿ ಬಾರ್ಬರಿಕ ಕೊಲೆ ಮಾಡಿದ ಮೇಲೆ ಅವಳನ್ನೂ ಹುಗಿಯಲು ತನಗೆ ಕರೆ ಬಂದಿತ್ತು ಎಂದು ಈ ಅನಾಮಿಕ ವ್ಯಕ್ತಿಯು ಇಂಡಿಯಾ ಟುಡೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾನೆ. ಆತನ ಹೇಳಿಕೆಯನ್ನು ಅನುಸರಿಸಿ 134 ಪಾಯಿಂಟ್‌ಗಳನ್ನು ಗುರುತಿಸಿ ಉತ್ಖನನ ಆರಂಭಿಸಲಾಗಿದೆ. ಹಲವು ಸಾಕ್ಷಿದಾರರು ದೂರುಕೊಡಲು ಮುಂದೆ ಬಂದಿದ್ದಾರೆ. ಈವರೆಗೆ ಯಾವುದೇ ಅಧಿಕೃತ ಮಾಹಿತಿಯನ್ನು ಎಸ್ಐಟಿ ಬಿಡುಗಡೆ ಮಾಡಿಲ್ಲ. ಆದರೆ ಈ ನಡುವಲ್ಲಿ ಇಡೀ ತನಿಖೆಯನ್ನು ದಾರಿ ತಪ್ಪಿಸುವಂತಹ ಚಟುವಟಿಕೆಗಳು ನಡೆದಿವೆ. ಒಂದು ಕಡೆ ಹೀಗೆ ಅಗೆಯುವ ಮೂಲಕ ದೇವರು ಧರ್ಮದ ಮೇಲೆ ಮತ್ತು ಧರ್ಮಸ್ಥಳದ ಮೇಲೆ ಅಪಪ್ರಚಾರ ಮಾಡಲಾಗುತ್ತಿದೆ ಎಂದು ಬಿಜೆಪಿ ಹೇಳತೊಡಗಿದೆ. ಇನ್ನೂ ಆತಂಕದ ಪ್ರಶ್ನೆಯೆಂದರೆ ಸರಕಾರವೇ ರಚನೆ ಮಾಡಲಾದ ಎಸ್ಐಟಿ ವಿರುದ್ಧ ಸರಕಾರದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಅವರು, ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರನ್ನು ರಕ್ಷಿಸಲಿಕ್ಕಾಗಿ ಅವರ ಪರವಾಗಿ ಬ್ಯಾಟಿಂಗ್ ಮಾಡುತ್ತಿರುವುದು, ರಾಜ್ಯದಲ್ಲಿ ಅನೇಕ ವರ್ಷಗಳಿಂದ ಅತ್ಯಾಚಾರ ಕೊಲೆಗಳ ವಿರುದ್ಧ ಹೋರಾಟ ಮಾಡುತ್ತಿರುವವರನ್ನು ಬೆದರಿಸುವಂತಿದೆ. ಚುನಾಯಿತ ಪ್ರತಿನಿಧಿಯಾಗಿ ತನ್ನದೇ ಸರಕಾರದ ವಿರುದ್ಧವೂ ಮತ್ತು ನ್ಯಾಯಕ್ಕಾಗಿ ದನಿ ಎತ್ತುವವರನ್ನು ಬೆದರಿಸುವಂತೆಯೂ ನಡೆದುಕೊಳ್ಳುವುದು ಸರ್ವಾಧಿಕಾರಿ ಧೋರಣೆಯಾಗಿದೆ. ಇದೇ ಸಂದರ್ಭದಲ್ಲಿ ಎಸ್ಐಟಿಯ ಸ್ವತಂತ್ರ ಕಾರ್ಯಾಚರಣೆಗೆ ಅಡ್ಡಿಪಡಿಸಿದಂತೆಯೂ ಆಗಿದೆ. ವಿರೋಧ ಪಕ್ಷದೊಂದಿಗೆ ಆಡಳಿತ ಪಕ್ಷವೂ ಕೈಗೂಡಿಸಿದ್ದು ನೋಡಿದರೆ, ಇಡೀ ಪ್ರಕರಣವನ್ನು ದಿಕ್ಕು ತಪ್ಪಿಸುವಲ್ಲಿ ಆರ್ಥಿಕವಾದ ಒಳ ಒಪ್ಪಂದಗಳ ವಾಸನೆ ಹೊಡೆಯುವುದು ಸಹಜವಾಗಿದೆ. ಇದು ಅತ್ಯಂತ ಅಪಾಯಕಾರಿಯಾದ ನಡೆಯಾಗಿದೆ.

ಒಂದು ಕಲ್ಲಿಗೆ ಎರಡೆರಡು ಹಕ್ಕಿಗಳನ್ನು ಹೊಡೆಯುವಂತೆ, ಆರಂಭದಿಂದಲೂ ಧರ್ಮಸ್ಥಳದಲ್ಲಿನ ಅನಾಚಾರ, ಅತ್ಯಾಚಾರ ಕೊಲೆಯ ವಿರುದ್ಧ ದೃಢವಾಗಿ ದನಿಯೆತ್ತಿದ ಕಮ್ಯೂನಿಸ್ಟ್ ಪಕ್ಷಗಳನ್ನೂ ಇದೇ ಸಂದರ್ಭದಲ್ಲಿ ಅಪಪ್ರಚಾರ ಮಾಡಿ, ಜನರ ನಡುವೆ ತಪ್ಪು ಅಭಿಪ್ರಾಯ ಬರುವಂತೆ ಸರಕಾರದಿಂದಲೂ, ವಿರೋಧ ಪಕ್ಷದಿಂದಲೂ ಹೇಳಿಕೆಗಳು ಬರತೊಡಗಿವೆ. ಎಸ್ಐಟಿ ತನಿಖೆಗೆ ಕಮ್ಯೂನಿಸ್ಟ್ ಪಕ್ಷಗಳು ಕಾರಣ, ಕಮ್ಯೂನಿಸ್ಟರು ಧರ್ಮಸ್ಥಳದ ಮೇಲೆ ದಾಳಿ ಮಾಡುತ್ತಿದ್ದಾರೆ ಎಂದು ಬಿಂಬಿಸಲಾಗುತ್ತಿದೆ. ಮತ್ತು ಜನತೆಯ ಮನಸ್ಸಿನಲ್ಲಿ ಧಾರ್ಮಿಕ ಭಾವನೆಗಳನ್ನು ಉತ್ಪಾದನೆ ಮಾಡಿ ಕೊಲೆ, ಅತ್ಯಾಚಾರ, ದೌರ್ಜನ್ಯಗಳ ಮೇಲೆ ಪರದೆ ಹಾಕಲು ಹೊರಟಿದೆ ಎಂಬುದು ಸ್ಪಷ್ಟವಾಗುತ್ತಿದೆ. ಇದನ್ನು ರಾಜ್ಯದ ಜನತೆ ಗಮನಿಸುತ್ತಿದ್ದಾರೆ. ಅನಾಮಿಕನ ದೂರಿನನ್ವಯ ಹೂತ ಹೆಣಗಳನ್ನು ಅಗೆದು ಹೊರತೆಗೆವ ಸಂಗತಿಯನ್ನು ಮುಂದೆ ಮಾಡಿ, ಇಡೀ ಗಮನವನ್ನು ದೇವರು ಧರ್ಮ ಮತ್ತು ಅನಾಮಿಕನ ಆಗಮನ ಕಾರ್ಯಾಚರಣೆಯನ್ನು ಮಾತ್ರ ಮುನ್ನೆಲೆಗೆ ತರಲಾಗುತ್ತಿದೆ. ಹಾಗೆ ನೋಡಿದರೆ ದೇವರು, ಧರ್ಮ, ಧರ್ಮಸ್ಥಳದ ಬಗ್ಗೆ ಯಾರೂ ಮಾತಾಡಿಲ್ಲ. ಹಾಗೆ ಬಿಂಬಿಸುವ ಪ್ರಯತ್ನ ನಿರಂತರವಾಗಿ ನಡೆಯುತ್ತಿದೆ ಎಂಬುದು ಪ್ರಸಂಗಗಳ ಬೆಳವಣಿಗೆಗಳಿಂದ ಗೊತ್ತಾಗುತ್ತದೆ.

ಯಾಕೆ ಸರಕಾರವೂ, ವಿರೋಧ ಪಕ್ಷವೂ ಕಮ್ಯುನಿಸ್ಟರ ಮೇಲೆ ಗೂಬೆ ಕೂಡಿಸಲು ಹೊರಟಿದ್ದಾರೆ? ಧರ್ಮಸ್ಥಳದಲ್ಲಿ ನಡೆದಿರುವ ಅತ್ಯಾಚಾರ ಕೊಲೆಗಳ ಬಗ್ಗೆ ದೃಢವಾಗಿ ಹೋರಾಟ ಮಾಡಿದ್ದು ಕಮ್ಯುನಿಸ್ಟರು. 1986ರ ಡಿಸೆಂಬರ್ 22ರಂದು ಉಜಿರೆ ಎಸ್‌ಡಿಎಂ ಕಾಲೇಜಿನಲ್ಲಿ ಓದುತ್ತಿದ್ದ 17 ವರ್ಷದ ಯುವತಿ ಪದ್ಮಲತಾ ಕಾಣೆಯಾಗಿ 56 ದಿನಗಳ ನಂತರ ನೆರಿಯಾ ಹೊಳೆಯಲ್ಲಿ ಶವವಾಗಿ ಪತ್ತೆಯಾಗುತ್ತಾಳೆ. ಪದ್ಮಲತಾ ಸಿಪಿಐಎಂ ಪಕ್ಷದ ಘಟಕದ ಕಾರ್ಯದರ್ಶಿಯಾಗಿದ್ದ ದೇವಾನಂದ ಎಂಬುವವರು ಚುನಾವಣೆಗೆ ಸ್ಪರ್ಧಿಸಿದ್ದು ಮತ್ತು ಬಡ ಆದಿವಾಸಿಗಳಿಗೆ ಹೋರಾಡಿ ಮನೆಗಳನ್ನು ನಿರ್ಮಿಸಿ ಕೊಟ್ಟಿದ್ದು ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರ ಸಾಮ್ರಾಜ್ಯಕ್ಕೆ ಅರಿಗಿಸಿಕೊಳ್ಳಲಾಗದ ಬೆಳವಣಿಗೆಯಾಗಿತ್ತು. ಪ್ರಜಾಪ್ರಭುತ್ವದ ಹಕ್ಕನ್ನು ದೃಢಗೊಳಿಸಲು ಮತ್ತು ಪಾಳೆಗಾರಿಕೆಯನ್ನು ಹಿಮ್ಮೆಟ್ಟಿಸಲು ಕಾಮ್ರೇಡ್ ದೇವಾನಂದ ಅವರು ಚುನಾವಣೆಯಿಂದ ಹಿಂದೆ ಸರಿಯುವುದಿಲ್ಲ. ಇದಕ್ಕೆ ಪ್ರತಿಕಾರವಾಗಿ ಕಾಣೆಯಾದ ಅವರ ಮಗಳು ಶವವಾಗುತ್ತಾಳೆ. ಪದ್ಮಲತಾ ತಾಯಿ ಮತ್ತು ಅಕ್ಕ ಇಂದ್ರವತಿಯವರು ಬದುಕಿದ್ದಾರೆ. ಅವರ ಹೇಳಿಕೆ ಪ್ರಕಾರ ಪದ್ಮಲತಾಳನ್ನು ಪ್ರಿನ್ಸಿಪಾಲ್ ಕರೆಯುತ್ತಿದ್ದಾರೆ ಎಂದು ಕರೆದುಕೊಂಡು ಹೋದ ಕಾರಿನಲ್ಲಿ ಇದ್ದಿದ್ದು ಹರ್ಷೇಂದ್ರಕುಮಾರ ಹೆಗ್ಗಡೆ. ಇದನ್ನು ಕಂಡವರು ಬದುಕಿದ್ದಾರೆ. ಈಗ ಇವರು ಎಸ್ಐಟಿಗೆ ದೂರು ಕೊಟ್ಟಿದ್ದಾರೆ. ಸಿಪಿಐಎಂ ಅಲ್ಲಿಂದ ತೀವ್ರ ಹೋರಾಟ ಆರಂಭಿಸಿದೆ.

ಅಂತೆಯೇ ವೇದವಲ್ಲಿ ಎಂಬ ಧರ್ಮಸ್ಥಳದ ಎಸ್‌ಡಿಎಂ ಶಿಕ್ಷಣ ಸಂಸ್ಥೆಯ ಶಿಕ್ಷಕಿಯನ್ನು 1979ರಲ್ಲಿ ನ್ಯಾಯಬದ್ಧವಾಗಿ ಸಿಗಬೇಕಾದ ಮುಖ್ಯೋಪಾಧ್ಯಾಯಿನಿ ಹುದ್ದೆಯನ್ನು ತಪ್ಪಿಸಲಿಕ್ಕಾಗಿ (ಕೋರ್ಟಿನಲ್ಲಿ ಗೆದ್ದ ಮೇಲೂ) ಮತ್ತು ಅವರ ಹೋರಾಟವನ್ನು ಹತ್ತಿಕ್ಕಲಿಕ್ಕಾಗಿ ಬಹಿರಂಗವಾಗಿ ಮಾರಣಾಂತಿಕ ದಾಳಿ ನಡೆಸಲಾಗಿತ್ತು. ವೇದವಲ್ಲಿಯವರ ಮೇಲೆ ಅತ್ಯಾಚಾರವೆಸಗಿ ಅವರನ್ನು ಜೀವಂತವಾಗಿ ಸುಟ್ಟು ಹಾಕಲಾಯಿತು. ಕೊಲೆ ನೋಡಿದ ಮಕ್ಕಳನ್ನೂ ಕೊಲ್ಲಲಾಯಿತೆಂಬ ವರದಿಯಿದೆ. ಕೊಲೆಯ ಅಪಾದನೆಯನ್ನು ಅವರ ಗಂಡ ಡಾ.ಬಿ.ಆರ್. ಹರಳೆಯವರ ಮೇಲೆ ಹಾಕಲಾಯಿತು. ಹರಳೆಯವರು ನಿರಪರಾಧಿ ಎಂದು ನ್ಯಾಯಾಲಯ ಘೋಷಿಸಿತು.

ಹೀಗೆಯೇ ಭೂಮಿಯ ಪ್ರಶ್ನೆಯಲ್ಲಿ ಮಾವುತ ನಾರಾಯಣ ಮತ್ತು ಅವರ ಸೋದರಿ ಯಮುನಾ ಜೋಡಿ ಕೊಲೆ ನಡೆದಿರುವುದನ್ನು ಯಾವ ತನಿಖೆಯೂ ಇಲ್ಲದೆ ಮುಚ್ಚಿ ಹಾಕಲಾಗಿದೆ. ಸೌಜನ್ಯ ಪ್ರಕರಣವನ್ನೂ ಹೀಗೆಯೇ ಮುಚ್ಚಿಹಾಕಲಾಗಿದ್ದನ್ನು ದೇಶವೇ ಗಮನಿಸಿದೆ. ಸೌಜನ್ಯಳನ್ನು ಆಕೆಯ ಜೀವನದ ಕೊನೆಯ ಸಂದರ್ಭದಲ್ಲಿ ನೋಡಿದರೆನ್ನಲಾದ ಇಬ್ಬರಲ್ಲಿ ಸ್ಥಳೀಯ 'ಹರೀಶ್ ಮಡಿವಾಳ' ಅಪಘಾತದಲ್ಲಿ ಸತ್ತ ಎಂದು, ವಾರಿಜ ಎಂಬ ಯುವತಿಯ ಮೃತ ದೇಹವು ಬಾವಿಯೊಳಗೆ ಸಿಕ್ಕಿದ್ದು, ಸೌಜನ್ಯ ಕುಟುಂಬದವರು ಒಬ್ಬ ಆರೋಪಿಯಾಗಿ ಗುರುತಿಸಿರುವ ರವಿ ಪುಜಾರಿ ಆತ್ಮಹತ್ಯೆ ಎನ್ನಲಾದ ಪ್ರಕರಣ, ಅದೇ ರೀತಿಯ ಈ ಪ್ರಕರಣಕ್ಕೆ ಸಂಬಂಧಿಸಿದ ಗೋಪಾಲ ಕೃಷ್ಣ ಎಂಬ ವ್ಯಕ್ತಿಯ ಅಕಾಲಿಕ ಸಾವು, ಇವೆಲ್ಲವೂ ಸಹ ತನಿಖೆಗೆ ಒಳಪಡಬೇಕಾಗಿದೆ. ಧರ್ಮಸ್ಥಳ ಪ್ರದೇಶದಲ್ಲಿ ದಿನೇಶ್ ಕುಮಾರ ಎಂಬ ವ್ಯಕ್ತಿಗೆ ಬೊಲೆರೊ ಕಾರು ಗುದ್ದಿದ್ದು, ಜನರ ತೀವ್ರ ಪ್ರತಿಭಟನೆಯ ನಂತರ ಕಾರು ಓಡಿಸುತ್ತಿದ್ದ ಇದೇ ಧರ್ಮಸ್ಥಳ ದೇವಳದ ಮೇನೆಜರ್ ಬಾಲಕೃಷ್ಣ ಪೂಜಾರಿಯ ಮೇಲೆ ಕೊಲೆ ಪ್ರಕರಣ ದಾಖಲಾಗಿದೆ ಎಂಬುದನ್ನು ಇಲ್ಲಿ ಗಮನಿಸಬೇಕಾಗಿದೆ.

ಅಂತೆಯೇ ಈಗ ಮುನ್ನೆಲೆಗೆ ಬಂದ ಹಳೆಯ ಪ್ರಕರಣಗಳಲ್ಲಿ ಹೇಮಾವತಿ ನಾಪತ್ತೆ ಪ್ರಕರಣ, ಪತ್ರಕರ್ತ ಬಿ.ಎಂ.ರಶೀದ್ ಅವರ ಅನುಮಾನಾಸ್ಪದ ಆತ್ಮಹತ್ಯೆ ಪ್ರಕರಣ ಎಲ್ಲವೂ ತನಿಖೆಗೆ ಒಳಪಡುವಂತಹವುಗಳು. ಮಾತ್ರವಲ್ಲ 1987ರಿಂದ ಮಾರ್ಚ್ 2025ರವರೆಗೆ ಗುರುತು ಪತ್ತೆಯಾಗದ 279 ಮೃತದೇಹಗಳನ್ನು ವಿಲೇವಾರಿ ಮಾಡಿರುವುದಾಗಿ ಮಾಹಿತಿ ಹಕ್ಕು ಅಡಿಯಲ್ಲಿ ದೊರೆತ ಅಂಕಿಸಂಖ್ಯೆಗಳು. ಅವುಗಳಲ್ಲಿ 219 ಗಂಡು, 46 ಹೆಣ್ಣು ಹಾಗೂ ಲಿಂಗ ಪತ್ತೆಯಾಗದ 13 ದೇಹಗಳು ಎಂದು ಉಲ್ಲೇಖಿಸಲಾಗಿದೆ. ಈವರೆಗೆ ಸುಮಾರು 878 ಅಸಹಜ ಸಾವಿನ ಪ್ರಕರಣಗಳು ದಾಖಲಾಗಿವೆಯೆಂದು ವರದಿಯಾಗಿದೆ. ಇವುಗಳ ತನಿಖೆಯೂ ನಡೆಯಬೇಕಲ್ಲ. ಭೂಕಬಳಿಕೆ ಪ್ರಕರಣಗಳು ಅಸಂಖ್ಯ ಇವೆ. ಭೂಮಿಗಾಗಿ ನಡೆದ ಕೊಲೆಗಳು ಲೆಕ್ಕವಿಲ್ಲದಷ್ಟು ಎಂದು ಹೇಳಲಾಗುತ್ತಿದೆ. ಇವೆಲ್ಲವೂ ತನಿಕೆ ನಡೆಸಿದಾಗ ನಿಜ ಅಪರಾಧಿಗಳು ಬಯಲಿಗೆ ಬರುವರು.

ಇದೇ ಸಂದರ್ಭದಲ್ಲಿ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಮೂಲಕ ಮೈಕ್ರೋಫೈನಾನ್ಸ್ ಹೆಸರಿನಲ್ಲಿ ಅಪಾರ ಪ್ರಮಾಣದ ಹಣಕಾಸಿನ ವ್ಯಾಪಾರ ನಡೆಸಲಾಗುತ್ತಿದೆ. ಇದಕ್ಕೂ ಜನತೆಯ ಧಾರ್ಮಿಕ ಭಾವನೆಗಳನ್ನು ದುರುಪಯೋಗ ಮಾಡಲಾಗುತ್ತಿದೆ ಎಂಬ ಬಲವಾದ ಆರೋಪಗಳಿವೆ. ಒತ್ತಾಯದ ಸಾಲ ವಸೂಲಾತಿ, ಕಿರುಕುಳದಿಂದ ಬೇಸತ್ತು ಆತ್ಮಹತ್ಯೆಗಳು ನಡೆದಿವೆ. ಸರಕಾರವು ಮಾಡಬೇಕಾದುದು ಏನೆಂದರೆ ಇನ್ನೊಂದು ಎಸ್ಐಟಿ ರಚಿಸಿ ಮೇಲಿನ ಎಲ್ಲ ಪ್ರಕರಣಗಳ ತನಿಖೆಗೆ ಆದೇಶ ಮಾಡಬೇಕು. ಆಗ ಮಾತ್ರ ಜನತೆಯ ನಂಬಿಕೆಗೆ ಪಾತ್ರವಾಗಲು ಸಾಧ್ಯ. ಈಗಾಗಲೇ ಕಾಂಗ್ರೆಸ್ ಜನರಿಂದ ವಿಶ್ವಾಸ ಕಳೆದುಕೊಂಡಿದೆ.

ಜನತೆಯು ಎತ್ತುವ ಪ್ರಶ್ನೆಗಳಲ್ಲಿ, 'ಈವರೆಗೆ ಕೊಲೆಯಾದವರು ಅತ್ಯಾಚಾರಕ್ಕೆ ಒಳಗಾದವರು ಹಿಂದೂಗಳೇ ಅಲ್ಲವೆ?' ಎಂಬುದು ಒಂದಾಗಿದೆ. ಜನತೆಯ ಈ ಪ್ರಶ್ನೆಗಳಿಗೆ ಉತ್ತರಿಸದೆ ತನಿಖೆ ಮಾಡಲು ಮುಂದಾಗದೆ ಜನತೆಯ ಪ್ರಶ್ನೆಗಳನ್ನೆತ್ತಿಕೊಂಡು ಹೋರಾಟ ಮಾಡುತ್ತಿರುವ ಕಮ್ಯೂನಿಸ್ಟರ ಮೇಲೆ ಗೂಬೆ ಕೂಡಿಸುವುದು, ಅಪಪ್ರಚಾರ ಮಾಡುವುದು ಎಂದರೆ ಕಾಂಗ್ರೆಸ್, ಬಿಜೆಪಿಗರು ಒಂದೇ ಹಡಗಿನ ಪಯಣಿಸುವವರು ಮತ್ತು ಅತ್ಯಾಚಾರಿ ಕೊಲೆಗಡುಕರ ಪರವೆಂಬುದುನ್ನು ತಾವೇ ಸಾಬೀತುಗೊಳಿಸಿದಂತೆ.





ಶಾಲಾ ಮಕ್ಕಳು ಕುಡಿಯುವ ನೀರಿಗೆ ವಿಷ ಬೆರೆಸಿದ ಶ್ರೀರಾಮ ಸೇನೆ ಸಂಘಟನೆಯ ಕಾರ್ಯಕರ್ತರು

ದೇಶ, ಭಾಷೆ, ನೆಲದ ಬಗ್ಗೆ ಅತಿಯಾದ ಅಭಿಮಾನ ಇರಬೇಕು. ಆದರೆ ಈ ಅಭಿಮಾನವು ಅತೀರೇಕವಾಗಬಾರದು. ಮಾನವೀಯತೆಯ ಎಲ್ಲೆಯನ್ನು ಮೀರಿದಾಗ ಯಾವುದೇ ರೀತಿಯ ಅಭಿಮಾನಕ್ಕೆ ದುರುಪಯೋಗಪಡಿಸಿಕೊಳ್ಳಲು ಒಂದಿಷ್ಟು ದುಷ್ಟ ಶಕ್ತಿಗಳು ಹೊಂಚು ಹಾಕುತ್ತಿರುತ್ತವೆ. ಇಂತಹ ವಿಕೃತಿಗಳು ಹೆಚ್ಚಾದಾಗಲೇ ಅಮಾನುಷವಾದ ದುರಂತಗಳು ನಡೆಯುತ್ತವೆ. ಇಂತಹ ಒಂದು ದುರಂತ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಹೂಲಿಕಟ್ಟಿ ಗ್ರಾಮದ ಕಿರಿಯ ಪ್ರಾಥಮಿಕ ಸರಕಾರಿ ಶಾಲೆಯಲ್ಲಿ ನಡೆದಿದೆ. ಶಾಲಾ ಮಕ್ಕಳು ಕುಡಿಯುವ ನೀರಿನ ಟ್ಯಾಂಕಿಗೆ ವಿಷ ಬೆರೆಸಿ ಮಕ್ಕಳ ಮಾರಣ ಹೋಮಕ್ಕೆ ಪ್ರಯತ್ನ ಪಟ್ಟಿದ್ದು ಏಕೆ? ಈ ನೀಚ ಕೃತ್ಯ ಎಸಗಿದವನು ಯಾರು? ಇವನ ಹಿನ್ನೆಲೆ ಏನು?

ವರದಿ: ಗೈಬು ಜೈನೆಖಾನ್

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಹೂಲಿಕಟ್ಟಿ ಗ್ರಾಮ. ಅದೊಂದು ಎಲ್ಲರೂ ಸೇರಿ, ಕೂಡಿ ಬಾಳುವ ಗ್ರಾಮ. ಎಲ್ಲ ಹಬ್ಬ ಹರಿದಿನಗಳನ್ನು ಎಲ್ಲರೂ ಸೇರಿಯೇ ಮಾಡುತ್ತಾರೆ. ಅಚ್ಚರಿ ಏನೆಂದರೆ ಅಲ್ಲಿ 3–4 ಕುಟುಂಬಗಳು ಮಾತ್ರ ಮುಸ್ಲೀಮರು ಇರುವುದು. ಎಲ್ಲರೂ ಅನ್ಯೋನ್ಯವಾಗಿ ಕೂಡಿ ಇರುತ್ತಾರೆ. ಮೊನ್ನೆ ಮೊನ್ನೆಯಷ್ಟೇ ಮೊಹರಂ ಹಬ್ಬ ನಡೆದಿದೆ. ಹಿಂದೂ–ಮುಸ್ಲಿಂ ಎಲ್ಲರೂ ಕೂಡಿ ವಿಜೃಂಭಣೆಯಿಂದ ಆಚರಿಸಿದ್ದಾರೆ. ಇಂತಹ ಗ್ರಾಮದಲ್ಲಿ 3–4 ಜನ ಹಿಂದುತ್ವವಾದಿಗಳು ಶ್ರೀರಾಮ ಸೇನೆಯ ಕಾರ್ಯಕರ್ತರು ಇದ್ದು, ಅಲ್ಲಿಯ ವಾತಾವರಣ ಕೆಡಿಸಲು ನೋಡುತ್ತಾರೆ. ಆದರೆ ಅದು ಸಫಲವಾಗದೇ, ಅವರೆಲ್ಲ ನಿರಾಶರಾಗಿ ಸುಮ್ಮನಿರಬೇಕಾದ ಪರಿಸ್ಥಿತಿ. ಆದರೂ ಶ್ರೀರಾಮ ಸೇನೆಯ ಮುಖಂಡರ ಕೋಮುವಾದಿ ಭಾಷಣಗಳು, ಮಾತುಗಳು ಅವರ ತಲೆಯಲ್ಲಿ ಹಾಗೆ ಉಳಿದಿರುತ್ತವೆ. ಇದನ್ನೇ ಮುಂದೇನಾದರೂ ಮಾಡೋಣ ಎಂಬ ವಿಚಾರದಲ್ಲಿ ಕೋಮುವಾದಿಗಳು ಹೊಂಚು ಹಾಕುತ್ತಿರುತ್ತಾರೆ. ಇಂತಹ ಒಂದು ದಾರುಣ ಘಟನೆ ಹೂಲಿಕಟ್ಟಿ ಗ್ರಾಮದಲ್ಲಿ ನಡೆದಿದೆ.

ವಿದ್ಯಾರ್ಥಿಗೆ ಚಾಕಲೇಟ ನೀಡಿ ವಿಷ ಸುರಿಸಿದರು

ದಿನಾಂಕ 2025ರ ಜುಲೈ 14ರಂದು ಸೋಮವಾರ ಎಂದಿನಂತೆ ಬೆಳಿಗ್ಗೆ 10 ಘಂಟೆಗೆ ಶಾಲೆ ಪ್ರಾರಂಭವಾಗುತ್ತದೆ. ಶಾಲೆ ಆವರಣದಲ್ಲಿಯೇ ವಿದ್ಯಾರ್ಥಿ–ವಿದ್ಯಾರ್ಥಿನಿಯರು (ಮಕ್ಕಳು) ಕುಡಿಯುವ ನೀರಿನ ಟ್ಯಾಂಕ್ ಇದೆ. ಆ ನೀರನ್ನು ಅದೇ ಗ್ರಾಮದ ಜನರು ಸಹ ತಮಗೆ ನೀರು ಬರಲಿಲ್ಲ ಎಂದರೆ ಶಾಲೆಯ ನೀರನ್ನು ಬಳಸುತ್ತಾರೆ. ಅಂದು ಬೆಳಿಗ್ಗೆ 7ರ ನಂತರ ಕೃತ್ಯ ಎಸಗಿದ ನೀಚರು 5ನೇ ತರಗತಿಯ ವಿದ್ಯಾರ್ಥಿಯನ್ನು ಕರೆದು ಅವನಿಗೆ ಚಾಕಲೇಟ ನೀಡಿ, ಹಣದ ಆಮೀಷ ನೀಡಿ ಈ ಬಾಟಲಿಯಲ್ಲಿರುವ ಔಷಧಿಯನ್ನು ನಿಮ್ಮ ನೀರಿನ ಟ್ಯಾಂಕ್‌ನಲ್ಲಿ ಹಾಕು ಎಂದು ಹೇಳಿದ್ದಾರೆ. ವಿದ್ಯಾರ್ಥಿ ಚಾಕಲೇಟ್ ಮತ್ತು ಹಣದ ಆಸೆಗೆ ನೀರಿನ ಟ್ಯಾಂಕ್ ಮೇಲೆ ಹತ್ತಿ ಆ ವಿಷದ ಬಾಟಲಿಯ ಮುಚ್ಚಳಿಕೆ ತೆಗೆದು ನೀರಿಗೆ ಹಾಕಲು ಹೋಗಿದ್ದಾನೆ. ಆದರೆ ಟ್ಯಾಂಕ್ ಮೇಲೆ ಕಬ್ಬಿಣದ ಪ್ಲೇಟ್ ಇರುವುದರಿಂದ ಅವನಿಂದ ಎತ್ತಲು ಆಗದೇ, ಪೈಪ್ ಹೋಗುವಷ್ಟು ಖುಲ್ಲಾ ಜಾಗೆಯನ್ನು ನೋಡಿ ವಿಷ ನೀರಿಗೆ ಹಾಕಿದ್ದಾನೆ. ವಿಷವು ಶೇ. 20 ರಷ್ಟು ಮಾತ್ರ ನೀರಿಗೆ ಹೋಗಿದೆ. ಶೇ. 80 ರಷ್ಟು ಕ್ರಿಮಿನಾಶಕ ಔಷಧಿ ಹೊರಗೆ ಗೋಡೆಗೆ ಹತ್ತಿ ಸೋರಿ ಹೋಗಿದೆ.

ನೀರು ಕುಡಿದ 10 ವಿದ್ಯಾರ್ಥಿಗಳು ಅಸ್ವಸ್ಥ

ಬೆಳಿಗ್ಗೆ 10.30ಕ್ಕೆ ಪ್ರಾರ್ಥನೆ ಮುಗಿದ ಮೇಲೆ ಹುಡುಗರು ಶಾಲೆಗೆ ಹೋಗಿದ್ದಾರೆ. ಅಲ್ಲಿರುವ ಮಕ್ಕಳ ಸಂಖ್ಯೆ 41 ಮಾತ್ರ. ಮಧ್ಯಾಹ್ನ ಹುಡುಗರಿಗೆ ವಿಶ್ರಾಂತಿಗೆ (ಊಟಕ್ಕೆ) ಬಿಟ್ಟಾಗ ಎಲ್ಲ ವಿದ್ಯಾರ್ಥಿಗಳು ಶಾಲೆಯ ಆವರಣಕ್ಕೆ ಬಂದು ನೀರು ಕುಡಿಯಲು ನಾ–ಮುಂದು, ತಾ–ಮುಂದು ಎಂದು ಹೋಗಿ, ಕೆಲವರು ನೀರು ಕುಡಿದ ತಕ್ಷಣ, ಅದರಲ್ಲಿ ಕೆಲವರಿಗೆ ನೀರಿನ ವಾಸನೆ ಬಂದು ಕುಡಿಯದೇ ಪ್ರಧಾನ ಗುರುಗಳಿಗೆ ಹೇಳಿದ್ದಾರೆ. ನೀರು ಕುಡಿದ 10 ಜನ ವಿದ್ಯಾರ್ಥಿಗಳು ಅಸ್ವಸ್ಥರಾದ ತಕ್ಷಣ ಅವರಿಗೆ ಸವದತ್ತಿಯ ಸರಕಾರಿ ದವಾಖಾನೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದಾಗ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆದರೆ ನೀರಿನಲ್ಲಿ ವಿಷ ಬೆರೆಸಿದವರಾರು ಎಂಬುದು ನಿಗೂಡವಾಗಿತ್ತು.

'ನಾನರಿ ಔಷಧಿ ಹಾಕಿದ್ದು'

ಹೂಲಿಕಟ್ಟಿ ಗ್ರಾಮದಲ್ಲಿ ಜನ ಶಾಲೆಗೆ ಹೋಗುವ ಮಕ್ಕಳಿಗೆ ಈ ರೀತಿಯಾದರೆ ಹೇಗೆ ಎಂಬುದು ಚರ್ಚೆ ನಡೆದಿತ್ತು. ಸವದತ್ತಿ ಪೋಲೀಸರು ಮಾತ್ರ ಯಾರಿಗೂ ತಿಳಿಯದ ಹಾಗೆ ಗೌಪ್ಯವಾಗಿ ಪರಿಶೀಲನೆ ನಡೆಸಿದ್ದರು. ಪೊಲೀಸರು ಒಂದು ದಿನ ಡ್ರೆಸ್ ಮೇಲೆ ಬಾರದೆ ಸಾಮಾನ್ಯರಂತೆ ಶಾಲೆಗೆ ಬಂದು 'ಯಾರಪ್ಪ ನೀರು ಕುಡಿದವರು' ಎಂಬ ಚರ್ಚೆ ಮಾಡುತ್ತಾ, ನೀರಿನ ಟ್ಯಾಂಕಿನಲ್ಲಿ ಕ್ರಿಮಿನಾಶಕ ಹಾಕಿದ್ದು ಯಾರಾದರೂ ನೋಡಿದ್ದರೆ ಹೇಳಿ ಎಂದು ಮಕ್ಕಳಿಗೆ ಪುಸಲಾಯಿಸುತ್ತಾ ಕೇಳುತ್ತಿದ್ದ ಸಮಯದಲ್ಲಿ, ಅದರಲ್ಲಿ ಒಬ್ಬ 5ನೇ ತರಗತಿ ಹುಡುಗ ಎದ್ದು ನಿಂತು, 'ಸರ್ ನೀರಿನ ಟ್ಯಾಂಕನ್ಯಾಗ ನಾನರಿ ಔಷಧಿ ಹಾಕಿದ್ದು' ಎಂದು ಹೇಳಿದ. ಪೊಲೀಸರು 'ಹೌದಾ ಯಾರಪ್ಪಾ ನಿನಗೆ ಹೇಳಿದ್ದು' ಎಂದು ಕೇಳಿದಾಗ ವಿಷ ತಂದು ಕೊಟ್ಟವನ ಹೆಸರು ಹೇಳಿದನು. ನೀರಿನಲ್ಲಿ ಔಷಧಿ ಹಾಕು ಅಂತ ನಿನಗೆ ಹೇಳಿದ ವ್ಯಕ್ತಿ ಯಾರು? ಯಾವಾಗ ಹೇಳಿದ ಎಂದು ಮರು ಪ್ರಶ್ನೆ ಹಾಕಿದಾಗ, 'ಸರ ನನಗೆ ಚಾಕಲೇಟ್ ಕೊಟ್ಟರಿ! ರೊಕ್ಕ ಕೊಡತಿವಿ ಅಂದರಿ, ನಾನು ಹೋಗಿ ಟ್ಯಾಂಕ್ ಹತ್ತಿ ಬಾಟಲಿ ಒಳಗ ಇರುವ ಔಷಧಿ ಹಾಕಿನ್ರಿ' ಎಂದು ಹೇಳಿದನು.

ಮುಸ್ಲಿಂ ಪ್ರಧಾನ ಗುರುವನ್ನು ಶಾಲೆಯಿಂದ ಓಡಿಸಲು

ಪೊಲೀಸರಿಗೆ ಅಷ್ಟೇ ಸಾಕು. ಆ ಹುಡುಗನ ಮಾತಿನಿಂದ ಶೋಧ ಪ್ರಾರಂಭಿಸಿದರು. ಹುಡುಗನ ಕೈಯಲ್ಲಿ ಔಷಧಿ ಕೊಟ್ಟ ನೀಚ ಸಾಗರ ಪಾಟೀಲ. ಇವನನ್ನು ಹಿಡಿದ ಮೇಲೆ ಅವನು ಬಾಯಿ ಬಿಟ್ಟಿದ್ದು, ಕೃಷ್ಣಾ ಮಾದರ ಹಾಗೂ ನಾಗನಗೌಡ ಪಾಟೀಲನ ಹೆಸರು. ಇದರಲ್ಲಿ ಸಾಗರ ಪಾಟೀಲ ಎಂಬುವವನು ಶ್ರೀರಾಮ ಸೇನೆಯ ಕಾರ್ಯಕರ್ತ, ಹಿಂದುತ್ವವಾದಿ.

ಈ ಮೂವರು ಕೂಡಿ 15 ದಿನಗಳ ಮೊದಲು ಪ್ಲಾನ್ ಮಾಡಿ, ಮುಸ್ಲಿಂ ಪ್ರಧಾನ ಗುರುಗಳಾದ ಸುಲೇಮಾನ ಗೋರಿನಾಯ್ಕ ಇವರನ್ನು ಶಾಲೆಯಿಂದ ಓಡಿಸಲು (ವರ್ಗಾಯಿಸಲು) ಈ ವಿಷ ನೀರಿನಲ್ಲಿ ಹಾಕಿಸಿದ್ದಾಗಿ ಬಾಯಿ ಬಿಟ್ಟರು. ಆದರೆ ಹೂಲಿಕಟ್ಟಿ ಗ್ರಾಮದಲ್ಲಿ ಎಲ್ಲ ಜನ ಅನ್ಯೋನ್ಯವಾಗಿ ಬಾಳುತ್ತಾರೆ. ಮೊನ್ನೆ ಮೊನ್ನೆ ಮೊಹರಂನಲ್ಲಿ ಎಲ್ಲರೂ ಸೇರಿ ಹಬ್ಬ ಆಚರಿಸಿದ್ದಾರೆ. ಇಂತಹ ಗ್ರಾಮದಲ್ಲಿ ಕೋಮುವಾದಿಗಳು ಇದ್ದಾರೆಂದು ಜನ ಭಯಭೀತರಾಗಿ ಚರ್ಚಿಸುವಂತಾಯಿತು. ಒಟ್ಟಾರೆಯಾಗಿ ಕ್ರಿಮಿನಲ್ ಬುದ್ಧಿಯ ಮೂವರಿಗೆ ಜೈಲಿಗೆ ಅಟ್ಟಿದ್ದಾರೆಂದು ಗ್ರಾಮದ ಜನ ನಿಟ್ಟುಸಿರು ಬಿಟ್ಟಿದ್ದಾರೆ.

ಪ್ರತಿಭಟಿಸಿ ಮನವಿ ಅರ್ಪಿಸಿದೆವು

ದಿನಾಂಕ 2025ರ ಆಗಸ್ಟ್ 5ರಂದು ಸಿಪಿಎಂ ನಿಯೋಗವು ಹೂಲಿಕಟ್ಟಿ ಗ್ರಾಮದ ಶಾಲೆಗೆ ಭೇಟಿ ಕೊಡಲು ಹೋದಾಗ, ಅಲ್ಲಿ ವಾತಾವರಣ ಇನ್ನೂ ತಿಳಿಯಾಗದೆ ಇರುವುದರಿಂದ ನಮಗೆ ಯಾರಿಗೂ ಶಾಲೆಯ ಆವರಣದಲ್ಲಿ ಬಿಡಲಿಲ್ಲ. ನಾವು ಸವದತ್ತಿಗೆ ಹೋಗಿ ನೀರಲ್ಲಿ ವಿಷ ಬೆರೆಸಿದ ನೀತಿ ಪ್ರತಿಭಟಿಸಿ ಮನವಿ ಅರ್ಪಿಸಿದೆವು. ಪಕ್ಷದ ಜಿಲ್ಲಾ ಕಾರ್ಯದರ್ಶಿ ನದಾಫರವರೂ ಸೇರಿದಂತೆ ಪಕ್ಷದ ಸಂಗಾತಿಗಳು ಹೂಲಿಕಟ್ಟಿ ಗ್ರಾಮದ ಶಾಲೆಯ ಹೆಡ್ ಮಾಸ್ತರ ಜೊತೆ ಮಾತನಾಡಿದೆವು. ಅವರ ಮಾತಲ್ಲಿ, ಕಣ್ಣಲ್ಲಿ ಇನ್ನೂ ಗಾಬರಿ ಇದ್ದಿದ್ದು ಕಂಡಿತು. ಫೋಟೋ ನೀಡಲು ನಿರಾಕರಿಸಿದರು. 'ನಾನು ನೌಕರಿ ಮಾಡಾವ ನನ್ನ ಫೋಟೋ ತಗೋಬ್ಯಾಡರಿ ಈ ಸುದ್ದಿ ಈಗಾಗಲೇ ಎಲ್ಲಾ ಕಡೆ ಹಬ್ಬಿದೆ. ಇನ್ನೂ ಏನಾಗುತ್ತೊ ನನಗೆ ಗೊತ್ತಿಲ್ಲ' ಎಂದು ತಡವಡಿಸತ್ತಾ ಮಾತನಾಡಿದರು.

ಸರ್ ನಿಮ್ಮ ಜೊತೆ ಗ್ರಾಮದಲ್ಲಿ ಹೊಂದಾಣಿಕೆ ಇದ್ದಾರೆಯೇ? ಏಕೆ ಈ ರೀತಿಯ ಘಟನೆ ನಡೆಯಿತು ಎಂದು ನಿಯೋಗದಲ್ಲಿರುವ ಸಂಗಾತಿ ಒಬ್ಬರು ಕೇಳಿದಾಗ, ಇಲ್ಲ ಸರ್ ನಾನು ಕಳೆದ 9 ವರ್ಷಗಳಿಂದ ಹೂಲಿಕಟ್ಟಿ ಗ್ರಾಮದಲ್ಲಿ ಹೆಡ್ ಮಾಸ್ತರನಾಗಿ ಕೆಲಸ ಮಾಡುತ್ತಾ ಬಂದಿದ್ದೇನೆ. ಒಂದೂ ದಿನವೂ ಗ್ರಾಮದ ಜನ ನನ್ನ ವಿರುದ್ಧ ಮಾತನಾಡಿಲ್ಲ. ಮೇಲಾಗಿ ನನಗೆ ಬಹಳ ಗೌರವ ಕೊಡುತ್ತಾರೆ! ಹೂಲಿಕಟ್ಟಿ ಗ್ರಾಮದಲ್ಲಿ ಮೊದಲು ಮಕ್ಕಳ ಸಂಖ್ಯೆ 12–13 ಇತ್ತು, ನಾನು ಹೆಡ್ ಮಾಸ್ತರ ಆಗಿ ಬಂದ ಮೇಲೆ ಮಕ್ಕಳ ಸಂಖ್ಯೆ 42 ಆಗಿದೆ. ಇದಕ್ಕೆ ಹೂಲಿಕಟ್ಟಿ ಗ್ರಾಮದ ಜನರು ಸಹಾಯ ಮಾಡಿದ್ದಾರೆ. ಗ್ರಾಮದಲ್ಲಿ ಮುಸ್ಲಿಂ ಕುಟುಂಬಗಳು 2–3 ಮಾತ್ರ. ಅಲ್ಲಿ ಕೋಮುಗಲಭೆ ನಡೆಯುವ ಸಂಭವವೇ ಇಲ್ಲ. ಈ ಘಟನೆಯಿಂದ ಊರಿನ ಹಿರಿಯರು ಏನಪ್ಪ ಈ ರೀತಿಯಾಗಿ ನಮ್ಮ ಊರಿನ ಮರ್ಯಾದಿ ಹೋತ! ಅಂತ ಗುನುಗುತ್ತಿದ್ದಾರೆ.

ದುರ್ಗವ್ವ– ದ್ಯಾಮವ್ವನ ಗುಡಿ ಕಟ್ಟಿಸಿದ್ದಾರೆ

ನಾನು ಹೂಲಿಕಟ್ಟಿ ಗ್ರಾಮಕ್ಕೆ ಹೋಗುವ ಮೊದಲು ಶಾಲೆಯಲ್ಲಿ ಗಣಪತಿ ಇಟ್ಟು ಪೂಜೆ ಮಾಡಿ ಹಬ್ಬ ಆಚರಿಸುತ್ತಿದ್ದರು. ನಾನು ಹೋಗುವ ಒಂದು ವರ್ಷ ಮೊದಲು ಗಣಪತಿ ಇಡುವುದನ್ನ ಬಂದ್ ಮಾಡಿದ್ದರು. ನಾನು ಹೋದ ನಂತರ ಶಾಲೆಯಲ್ಲಿ ಗಣಪತಿ ಮೂರ್ತಿ ಇಟ್ಟು ಪೂಜೆ ಮಾಡಿ ಹಬ್ಬ ಆಚರಿಸಿದ್ದೇನೆ. ಗ್ರಾಮದ ಜನ ಪಾಪ ಮಾಸ್ತರ್ ಮುಸ್ಲಿಂ ಇದ್ದರೂ ಹುಡುಗರ ಸಲುವಾಗಿ ಗಣಪತಿ ಇಟ್ಟು ಹಬ್ಬ ಮಾಡಾಕತ್ಯಾನ ಅಂದರೆ ಮಾಸ್ತರ ಹುಡುಗರಿಗೆ ಒಳ್ಳೆಯ ಪಾಠ ಹೇಳಿದಂಗ ಅಂತಿದ್ದರು. ಅಷ್ಟೇ ಅಲ್ಲ ಹೆಡ್ ಮಾಸ್ತರ್ ಸುಲೇಮಾನ ಗೋರಿನಾಯ್ಕ ಗ್ರಾಮದಲ್ಲಿ ದುರ್ಗವ್ವ–ದ್ಯಾಮವ್ವನ ಗುಡಿ ಕಟ್ಟಿಸಿದ್ದಾರೆ. ಇಂತಹ ಜಾತ್ಯಾತೀತ ಮಾಸ್ತರನ ಊರಿಂದ ಹೊರ ಹಾಕಲಿಕ್ಕೆ ಸಾಗರ ಪಾಟೀಲ, ನಾಗನಗೌಡ ಪಾಟೀಲ, ಕೃಷ್ಣಾ ಮಾದರ ಇವರು ನೀಚ ಕೆಲಸ ಮಾಡ್ಯಾರ ಅಂದರ, ದೇವರ ಹೆಂಗ ಬಿಡತಾನ? ಏನ ಅವರಿಗೆ ಜೈಲು ಶಿಕ್ಷೆ ಆತು! ಅಂತ ಮಾತನಾಡುತಾರೆ ಎಂದು ಹೂಲಿಕಟ್ಟಿ ಗ್ರಾಮದ ಮುಸ್ಲಿಂ ಹೆಡ್ ಮಾಸ್ತರ ಸುಲೇಮಾನ ಗೋರಿನಾಯ್ಕ ನಮಗೆ ವಿಷಯ ತಿಳಿಸಿದರು.

ಒಟ್ಟಾರೆಯಾಗಿ ಶ್ರೀರಾಮ ಸೇನೆಯ ಕಾರ್ಯಕರ್ತರು (ಸಾಗರ ಪಾಟೀಲ, ಕೃಷ್ಣಾ ಮಾದರ, ನಾಗನಗೌಡ ಪಾಟೀಲ) ಮುಸ್ಲಿಂ ಹೆಡ್ ಮಾಸ್ತರನನ್ನು ಶಾಲೆಯಿಂದ ಓಡಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವ ದುಷ್ಟ ವಿಚಾರದಿಂದ ನೀರಿನಲ್ಲಿ ವಿಷ ಬೆರೆಸಿ ಮಕ್ಕಳನ್ನ ಅಸ್ತವ್ಯಸ್ತ ಮಾಡುವ ನೀಚ ಕೆಲಸಕ್ಕೆ ಕೈ ಹಾಕಿ ತಾವೇ ತೋಡಿದ ಖೆಡ್ಡಾದಲ್ಲಿ ಬಿದ್ದಿದ್ದಾರೆ. ಈಡೀ ರಾಜ್ಯದಲ್ಲಿ ಈ ಘಟನೆಯ ಕುರಿತು ಚರ್ಚೆಗಳು ನಡೆದಿವೆ. ಇದೇ ಕೆಲಸ ಮುಸ್ಲಿಂ ಮಾಡಿದ್ದರೆ ಪ್ರಮೋದ ಮುತಾಲಿಕ್ ರಾಜ್ಯದಲ್ಲಿ ಎಲ್ಲಾ ಕಡೆ ಬೊಬ್ಬೆ ಹೊಡೆಯುತ್ತಿದ್ದರು. ಈಗ ಅವರ ಸಂಘಟನೆಯ ಕಾರ್ಯಕರ್ತರೇ ಈ ನೀಚ ಕೆಲಸ ಮಾಡಿದ್ದಾರೆ. ಬಹುಶಃ ಮುತಾಲಿಕ್ ಅವರ ಕೈವಾಡವೂ ಇರಬಹುದೇ? ಕೂಡಲೇ ರಾಮ ಸೇನೆ ನಿಷೇದ ಮಾಡಿ ಎಂದು ಬೆಳಗಾವಿ ಜಿಲ್ಲೆಯಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ. ಇದನ್ನರಿತ ಮೇಲೆಯೆ ಹೂಲಿಕಟ್ಟಿ ಗ್ರಾಮದಲ್ಲಿ ನಡೆದ ಘಟನೆಯಲ್ಲಿ ಬಂಧಿಯಾಗಿರುವ ಮೂವರು ನಮ್ಮ ಕಾರ್ಯಕರ್ತರಲ್ಲ, ಅವರಿಗೆ ಗಲ್ಲು ಶಿಕ್ಷೆ ಕೊಡಿ ಎಂದು ನಾಚಿಕೆಬಿಟ್ಟು ಮುತಾಲಿಕ್ ಹೇಳುತ್ತಿದ್ದಾರೆ.

‘ಒಂದು ಬೆಳಕಿನ ದೀಪ ಕ್ಯೂಬಾದ ಭೂಪಟ’



‘ಪ್ರೀತಿಯ ಫಿಡೆಲ್... 100ರ ನೆನಪು – ಒಂದು ಪ್ರೀತಿಯ ಸಮಾರಂಭ’ದಲ್ಲಿ ಸಂವಾದ, ಹಾಡು, ಕವಿತೆ ವಾಚನ, ಪುಸ್ತಕಗಳ ಬಿಡುಗಡೆ, ಛಾಯ ಚಿತ್ರ ಪದರ್ಶನ

ವರದಿ: **ಆರ್. ರಾಮಕೃಷ್ಣ**

ಅಂತರರಾಷ್ಟ್ರೀಯ ಸೌಹಾರ್ದತೆ–ಮಾನವೀಯ ಸಹಾಯಕ್ಕೆ ಹೆಸರಾದ, ಕ್ಯೂಬಾದ ಕ್ರಾಂತಿಯ ನಾಯಕ ಫಿಡೆಲ್ ಕ್ಯಾಸ್ಟ್ರೋ ಅವರ ನೂರನೇ ಜನ್ಮದಿನದ (ಆಗಸ್ಟ್ 13, 1926) ವರ್ಷಾಚರಣೆಯ (ಆಗಸ್ಟ್ 2025 ರಿಂದ ಆಗಸ್ಟ್ 2026) ಆರಂಭದ ಕಾರ್ಯಕ್ರಮವಾಗಿ ಆಗಸ್ಟ್ 12ರಂದು ‘ಪ್ರೀತಿಯ ಫಿಡೆಲ್... 100ರ ನೆನಪು ಒಂದು ಪ್ರೀತಿಯ ಸಮಾರಂಭ’ ನಡೆಯಿತು. ಬೆಂಗಳೂರಿನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ, ಅಮೆರಿಕದ ಕ್ರೂರ ಅಮಾನವೀಯ ದಿಗ್ಬಂಧನದಿಂದ ಸಂಕಷ್ಟಕ್ಕೆ ಸಿಲುಕಿರುವ ಕ್ಯೂಬಾದ ನೆರವಿಗೆ ನಿಲ್ಲುವ ಮಹತ್ವದ ಘೋಷಣೆಯೊಂದಿಗೆ ಹಾಗು ಕ್ಯೂಬಾಕ್ಕೆ ಭೇಟಿ ನೀಡಿ ಅಲ್ಲಿನ ಜನರ ಬದುಕನ್ನು ಕಂಡಿರುವ ಕವಿ–ಸಾಹಿತಿ–ಚಿಂತಕರೊಂದಿಗೆ ಸಂವಾದ, ಹಾಡುಗಳು, ಕವನ ವಾಚನ, ಚಿತ್ರ ರಚನೆ, ಛಾಯಾಚಿತ್ರ ಪ್ರದರ್ಶನದ ಮೂಲಕ ನಡೆಯಿತು.

ಕ್ಯೂಬಾ ಸೌಹಾರ್ದ ಸಮಿತಿಯ ಕೆ.ಮಹಾಂತೇಶ್ ಮಾತನಾಡಿ, ಅಮೆರಿಕದ ಕ್ರೂರ ದಿಗ್ಬಂಧನದಿಂದ ಕ್ಯೂಬಾದಲ್ಲಿ ಶೈಕ್ಷಣಿಕ ಸಾಮಾಗ್ರಿಗಳು, ಜನರಿಗೆ ಔಷಧಗಳು, ರೈತರಿಗೆ ವಿದ್ಯುತ್ ಉಪಕರಣಗಳು ಸಿಗದಂತಾಗಿದೆ. ಫಿಡೆಲ್‌ರನ್ನು ಕೊಲ್ಲಲು ಅಮೆರಿಕ 637 ಬಾರಿ ಹತ್ಯಾ ಯತ್ನಮಾಡಿ ವಿಫಲವಾಗಿದೆ. ಎಂತಹ ಸಂಕಷ್ಟದಲ್ಲೂ ‘ಸಮಾಜವಾದ ಇಲ್ಲವೇ ಸಾವು’ ಎಂಬ ಘೋಷಣೆಗೆ ಬದ್ಧವಾದವರು ಕ್ಯೂಬಾದ ಜನರು ಎಂದರು.

ಆರ್ಥಿಕ ದಿಗ್ಬಂಧನ– ಉಸಿರುಗಟ್ಟಿ ಸಾಯಿಸುವಿಕೆ.

ಹಿರಿಯ ಪತ್ರಕರ್ತರು, ಕವಿಗಳೂ ಆದ ಜಿ.ಎನ್.ಮೋಹನ್ ಕ್ಯೂಬಾಕ್ಕೆ ಭೇಟಿ ನೀಡಿದ ಗಣ್ಯರೊಂದಿಗಿನ ಸಂವಾದವನ್ನು ನಡೆಸಿಕೊಡುತ್ತಾ ತಮ್ಮ ಮಾತುಗಳನ್ನು ಹಂಚಿಕೊಂಡರು. ‘ಒಂದು ಬೆಳಕಿನ ದೀಪ ಬೇಕು ಎಂದೆ, ಅವರು ಕ್ಯೂಬಾದ ಭೂಪಟ ನೀಡಿದರು’ ಎಂದು ತಮ್ಮ ಕವಿತೆಯನ್ನು ಓದಿದ ಮೋಹನ್ ‘ಸಿ ಫಾರ್’ ಎಂದರೆ, ಕ್ಯೂಬಾ, ಕ್ಯಾಸ್ಟ್ರೋ, ಚೇ. ಈ ಮೂರು ‘ಸಿ’ಗಳನ್ನು ಮರೆಯಲಾಗದು ಎಂದರು. “ಸೌಹಾರ್ದತೆ’ ಎನ್ನುವುದು ರಕ್ತದಾನದಂತೆ, ಅದಕ್ಕೆ ನಾಸ್ತಿಕ, ಆಸ್ತಿಕ, ಕಪ್ಪು ಜನರು– ಬಿಳಿ ಜನರು, ಶ್ರೀಮಂತ–ಬಡವ ಎಂಬ ಬೇಧ ಇರುವುದಿಲ್ಲ’ ಎಂಬ ಫಿಡೆಲ್ಲರ ಮಾತನ್ನು ಉಲ್ಲೇಖಿಸಿದ ಮೋಹನ್, 90ರ ದಶಕದಲ್ಲಿ ಭಾರತದಿಂದ ಎಡಪಕ್ಷಗಳ ಮುತುವರ್ಜಿಯಲ್ಲಿ ವಿವಿಧ ರಾಜಕೀಯ ಪಕ್ಷಗಳು, ಜನಚಳುವಳಿಗಳು ಸೇರಿ 10,015 ಟನ್ ಗೋಧಿ ಕಳಿಸಿದ್ದನ್ನು ನೆನಪಿಸಿಕೊಂಡರು. ಕೊಲ್ಕೊತ್ತಾದಿಂದ ಹೊರಟ ಕೆರೆಬಿಯನ್ ಪ್ರಿನ್ಸೆಸ್ ಹಡಗು 37 ದಿನ ಪ್ರಯಾಣಿಸಿ ಭಾರತದ ಗೋಧಿ ಕ್ಯೂಬಾ ತಲುಪಿದಾಗ ಅದನ್ನು ಸ್ವೀಕರಿಸಲು ಖುದ್ದು ಫಿಡೆಲ್ ಕ್ಯಾಸ್ಟ್ರೋ ಬಂದರಿಗೆ ಬರುತ್ತಾರೆ. ನೀವು ಕಳಿಸಿದ ಗೋಧಿ, ಅಮೆರಿಕ ವಿರುದ್ಧದ ಇನ್ನಷ್ಟು ದೃಢವಾಗಿ ನಿಲ್ಲುವಂತೆ ಮಾಡಿದೆ. ನಾವು ಒಬ್ಬಂಟಿಯಲ್ಲ ಎಂಬುದು ಗೊತ್ತಾಗಿದೆ. ಈ ಗೋಧಿಯಿಂದ ನಾವು ನಮ್ಮ ಜನರಿಗೆ ಒಂದು ವಾರ ಅತ್ಯುತ್ತಮ ಬ್ರೆಡ್ ತಯಾರಿಸಿ ಕೊಡುತ್ತೇವೆ. ನೀವು ಕೊಟ್ಟಿದ್ದು 10,015 ಟನ್ ಗೋಧಿ ಮಾತ್ರವಲ್ಲ, ನೀವು 10,015 ಟನ್ ಸೌಹಾರ್ದತೆಯನ್ನು, ಬೆಂಬಲವನ್ನು ಸಹ ಕಳಿಸಿದ್ದೀರಿ.” ಎಂಬ ಫಿಡೆಲ್ ಮಾತುಗಳನ್ನು ಉಲ್ಲೇಖಿಸಿ ಹೇಳಿದರು.

‘ಚೆ’ ಬಗೆಗೆ ಜಗತ್ತಿನಾದ್ಯಂತ ಬರೆದಿರುವ 150 ಕವಿತೆಗಳನ್ನು ಕನ್ನಡಕ್ಕೆ ಅನುವಾದಿಸಿ ಹೊರತರಲಾಗುತ್ತಿದೆ ಎಂದು ಮೋಹನ್ ಇದೇ ಹೇಳಿದರು. ಕ್ಯೂಬಾದ ಉತ್ಸವದಲ್ಲಿ ವಿಯೆಟ್ನಾಂ ಯುವಜನರು ಸಿಕ್ಕಿ, ವಿಯೆಟ್ನಾಮ್ ಮೇಲಿನ ಅಮೆರಿಕದ ಘೋರ ಯುದ್ಧದ ಸಂದರ್ಭದಲ್ಲಿ ಭಾರತದಲ್ಲಿ ಮೊಳಗಿಸಲಾದ ‘ಹಮಾರ ನಾಮ್, ತುಮಾರ ನಾಮ್, ವಿಯೆಟ್ನಾಂ, ವಿಯೆಟ್ನಾಂ’ ಎಂಬ ಹಿಂದಿ ಘೋಷಣೆಯನ್ನು ಪುನರುಚ್ಚರಿಸಿದ್ದನ್ನು, ಪುಟ್ಟ ವಿಯೆಟ್ನಾಂ ದೇಶ ದೈತ್ಯ ಅಮೆರಿಕವನ್ನು ಮಣಿಸಿದ ಕುರಿತು ‘ಆನೆಯನ್ನು ಮಣಿಸಿದ ಮಿಡತೆಗಳು’ ಎಂಬ ಮಾತು, ಭಾರತದಲ್ಲಿ ಹೋ ಚಿ ಮಿನ್ ಪ್ರತಿಮೆಯನ್ನು ಸ್ಥಾಪಿಸಿ ಸೌಹಾರ್ದ ಬೆಂಬಲ ಕೊಟ್ಟಿದ್ದು ಎಲ್ಲರ ಮನಸ್ಸಿನಲ್ಲಿದೆ ಎಂದು ಹೇಳಿದ್ದನ್ನು ನೆನಪಿಸಿಕೊಂಡರು.

‘ಹೊಸತು’ ಪತ್ರಿಕೆಯ ಸಂಪಾದಕರಾದ ಸಿದ್ಧನಗೌಡ ಪಾಟೀಲ್ ಅವರು ಮಾತನಾಡಿ, 1996ರಲ್ಲಿ ಅಂತರರಾಷ್ಟ್ರೀಯ ವಿದ್ಯಾರ್ಥಿ–ಯುವಜನರ ಉತ್ಸವಕ್ಕೆಂದು ನಾವು ಕ್ಯೂಬಾಗೆ ಹೋಗುವ ಸಂದರ್ಭದಲ್ಲಿ ಅಮೆರಿಕದವರು ಕ್ಯೂಬಾದ ವಿಮಾನಗಳನ್ನು ಹೊಡೆದು ಪತನಗೊಳಿಸಿದ್ದಾರೆ ಎಂಬ ಸುದ್ದಿಗಳನ್ನು ಹರಡಿ, ಜನರು ಬರದಂತೆ ಮಾಡಲು ಪ್ರಯತ್ನಿಸಿದ ಅಮೆರಿಕದ ಪಿತೂರಿಯನ್ನು ನೆನಪಿಸಿಕೊಂಡರು.

ಉಚಿತ ವೈದ್ಯಕೀಯ ಶಿಕ್ಷಣ

ಇನ್‌ಸ್ಟಿಟ್ಯೂಟ್ ಆಫ್ ಸ್ಪ್ಯಾನಿಷ್ ಸ್ಟಡೀಸ್‌ನ ನಿರ್ದೇಶಕರಾದ ರಂಜಿತ್ ಕುಮಾರ್ ಮಾತನಾಡಿ, ‘ಲ್ಯಾಟಿನ್ ಅಮೆರಿಕನ್ ಸ್ಕೂಲ್ ಆಫ್ ಮೆಡಿಸಿನ್’ನಲ್ಲಿ ಅಮೆರಿಕದ ವಿದ್ಯಾರ್ಥಿಗಳು ಸೇರಿದಂತೆ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಲಾಗುತ್ತಿದ್ದು, ಜಗತ್ತಿಗೆ ಅಮೋಘ ಕೊಡುಗೆ ನೀಡಿದೆ. ಹಾಗೆಯೇ ಪ್ಯಾಲಿಸ್ಟೈನ್ ಹಾಗೂ ವೆನೆಜುವೆಲಾಗಳ ಕ್ರಾಂತಿಕಾರಿ ಹೋರಾಟಗಳ ಸ್ಫೂರ್ತಿಯನ್ನು ರಕ್ಷಿಸಲು ಕ್ಯೂಬಾದ ಜನತೆ ಕೆಲಸ ಮಾಡುತ್ತಿದ್ದಾರೆ ಎಂದರು.

‘ಕ್ಯೂಬಾ ತನ್ನತನ ಉಳಿಸಿಕೊಳ್ಳಲು ಹೋರಾಡುತ್ತಿದೆ’

ಕೇಂದ್ರ ಸಾಹಿತ್ಯ ಅಕಾಡೆಮಿಯ ಮೂಲಕ ಸಾಹಿತ್ಯದ ವಿಚಾರವಾಗಿ ಕ್ಯೂಬಾಕ್ಕೆ ಹೋಗಿ ಬಂದ ಕವಿಯತ್ರಿ ಮಮತ ಸಾಗರ್ ತಮ್ಮ ನೆನಪುಗಳನ್ನು ಹಂಚಿಕೊಂಡರು. ತನ್ನ ಸ್ವಂತ ದೇಶವಾದ ಅಮೆರಿಕವನ್ನು ತೊರೆದು, ಕ್ಯೂಬಾವೇ ನನ್ನ ದೇಶ ಎಂದು ಅಲ್ಲಿಯೇ ಬಾಳಿದ ಜಗದ್ವಿಖ್ಯಾತ ಸಾಹಿತಿ ಹೆಮ್ಮಿಗ್ವೆ ಬಾಳಿ ಬದುಕಿದ ಸಮುದ್ರ ತೀರ, ಮನೆ, ಅಲ್ಲಿನ ಹೆಮ್ಮಿಗ್ವೆಯ ಶಿಲ್ಪ ಎಲ್ಲವನ್ನು ಕಂಡ ಪುಳಕದ ಕ್ಷಣಗಳ ವಿವರಗಳು ಸಂವಾದದಲ್ಲಿ ಅನುರಣನಗೊಂಡವು. ಕ್ಯೂಬಾ ತನ್ನತನ ಉಳಿಸಿಕೊಳ್ಳಲು ಹೋರಾಡುತ್ತಿದೆ. ಪುಟ್ಟ ಮೆಣಸಿಕಾಯಿಯಂತಹ ಆಕಾರದ್ದು ಕ್ಯೂಬಾ, ಖಾರವು ಹೆಚ್ಚು ಎಂದು ಮಮತ ಹೇಳಿದರು.

ಪುಸ್ತಕಕ್ಕೂ ಹೊಲ–ಕಾರ್ಖಾನೆಗಳ ದುಡಿಮೆಗೂ ಸಂಬಂಧ

ಜನ ವೈದ್ಯರಾದ ಡಾ. ಅನಿಲ್ ಕುಮಾರ್ ಮಾತನಾಡಿ, ಕ್ಯೂಬಾದಲ್ಲಿ ಎಲ್ಲರಿಗೂ ಉಚಿತ ಶಿಕ್ಷಣ ಇದೆ, ‘ನೆರೆ ಹೊರೆ’ ಶಾಲಾ ವ್ಯವಸ್ಥೆ ಇದೆ. ಪುಸ್ತಕಕ್ಕೂ, ಹೊಲ ಗದ್ದೆ, ಕಾರ್ಖಾನೆಗಳ ದುಡಿಮೆಗೂ, ಶಿಕ್ಷಣಕ್ಕೂ ಸಂಬಂಧವಿರುವ ಉತ್ತಮ ಶೈಕ್ಷಣಿಕ ವ್ಯವಸ್ಥೆ ಅದು. ಗಣಿತದಲ್ಲಿ ಕೋನಗಳ ಬಗೆಗೆ ಕಲಿಸಲು ಮರಗೆಲಸದ ಬಡಗಿಗಳೊಂದಿಗೆ ವಿದ್ಯಾರ್ಥಿಗಳಿಗೆ ಸಂಬಂಧ ಕಲ್ಪಿಸಲಾಗಿದೆ. ನಮ್ಮಲ್ಲಿ ಅಕ್ಬರ್, ಅಶೋಕ ಎಂಬ ವ್ಯಕ್ತಿಗಳನ್ನು ಇತಿಹಾಸ ಎಂದು ಕಲಿಸಲಾಗುತ್ತದೆ. ಆದರೆ ಕ್ಯೂಬಾದಲ್ಲಿ ಇತಿಹಾಸ ಎಂದರೆ ಶೋಷಣೆ ಯಾರು ಮಾಡುತ್ತಿದ್ದರು, ಅದರ ವಿರುದ್ಧ ಯಾರು ಹೋರಾಟ ಮಾಡುತ್ತಿದ್ದರು ಎಂಬುದನ್ನು ಕಲಿಸಲಾಗುತ್ತದೆ. ಹೀಗಾಗಿ ಶೋಷಣಾಮುಕ್ತ ಸಮಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ ‘ಏನೇ ಆಗಲಿ ನಮ್ಮ ಕ್ರಾಂತಿಯನ್ನು ಉಳಿಸಿಕೊಳ್ಳಬೇಕು.’ ಎಂಬ ಭಾವನೆ ಕ್ಯೂಬಾ ಜನರಲ್ಲಿದೆ ಎಂದು ವಿವರಿಸಿದರು.

‘ಫಿಡೆಲ್’ರನ್ನು ಬರೆದ ಗುಜ್ಜಾರ್...

ಸಾಂಸ್ಕೃತಿಕ ರಂಗು–ಗುಂಗು

ಹಿರಿಯ ಚಿತ್ರ ಕಲಾವಿದ ಬಿ.ಜಿ.ಗುಜ್ಜಾರಪ್ಪ ಅವರು ಫಿಡೆಲ್ ಕ್ಯಾಸ್ಟ್ರೋ ಅವರ ರೇಖಾ ಚಿತ್ರವನ್ನು ಸ್ಥಳದಲ್ಲೇ ಅದೂ ಕೇವಲ ನಾಲ್ಕು ನಿಮಿಷಗಳಲ್ಲಿ ಬಿಡಿಸಿ ಕಾರ್ಯಕ್ರಮಕ್ಕೆ ಹೊಸ ಹುರುಪು ತಂದರು. ಡಾ. ಕೆ.ಪ್ರಕಾಶ್ ಅನುವಾದಿಸಿರುವ ಕ್ಯಾಸ್ಟ್ರೋ ಕತೆ, ಹಾಗೂ ಜಿ.ಎನ್.ಮೋಹನ್ ಅವರ ‘ನನ್ನೊಳಗಿನ ಹಾಡು ಕ್ಯೂಬಾ’ ಪುಸ್ತಕದ ತಮಿಳು ಹಾಗೂ ತೆಲುಗು ಅನುವಾದಗಳ ಬಿಡುಗಡೆ ಸಹ ನಡೆಯಿತು.

ಈ ಸಂದರ್ಭದಲ್ಲಿ, ಫಿಡೆಲ್ ಕ್ಯಾಸ್ಟ್ರೋ ಅವರೊಂದಿಗೆ ಕ್ಯೂಬಾದ ನೆಲದಲ್ಲಿ ನಡೆದಾಡಿದ ಹಿರಿಮೆ ಹೊಂದಿರುವ ಇ.ಪಿ.ಮೆನನ್ ಅವರು ಫಿಡೆಲ್ ಕ್ಯಾಸ್ಟ್ರೋ ಕುರಿತ ಶುಭಾಶಯ ಪತ್ರಗಳ ಬಿಡುಗಡೆ ಮಾಡಿದರು. ಇ.ಪಿ.ಮೆನನ್ ಅವರು, ತಾವು 30 ವರ್ಷದ ಯುವಕರಾಗಿದ್ದಾಗ ಫಿಡೆಲ್ ಕ್ಯಾಸ್ಟ್ರೋ ಅವರ ಜೊತೆ ಕ್ಯೂಬಾದ ಪರ್ವತಗಳನ್ನು ಹತ್ತಿದ ಘಟನಾವಳಿಗಳನ್ನು ನೆನಪಿಸಿಕೊಂಡರು. ಬೆಟ್ಟದ ಮೇಲೆ ಮರದ ನೆರಳಲ್ಲಿ ಕುಳಿತು ಏಷ್ಯಾದ ಯುವಜನರೊಡನೆ ಚರ್ಚಿಸಿದ ಫಿಡೆಲ್, ನಮ್ಮ ಸಲಹೆಯನ್ನು ಕೇಳಿ, ಆ ಸಲಹೆಯಂತೆ ಆಗ ಚೀನಾದಿಂದ ಕ್ಯೂಬಾಕ್ಕೆ ಬರುತ್ತಿದ್ದ 15,000 ಟನ್ ಅಕ್ಕಿಯನ್ನು, ಅಮೆರಿಕದ ಘೋರ ಆಕ್ರಮಣವನ್ನು ಎದುರಿಸಿ ಹೋರಾಡುತ್ತಿದ್ದ ವಿಯೆಟ್ನಾಮ್ ದೇಶಕ್ಕೆ ಕಳಿಸುವ ತೀರ್ಮಾನ ಕೈಗೊಂಡರು. ಅದನ್ನು 25,000 ಜನರಿದ್ದ ಸಭೆಯಲ್ಲಿ ಘೋಷಿಸಿದ್ದರ ಕುರಿತು ಮೆನನ್ ವಿವರಿಸಿದರು.

‘ಗ್ವಂತನ ಮೇರಾ’ ಹಾಡು–ಕವನ

ಇನ್‌ಸ್ಟಿಟ್ಯೂಟ್ ಆಫ್ ಸ್ಪ್ಯಾನಿಷ್ ಸ್ಟಡೀಸ್‌ನ ವಿದ್ಯಾರ್ಥಿಗಳು ‘ಗ್ವಂತನ ಮೇರಾ’ ಹಾಡನ್ನು, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ಲಕ್ಷ್ಮಿಯವರು ಜನಾರ್ಧನ ಕೆಸರಗದ್ದೆಯವರು ಬರೆದ –ಜಗತ್ತಿನ ಯಾವುದೇ ಮೂಲೆಯಲ್ಲಿ ನಡೆಯುವ ಅನ್ಯಾಯವನ್ನು ಪ್ರತಿಭಟಿಸುವೆಯಾದರೆ, ನೀನು ನನ್ನ ಸಂಗಾತಿ– ಎಂಬ ಆಶಯದ ಕ್ರಾಂತಿಗೀತೆ ಹಾಡಿದರು. ಡಾ. ವಸುಂಧರಾ ಭೂಪತಿ, ಎಚ್.ಆರ್.ಸುಜಾತಾ, ಕೆ.ಮಹಾಂತೇಶ್, ಬೇಲೂರು ರಘುನಂದನ್ ತಮ್ಮ ಕವನಗಳನ್ನು ಓದಿದರು.

ಸಮಾರೋಪ: ಕೆ.ಎಸ್.ವಿಮಲ ಅವರು ಮಾತನಾಡಿ, ಕೊರೊನ ಸಮಯದಲ್ಲಿ ಕಷ್ಟಗಳ ನಡುವೆ ಜಗತ್ತಿನ 40ಕ್ಕೂ ಹೆಚ್ಚು ದೇಶಗಳಿಗೆ ವೈದ್ಯರನ್ನು, ದಾದಿಯರನ್ನು ಕಳಿಸಿ ಸಹಾಯ ಹಸ್ತ ಚಾಚಿದ ದೇಶ ಕ್ಯೂಬಾ, ಅಮೆರಿಕದ ದಿಗ್ಬಂಧನದಿಂದ ‘ಸಿರಿಂಜ್’ ಇಲ್ಲದ ಪರಿಸ್ಥಿತಿ ಉಂಟಾಗಿ ವ್ಯಾಕ್ಸಿನ್‌ಗಳನ್ನು ಕೊಡುವುದು ಕಷ್ಟವಾದಾಗ, ಮೂಗಿನ ಮೂಲಕ ಹಾಕುವ ವ್ಯಾಕ್ಸಿನ್ ಅನ್ನು ಕಂಡು ಹಿಡಿದು ವೈದ್ಯಕೀಯ ಜಗತ್ತಿಗೆ ಕಾಣಿಕೆ ನೀಡಿದ ದೇಶ ಕ್ಯೂಬಾ. ಮಾತೃ ಮರಣ ತಡೆ, ಶಿಶು ಮರಣ ತಡೆ ಎಲ್ಲದರಲ್ಲೂ ಅಮೆರಿಕ, ಯೂರೋಪ್‌ಗಳಿಗೆ ಸಮನಾದ ಸಾಧನೆಯನ್ನು ಕ್ಯೂಬಾ ಮಾಡಿದೆ ಎಂದು ಹೇಳಿದರು.

ಸಿದ್ಧಮಾದರಿ ನಕಲು ಮಾಡದ ಬಂಡಾಯಗಾರ

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಡಾ. ಕೆ.ಪ್ರಕಾಶ್ ಮಾತನಾಡಿ, ಫಿಡೆಲ್ ಯಾವುದೇ ಸಿದ್ಧ ಮಾದರಿಯನ್ನು ನಕಲು ಮಾಡಿದ ವ್ಯಕ್ತಿಯಲ್ಲ, ಕ್ಯೂಬಾದ ಸನ್ನಿವೇಶಕ್ಕೆ ತಕ್ಕಂತೆ ಕ್ರಾಂತಿಯ ದಾರಿಯ ಮಾದರಿಯನ್ನು ರೂಪಿಸಿದರು. ಗ್ರಾನ್ಮಾ ಎಂಬ 12 ಜನರು ಪ್ರಯಾಣ ಮಾಡಲು ಸಾಧ್ಯವಾಗುವ ಸಾಮರ್ಥ್ಯದ ಪುಟ್ಟ ದೋಣಿಯಲ್ಲಿ 82 ಜನರು ಪ್ರಯಾಣ ನಡೆಸಿದ ಸಾಹಸ, ಸರ್ವಾಧಿಕಾರಿ ಬಟಿಸ್ಟಾ ವಿರುದ್ಧದ ಶಸಸ್ತ್ರ ಹೋರಾಟಗಳಿಂದಲೇ ಕ್ಯೂಬಾದಲ್ಲಿ ಕ್ರಾಂತಿ ಯಶಸ್ವಿಯಾಗಲಿಲ್ಲ. ಕ್ಯೂಬಾದಲ್ಲಿ ನಡೆಯುತ್ತಿದ್ದ ರೈತ–ಕಾರ್ಮಿಕರ ಕ್ರಾಂತಿಕಾರಿ ಹೋರಾಟಗಳು, ಕಮ್ಯೂನಿಸ್ಟ್ ಚಳುವಳಿಯೊಂದಿಗೆ ಫಿಡೆಲ್ ನೇತೃತ್ವದ ಕ್ರಾಂತಿಕಾರಿಗಳಿಗೆ ನಿರಂತರ ಸಂಪರ್ಕ, ಸಮನ್ವಯ ಇದ್ದುದರಿಂದ ಕ್ಯೂಬಾ ಕ್ರಾಂತಿ ಯಶಸ್ವಿಯಾಯಿತು ಎಂದು ವಿವರಿಸಿದರು.

ಕ್ಯೂಬಾದ ಜೊತೆಗೆ ವ್ಯಾಪಾರ–ವ್ಯವಹಾರ ಮಾಡುವ ಯಾವ ದೇಶಗಳೊಂದಿಗೂ ತಾನು ವ್ಯಾಪಾರ ವ್ಯವಹಾರ ಮಾಡುವುದಿಲ್ಲ, ದಿಗ್ಬಂಧನ ವಿಧಿಸುತ್ತೇನೆ ಎನ್ನುವ ಅಮೆರಿಕದ ಧೋರಣೆ ಬಹಳ ಕ್ರೂರವಾಗಿದ್ದು, ಹೆಲ್ಮ್ಸ್–ಬರ್ಟ್‌ನ್ ಕಾಯ್ದೆ, ಟೋರಿ ಸೆಲ್ಲಿ ಕಾಯ್ದೆ ಮುಂತಾದ ಕಾಯ್ದೆಗಳ ಮೂಲಕ ಕ್ಯೂಬಾದಲ್ಲಿ ಆಂತರಿಕ ದಂಗೆ ಪ್ರಚೋದನೆ ಮಾಡಲು ಅಮೆರಿಕ ಪ್ರಯತ್ನಿಸುತ್ತಿದೆ. ಈಗಿನ ಅಮೆರಿಕದ ಅಧ್ಯಕ್ಷ ಟ್ರಂಪ್ ಧೋರಣೆ ಸಹ ಕ್ಯೂಬಾ, ಭಾರತ ಸೇರಿದಂತೆ ಮತ್ತು ಜಗತ್ತಿಗೆ ಮಾರಕವಾಗಿದೆ ಎಂದು ವಿವರಿಸಿದರು.

ಸೌಹಾರ್ದ ನಿಧಿ ಸಂಗ್ರಹ

ಸಮಾರಂಭದಲ್ಲಿ ಕ್ಯೂಬಾ ಸೌಹಾರ್ದ ನಿಧಿಯನ್ನು ಸಂಗ್ರಹಿಸಲಾಯಿತು. ಶುಭಾಶಯ ಪತ್ರಗಳ ಉತ್ಸಾಹದ ಖರೀದಿಯೂ ನಡೆಯಿತು.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ರಾಜ್ಯ ಅಧ್ಯಕ್ಷೆ ಲವಿತ್ರ ವಸ್ತ್ರದ್ ಅವರು ಆರಂಭದಲ್ಲಿ ಸ್ವಾಗತ ಕೋರಿದರು. ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಟಿ.ಎಸ್.ವಿಜಯ್ ಕುಮಾರ್ ಕಾರ್ಯಕ್ರಮ ನಿರೂಪಣೆ ಮಾಡಿದರು. ಸೌಹಾರ್ದ ಕರ್ನಾಟಕದ ಆರ್.ರಾಮಕೃಷ್ಣ ವಂದನಾರ್ಪಣೆ ಸಲ್ಲಿಸಿದರು. ●

ರಾಯಚೂರು ಜಿಲ್ಲೆಯಲ್ಲಿ ಸಿಪಿಐಎಂ ನ 50ನೇ ವರ್ಷಾಚರಣೆ

ರಾಯಚೂರು ಜಿಲ್ಲೆಯಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ತನ್ನ ಕಾರ್ಯಚಟುವಟಿಕೆ ಆರಂಬಿಸಿ ಜುಲೈ 22ಕ್ಕೆ 50 ವರ್ಷ ತುಂಬಿದೆ. ಈ ಸಂದರ್ಭದಲ್ಲಿ 2025ರ ಅಗಸ್ಟ್ 9ರಂದು ರಾಯಚೂರಿನಲ್ಲಿ ಸಿಪಿಐ(ಎಂ)–50ರ ವರ್ಷಾಚರಣೆಯ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಜಿಲ್ಲೆಯಲ್ಲಿ ಪಕ್ಷದ ಆರಂಭ, ಅದರ ಕಾರ್ಯಚಟುವಟಿಕೆಗಳು, ಸಾಮೂಹಿಕ ಸಂಘಟನೆಗಳು, ಹೋರಾಟಗಳು, ಗೆಲವುಗಳು ಮತ್ತು ಪಕ್ಷದ ಬೆಳವಣಿಗೆಗೆ ಶ್ರಮಿಸಿದ ಸಂಗಾತಿಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಲಾಯಿತು. ಹಳೆಯ ನೆನಪುಗಳನ್ನು ಅನುಭವವಾಗಿ ಪಡೆದುಕೊಂಡು, ಮುಂದೆ ಜಿಲ್ಲೆಯಲ್ಲಿ ಅತ್ಯುತ್ತಮ ಚಳುವಳಿ ರೂಪಿಸಲು ಎಲ್ಲರೂ ಜೊತೆಗೂಡಿ ನಡೆಯಲು ನಿರ್ಧರಿಸಲಾಯ್ತು.



ರಾಯಚೂರು ಜಿಲ್ಲೆಯಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–[ಸಿಪಿಐಎಂ] ತನ್ನ ಕಾರ್ಯಚಟುವಟಿಕೆ ಆರಂಬಿಸಿ ಜುಲೈ 22ಕ್ಕೆ 50 ವರ್ಷ ತುಂಬಿದೆ. 2025ರ ಅಗಸ್ಟ್ 9ರಂದು ರಾಯಚೂರಿನ ಮಡಿವಾಳ ಮಾಚಿದೇವ ಸಭಾಭವನದಲ್ಲಿ ಸಿಪಿಐ(ಎಂ)–50ರ ವರ್ಷಾಚರಣೆಯ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ಮಾತುಗಳನ್ನಾಡಿದ ಎಸ್.ದೇವೇಂದ್ರಗೌಡ ಅವರು, “ಭಾರತಕ್ಕೆ 1947ರ ಅಗಸ್ಟ್ 15ರಂದು ಸ್ವಾಂತತ್ರ್ಯ ಸಿಕ್ಕಿತು. ಆದರೆ, ರಾಯಚೂರು ಜಿಲ್ಲೆ ಒಳಗೊಂಡ ಹೈದ್ರಾಬಾದ ಕರ್ನಾಟಕಕ್ಕೆ ಒಂದು ವರ್ಷದ ನಂತರ, ಅಂದರೆ, 1948ರ ಸೆಪ್ಟೆಂಬರ್ 17ರಂದು ಸ್ವಾತಂತ್ರ್ಯ ಸಿಕ್ಕಿತು. ಮೊದಲಿನ ಬ್ರಿಟಿಷರ ಆಳ್ವಿಕೆ. ನಿಜಾಮಶಾಹಿ ಆಡಳಿತದಲ್ಲಿ ನೊಂದು ಬೆಂದು ಹೋದ ರಾಯಚೂರಿನ ಜನಕ್ಕೆ ಸಿಕ್ಕ ಸ್ವಾತಂತ್ರ್ಯದಿಂದ ಕೆಲವರಿಗೆ ರಾಜಕೀಯ ಸ್ಥಾನಮಾನ ದೊರತವೆ ಹೊರತು, ದುಡಿಯುವ ಜನರ ಬದುಕಿನಲ್ಲಿ ಯಾವ ಬದಲಾವಣೆಯನ್ನು ಕಾಣಲು ಸಾಧ್ಯವಾಗಿರಲಿಲ್ಲ. ಮೊದಲಿನಿಂದಲೂ ನಮ್ಮನ್ನಾಳಿದವರು ಭೂಮಾಲಿಕ ವರ್ಗ. ಅವರ ವಿರುದ್ದ ಧ್ವನಿ ಎತ್ತಲೂ ಸಾಧ್ಯವಿಲ್ಲದ ಸ್ಥಿತಿ ಜಿಲ್ಲೆಯಲ್ಲಿತ್ತು. ಬಡತನ, ಅಸಮಾನತೆ, ನಿರುದ್ಯೋಗ, ಕಾರ್ಮಿಕರು ಮತ್ತು ರೈತರ ಸಮಸ್ಯೆಗಳಿಗೆ ಹೋರಾಟಗಳು ನಡೆದಿರಲಿಲ್ಲವೆಂದೇ ಹೇಳಬಹುದು. ಇಂತಹ ಸ್ಥಿತಿಯಲ್ಲಿ ಸಿಪಿಐ(ಎಂ) ತನ್ನ ಸಾಮೂಹಿಕ ಸಂಘಟನೆಗಳ ಮೂಲಕ ಸಾಮಾಜಿಕ, ಆರ್ಥಿಕ ಹೋರಾಟಗಳಿಗೆ ವೇದಿಕೆ ನಿರ್ಮಿಸಿತು” ಎಂದರು.

ಜಿಲ್ಲೆಯಲ್ಲಿ ಪಕ್ಷವು ಈ 50 ವರ್ಷದಲ್ಲಿ ಹಲವು ಮಹತ್ವರವಾದ ಹೋರಾಟಗಳನ್ನು ಮಾಡಿದೆ. ವಿಶೇಷವಾಗಿ ಹಲವು ಹಳ್ಳಿಗಳಲ್ಲಿ ಹಾಗೂ ನಗರ ಪ್ರದೇಶಗಳಲ್ಲಿ ಭೂರಹಿತರಿಗೆ ಭೂಮಿ ಹಾಗೂ ವಸತಿ ರಹಿತರಿಗೆ ವಸತಿ ಕಲ್ಪಿಸುವಲ್ಲಿ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳ ಪಾತ್ರ ಇದೆ. ನಾವು ಹಿಂದೆ ತಿರುಗಿ ಆ ಹೋರಾಟಗಳನ್ನು ಮೆಲುಕು ಹಾಕುವುದು ಮತ್ತು ಆ ಮಹತ್ವದ ಹೋರಾಟಗಳ ಇತಿಹಾಸ ತಿಳಿಯುತ್ತಾ, ನಮ್ಮ ಮುಂದಿನ ಹೆಜ್ಜೆಯನ್ನು ಘಟ್ಟಿಯಾಗಿ ನೆಲೆಯೂರಲು ಹಲವು ಮಹತ್ವದ ಕಾರ್ಯಕ್ರಮಗಳನ್ನು, ಹೋರಾಟಗಳನ್ನು ಆಯೋಜಿಸುವುದು ಈ ವರ್ಷಾಚರಣೆಯ ಉದ್ದೇಶವಾಗಿದೆ. ಜೊತೆಗೆ, ಆ ಹೋರಾಟಗಳಲ್ಲಿ ಮಹತ್ತರ ಪಾತ್ರ ವಹಿಸಿದ ಸಂಗಾತಿಗಳನ್ನು ನೆನೆಯುವುದು ಅಗತ್ಯವಿದೆ. ಆಗ ನಮ್ಮೊಂದಿಗಿದ್ದು, ನಂತರ ದೂರವಾಗಿದ್ದರೂ ಪಕ್ಷಕ್ಕೆ ಹಾನಿ ಮಾಡದ ಸಂಗಾತಿಗಳನ್ನು ಮತ್ತೆ ನಮ್ಮ ಜೊತೆ ಸೇರಿಸಿಕೊಂಡು, ನಾವೆಲ್ಲರೂ ಸೇರಿ ಮುಂದಿನ ಕಾರ್ಯಯೋಜನೆಯನ್ನು ರೂಪಿಸುವ ಅಗತ್ಯವಿದೆ. ಬಹಳ ಮುಖ್ಯವಾಗಿ ಇಡೀ ವರ್ಷಾಚರಣೆಯ ಕಾರ್ಯಕ್ರಮಕ್ಕೆ ಇದು ನಮ್ಮ ಮೂಲ ಘೋಷಣೆಯಾಗಿದೆ. “ಕಾರ್ಪೊರೇಟ್–ಕೋಮುವಾದಿಗಳೆ ಸಾರ್ವಜನಿಕ ಜೀವನದಿಂದ ತೊಲಗಿ” ಈ ಶೀರ್ಷಿಕೆ ಆದರಿಸಿದ ಕಾರ್ಯಕ್ರಮಗಳನ್ನು ಇಡೀ ವರ್ಷಾಚರಣೆಯಲ್ಲಿ ರೂಪಿಸಿಲಾಗುವುದು. ಮುಖ್ಯವಾಗಿ ಕೃಷ್ಣ ಹಾಗೂ ತುಂಗಭದ್ರ ಡ್ಯಾಮ್‌ಗಳಿಗೆ ಸಂಬಂದಿಸಿದ ಹಲವು ಸಮಸ್ಯೆಗಳು ಮತ್ತು ಜಿಲ್ಲೆಯ ಯುವಜನರ ನಿರುದ್ಯೋಗದ ಸಮಸ್ಯೆ ಕಡೆ ಹೆಚ್ಚು ಗಮನ ಕೇಂದ್ರಿಕರಿಸಿ ಕಾರ್ಯಕ್ರಮ ಮತ್ತು ಹೋರಾಟಗಳನ್ನು ರೂಪಿಸುವುದು, ವಿದ್ಯಾರ್ಥಿ, ಮಹಿಳೆಯರ, ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸುವದು, ಹೋರಾಟಗಳಲ್ಲಿ ಭಾಗವಹಿಸುವುದು ಈ ವರ್ಷಾಚರಣೆಯ ಉದ್ದೇಶವಾಗಿದೆ ಎಂದು ದೇವೇಂದ್ರಗೌಡ ಅವರು ತಮ್ಮ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಸಂಪೂರ್ಣ ಸ್ವಾತಂತ್ರ್ಯ, ಸ್ವರಾಜ್ಯದ ಬೇಡಿಕೆಯನ್ನು ಮೊದಲು ಇಟ್ಟಿದ್ದು ಕಮ್ಯೂನಿಸ್ಟ್ ಪಕ್ಷ

50 ವರ್ಷದ ಸಂಭ್ರಮಾಚರಣೆ ಕಾರ್ಯಕ್ರಮವನ್ನು ಹಲಿಗೆ ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿಗಳಾದ ಡಾ.ಕೆ.ಪ್ರಕಾಶ ಅವರು, “ಮೊಟ್ಟ ಮೊದಲು, ದೇಶದ ಸಂಪೂರ್ಣ ಸ್ವಾತಂತ್ರ್ಯ ಹಾಗೂ ಸ್ವರಾಜ್ಯಕ್ಕಾಗಿ ಬೇಡಿಕೆಯನ್ನಿಟ್ಟಿದ್ದು ಕಮ್ಯೂನಿಸ್ಟ್ ಪಕ್ಷ. 1925ರಲ್ಲಿ ನಡೆದ ಅಹ್ಮದಾಬಾದ್‌ನ ಎಐಸಿಸಿ ಅಧಿವೇಶನದಲ್ಲಿ ಕಮ್ಯೂನಿಸ್ಟ್ ಪಕ್ಷ ಈ ಧ್ವನಿ ಎತ್ತಿತು. ಆದರೂ ಬ್ರಿಟೀಷರ ಕಾಲದಲ್ಲಿ ನಿಷೇಧಿತ ಪಕ್ಷವೆಂದು ಕಮ್ಯೂನಿಸ್ಟ್ ಪಕ್ಷವನ್ನು ನೋಡಲಾಗುತ್ತಿತ್ತು. ಕಮ್ಯೂನಿಸ್ಟ್ ಚಳುವಳಿ ಎಂಬುದು ಕೇವಲ ಕಮ್ಯೂನಿಸ್ಟ್ ಪಕ್ಷದ ಸದಸ್ಯರಿಗೆ ಮಾತ್ರವಲ್ಲ, ಜನಸಾಮಾನ್ಯರು, ಬಡವರು, ಕಾರ್ಮಿಕರು ಮತ್ತು ರೈತರಿಗಾಗಿ ಮಿಡಿಯುವ ಮನುಷ್ಯರೆಲ್ಲರೂ ಕಮ್ಯೂನಿಸ್ಟ್ ಚಳುವಳಿಯ ಭಾಗವಾಗಿರುತ್ತಾರೆ. ಹಳೆಯ ನೆನಪುಗಳನ್ನು ಅನುಭವವಾಗಿ ಪಡೆದುಕೊಂಡು, ಮುಂದೆ ಜಿಲ್ಲೆಯಲ್ಲಿ ಅತ್ಯುತ್ತಮ ಚಳುವಳಿ ರೂಪಿಸಲು ಎಲ್ಲರೂ ಜೊತೆಗೂಡಿ ನಡೆಯಬೇಕಾಗಿದೆ. ಜಿಲ್ಲೆಯಲ್ಲಿ ಸಿಪಿಐ(ಎಂ)ನ ಚಳುವಳಿ ಆರಂಭವಾಗಿ 50 ವರ್ಷಗಳು ಗತಿಸಿರುವುದು ಸಾಧಾರಣ ವಿಷಯವಲ್ಲ. ಹಿಂದಿನ 50 ವರ್ಷಗಳ ಹೋರಾಟದ ಅಂಶಗಳು ಮುಂದಿನ ಹೋರಾಟಕ್ಕೆ ದಾರಿಯಾಗಬೇಕಾಗಿದೆ” ಎಂದರು.

ಕಮ್ಯೂನಿಸ್ಟ್ ಚಳುವಳಿ ಇತರೆ ರಾಜಕೀಯ ಪಕ್ಷಗಳಂತ್ತಲ್ಲ. ಬ್ರಿಟೀಷರ ಕಾಲದಲ್ಲಿ ಧ್ವಜವನ್ನು ಹಿಡಿಯಲು ಸಹ ಕಮ್ಯೂನಿಸ್ಟ್ ಪಕ್ಷದ ಸದಸ್ಯರಿಗೆ ಅವಕಾಶ ನೀಡಿರಲಿಲ್ಲ. ಸ್ವಾತಂತ್ರ ಬಂದ ನಂತರವೂ ಆಳುವ ಕಾಂಗ್ರೆಸ್ ಪಕ್ಷದ ಧೋರಣೆಗಳ ವಿರುದ್ಧ ಧ್ವನಿ ಎತ್ತಿ ಅವರ ನೀತಿಗಳನ್ನು ವಿರೋಧಿಸುವ ನಿರ್ಧಾರವನ್ನು ಅಂಗೀಕರಿಸಲು ಆಗಿರಲಿಲ್ಲ. ನಂತರ 1964ರಲ್ಲಿ ಕ್ರಾಂತಿಕಾರಿ ದಾರಿಯನ್ನು ಕಂಡುಕೊಳ್ಳಲಾಯಿತು. ಕಾಂಗ್ರೆಸ್ ಮೂಲತಃ ಜಮೀನ್ದಾರಿ ಬಂಡವಾಳದಾರರ ಪಕ್ಷವಾಗಿತ್ತು. ಬ್ರಿಟೀಷರು ಭಾರತ ಬಿಟ್ಟು ತೊಲಗಿದರೆ ಎಲ್ಲರಿಗೂ ಭೂಮಿ, ಶಿಕ್ಷಣ ಸಿಗುತ್ತದೆ ಎಂಬ ಕನಸುಗಳಿದ್ದವು. ಆದರೆ ಸ್ವಾತಂತ್ರ್ಯ ಬಂದು 78 ವರ್ಷಗಳು ಗತಿಸಿದರೂ ಬಡವರಿಗೆ, ದಲಿತರಿಗೆ, ಕೂಲಿಕಾರರಿಗೆ ಭೂಮಿ, ಶಿಕ್ಷಣ, ಆರೋಗ್ಯ ಮರಿಚಿಕೆಯಾಗಿದೆ ಎಂದು ಹೇಳಿದರು.

ಜನ ಸಮುದಾಯಗಳು ಹೋರಾಟಗಾರರಿಗಾಗಿ ಕಾಯುತ್ತಿದ್ದಾರೆ: ಚಂದ್ರಶೇಖರ ಬಾಳೆ

ರಾಯಚೂರು ಜಿಲ್ಲೆಯಲ್ಲಿ ಪಕ್ಷದ ಚಟುವಟಿಕೆ ಪ್ರಾರಂಭಿಸಿದವರಲ್ಲಿ ಒಬ್ಬರಾಗಿದ್ದ ಚಂದ್ರಶೇಖರ ಬಾಳೆ ಅವರು ತಮ್ಮ ಅನುಭವ ಹಂಚಿಕೊಂಡಿದ್ದು ಹೀಗೆ: 50 ವರ್ಷದ ಆಚರಣೆ ಮಾಡಲು ಪಕ್ಷದ ತೀರ್ಮಾನವು ನನಗೆ ನನ್ನ 50 ವರ್ಷದ ನೆನಪುಗಳಿಗೆ ಯೌವನ ಬಂದಂತಾಗಿದೆ. ಅದರೊಟ್ಟಿಗೆ ನಾವು ಕಟ್ಟಿ ಬೆಳೆಸಿದ ಪಕ್ಷದ ಸಂಘಟನೆ ಮತ್ತು ಹೋರಾಟಗಳು ನನ್ನ ಕಣ್ಣ ಮುಂದೆ ಹರಿದಾಡಲು ಪ್ರಾರಂಭವಾಗಿವೆ. ಇಂದಿನ ಪರಿಸ್ಥಿತಿ ಭಿನ್ನವಾಗಿದ್ದರೂ, ಅಂದು ಜನತೆಯನ್ನು ಸಮಸ್ಯೆಗಳು ಹೇಗೆ ಬಾದಿಸುತ್ತಿದ್ದವೋ, ಅದೇ ರೀತಿಯಲ್ಲಿ ಇಂದು ಸಮಸ್ಯೆಗಳು ಉಲ್ಬಣಗೊಂಡಿವೆ. ಅಂದು ನಾವುಗಳು ಸಮಸ್ಯೆಗಳನ್ನು ಹುಡುಕಿಕೊಂಡು ಬಾದಿತ ಜನರ ಬಳಿ ಹೋಗಿ, ಅವರನ್ನು ಸಂಘಟಿಸಿ ಹೋರಾಟ ಮಾಡುತ್ತಿದ್ದೆವು. ಆಗಿನ ಕಾಲದಲ್ಲಿ ಯಾವುದೇ ದೂರವಾಣಿ, ಮೊಬೈಲ್, ದ್ವಿಚಕ್ರ ವಾಹನವಾಗಲೀ, ಹೆಚ್ಚಿನ ಪ್ರಮಾಣದಲ್ಲಿ ಸಾರಿಗೆ ಸೌಲಭ್ಯಗಳಾಗಲೀ, ಇತರೆ ಸೌಲಭ್ಯಗಳಾಗಲೀ ಇರಲಿಲ್ಲ. ಬಾಡಿಗೆ ಸೈಕಲ್ ಮಾತ್ರ ಲಭ್ಯವಿತ್ತು. ನಾವು ಕಮ್ಯೂನಿಸ್ಟರು ಎಂದು ಹೇಳಿಕೊಂಡರೆ, ನಮ್ಮನ್ನು ಅಸ್ಪೃಷ್ಯರಂತೆ ಕಾಣುತ್ತಿದ್ದರು. ಕೆಲವರು ನಮ್ಮನ್ನು ನೋಡಿ ನಗೆಯಾಡುತ್ತಿದ್ದರು. ಇಂದು ಬದಲಾದ ಪರಿಸ್ಥಿತಿಯಲ್ಲಿ ಸಮಸ್ಯೆಗಳು ಉಲ್ಭಣಗೊಂಡಿವೆ. ಪೀಡಿತ ಜನ ಸಮುದಾಯಗಳು ಹೋರಾಟಗಾರರಿಗಾಗಿ ಕಾಯುತ್ತಿದ್ದಾರೆ. ಅವರನ್ನು ಸಂಘಟಿಸುವ ಕೊರತೆಯಾಗಿದ್ದು, ಪ್ರಸ್ತುತ ಸಂಘಟಕರಿಗೆ ಕನಿಷ್ಟ ಸೌಲಭ್ಯಗಳು, ಫೋನು, ಸಾರಿಗೆ, ದ್ವಿಚಕ್ರ ವಾಹನ ಇವೆ. ಇವುಗಳನ್ನು ಬಳಿಸಿ ಪಕ್ಷದ ಮುಖಂಡರು ಇನ್ನೂ ಹೆಚ್ಚಿನ ರೀತಿಯಲ್ಲಿ ಚಳುವಳಿಯಲ್ಲಿ ತೊಡಗಬೇಕು. ಜನರ ಎಲ್ಲಾ ಸಮಸ್ಯೆಗಳಿಗೆ ಬಲಪಂಥೀಯ ರಾಜಕೀಯ ಪಕ್ಷಗಳ ಧೋರಣೆಗಳು ಕಾರಣ ಎಂಬ ನಮ್ಮಲ್ಲಿರುವ ಅರಿವನ್ನು ಜನತೆಗೆ ತಿಳಿಸಿ ಸಂಘರ್ಷ ಮಾಡಬೇಕಾಗಿದೆ ಎಂದು ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು.

ರಜಾಕಾರರ ವಿರುದ್ಧ ಭೂಮಿಗಾಗಿ ಚಳುವಳಿ ನಡೆದಿತ್ತು

ರಾಘವೇಂದ್ರ ಕುಷ್ಟಗಿ ಅವರು ಮಾತನಾಡಿ, ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಬ್ರಿಟೀಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಚಳುವಳಿಗಳು ನಡೆದಿಲ್ಲ. ಈ ಭಾಗದಲ್ಲಿ ಚಳುವಳಿ ನಡೆದಿದ್ದು ರಜಾಕಾರರ ವಿರುದ್ಧ ಭೂಮಿಗಾಗಿ. ನಂತರ 1948ರಿಂದ ಈ ಪ್ರದೇಶದಲ್ಲಿ ದಲಿತ, ವಿದ್ಯಾರ್ಥಿ, ಕಾರ್ಮಿಕ, ರೈತ ಚಳುವಳಿಗಳಾಗಲೀ ಇತರೇ ಚಳುವಳಿಗಳಾಗಲೀ, ಧ್ವಜವನ್ನು ಹಿಡಿದು ಚಳುವಳಿ ನಡೆಸಿರುವ ಉದಾಹರಣೆಗಳಿಲ್ಲ. 1975ರಲ್ಲಿ ಸಿಪಿಐ(ಎಂ) ಪ್ರಾರಂಭದ ನಂತರವೇ ಜಿಲ್ಲೆಯಲ್ಲಿ ಅನೇಕ ಚಳುವಳಿಗಳು ಪ್ರಾರಂಭವಾಗಿವೆ. 1980ರ ಸಂದರ್ಭದಲ್ಲಿ ನಾನು ಒಂದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಚಂದ್ರಶೇಖರ ಬಾಳೆ, ಪುರುಷೋತ್ತಮ ಕಲಾಲಬಂಡಿ, ಶರಣು ಮಾಲಿಪಾಟೀಲ್ ಇವರುಗಳ ಸಂಪರ್ಕದಿಂದ ಕೆಲಸ ಬಿಟ್ಟೆ. ನಂತರ ಸಿಪಿಐ(ಎಂ) ಅಡಿಯಲ್ಲಿ ರಾಯಚೂರು ಯುವಜನರ ಸಂಘ ಕಟ್ಟಿ, ನಿರುದ್ಯೋಗ ಸಮಸ್ಯೆಯ ವಿರುದ್ಧ ಚಳುವಳಿಗಳನ್ನು ಮಾಡಿ, ಸುಮಾರು 450 ಕ್ಕೂ ಹೆಚ್ಚು ಸ್ಥಳೀಯರಿಗೆ ಕೆಪಿಸಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ಖಾಯಂ ಮಾಡಿಸಲು ಸಾಧ್ಯವಾಗಿದೆ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.

ತುಂಗಭದ್ರ ಎಡದಂಡೆ ಮತ್ತು ನಾರಾಯಣಪೂರ ಬಲದಂಡೆ ಕಾಲುವೆಯ ಕೆಳಭಾಗದ ರೈತರ ನೀರಾವರಿ ರೈತ ಸಂಘಟನೆಗಳ ಮೂಲಕ, ಚಂದ್ರಶೇಖರ ಬಾಳೆ ಅವರ ನೇತೃತ್ವದಲ್ಲಿ ದೊಡ್ಡ ಪ್ರಮಾಣದ ಚಳುವಳಿಗಳನ್ನು ನಡೆಸಲಾಯಿತು. ಲಿಂಗಸೂಗೂರು, ದೇವದುರ್ಗ, ಮಾನವಿ ಮತ್ತು ರಾಯಚೂರು ನೀರಾವರಿ ತಾಲೂಕಗಳಾಗಲು ಈ ಚಳುವಳಿಗಳು ಕಾರಣವಾಗಿವೆ ಎಂದು ಅಂದಿನ ಚಳುವಳಿಗಳನ್ನು ನೆನೆಪಿಸಿಕೊಂಡರು.


ಮುಂದೆ, ಜಿಲ್ಲೆಯಲ್ಲಿ ಖಾಲಿ ಇರುವ ಸುಮಾರು 15,000ಕ್ಕೂ ಹೆಚ್ಚು ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಖಾಲಿ ಇರುವ ಹುದ್ದೆಗಳಿಗಾಗಿ, ಪ್ರಾಥಮಿಕ ಶಿಕ್ಷಣದ ಗುಣಮಟ್ಟಕ್ಕಾಗಿ, ಚಳುವಳಿಯನ್ನು ರೂಪಿಸುವ ನಿಟ್ಟಿನಲ್ಲಿ ಪ್ರಾಥಮಿಕ ಶಿಕ್ಷಣದ ಉಳಿವಿಗಾಗಿ ಪಾಲಕರ ಸಮಾವೇಶವನ್ನು ಹಮ್ಮಿಕೊಳ್ಳಬೇಕಾಗಿದೆ. ಕೆಳಭಾಗದ ರೈತರಿಗೆ ಘೋಷಿತ ಪ್ರಮಾಣದಲ್ಲಿ ನೀರು ಸಿಗುವಂತೆ ಹೋರಾಟವನ್ನು ರೂಪಿಸಬೇಕಾದ ಅನಿವಾರ್ಯತೆ ಕುರಿತು ಹೇಳಿದ ರಾಘವೇಂದ್ರ ಕುಷ್ಟಗಿ ತಮ್ಮಲ್ಲಿ ಇನ್ನು ಹೋರಾಟದ ಕಿಚ್ಚು ಇದೆ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರುಗಳಾದ ಕೆ.ನೀಲಾ, ಚಂದ್ರಪ್ಪ ಹೊಸಕೇರಾ ಮಾತನಾಡಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಪಕ್ಷದ ಧ್ವಜಾರೋಹಣವನ್ನು ಪಕ್ಷದ ಹಿರಿಯ ಸದಸ್ಯರಾದ ರಸೂಲ್ ಅಹಮ್ಮದ್ ನೆರವೇರಿಸಿದರು. ನಂತರ ಕಳೆದ 50 ವರ್ಷಗಳಲ್ಲಿ ಜಿಲ್ಲೆಯಲ್ಲಿ ಪಕ್ಷದ ಬೆಳವಣಿಗೆಗೆ ಕೆಲಸ ಮಾಡಿದ ಪುರುಷೋತ್ತಮ ಕಲಾಲಬಂಡಿ, ಡಾ. ಎನ್. ಕುಮಾರ, ಡಾ. ಬಾಲಚಂದ್ರನ್, ಮಲ್ಲಯ್ಯ ಜಾಲಹಳ್ಳಿ, ತಿಪ್ಪಣ್ಣ ಶಾಖವಾದಿ, ಕೆ.ನಾರಾಯಣ, ಜಿ.ಬಿ. ಗೋಪಾಲನಾಯಕ ಸೇರಿದಂತೆ ಅನೇಕ ಸಂಗಾತಿಗಳಿಗೆ 2 ನಿಮಿಷ ಮೌನಾಚರಣೆ ಮಾಡುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಿ.ಲಿಂಗಪ್ಪ ಸಿಂಧನೂರು ವಹಿಸಿದ್ದರು. ವೇದಿಕೆಯಲ್ಲಿ ಶರಣು ಮಾಲಿಪಾಟೀಲ್, ಬಿ.ಬಸವರಾಜ, ಕೆ.ಜಿ.ವೀರೇಶ, ಬಸನಗೌಡ ದೇಸಾಯಿ, ರಾಮಣ್ಣ, ಪಲೆಂಚಲಯ್ಯ, ಹೆಚ್.ವಿ.ಗುಡಿ, ಶ್ಯಾಮಲಾಪೂಜಾರ, ನರಸಣ್ಣ ನಾಯಕ, ಶಕುಂತಲಾ ಪಾಟೀಲ್, ಡಿ.ಎಸ್.ಶರಣಬಸವ ಇನ್ನಿತರರು ಉಪಸ್ಥಿತರಿದ್ದರು.

ಜಿಲ್ಲೆಯ ಸಿಂಧನೂರು, ಲಿಂಗಸೂಗೂರ, ದೇವದುರ್ಗ, ಮಾನವಿ, ರಾಯಚೂರು ತಾಲೂಕುಗಳಿಂದ ಸಂಗಾತಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮುಂದಿನ ಎಲ್ಲಾ ಚಟುವಟಿಕೆ ಮತ್ತು ಹೋರಾಟಗಳನ್ನು ರೂಪಿಸಲು ಆಚರಣಾ ಸಮಿತಿ ಕಾರ್ಯನಿರ್ವಹಿಸುತ್ತಿದೆ. ಆಚರಣಾ ಸಮಿತಿಯ ಗೌರವಾಧ್ಯಕ್ಷರಾಗಿ ಚಂದ್ರಶೇಖರ ಬಾಳೆ ಹಾಗೂ ರಾಘವೇಂದ್ರ ಕುಷ್ಟಗಿ, ಅಧ್ಯಕ್ಷರಾಗಿ ಬಿ.ಲಿಂಗಪ್ಪ ಸಿಂಧನೂರು, ಪ್ರಧಾನ ಕಾರ್ಯದರ್ಶಿಯಾಗಿ ಎಸ್. ದೇವೇಂದ್ರಗೌಡ ಇದ್ದಾರೆ.

ದೇಶದ ಆರ್ಥಿಕತೆಯ ಮೇಲೆ ಟ್ರಂಪ್ ಸುಂಕ ಹೆಚ್ಚಳದ ಪರಿಣಾಮ ಕರ್ನಾಟಕದ ಮೇಲೂ ತೀವ್ರ ಪರಿಣಾಮ



ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪ್ರಸ್ತುತ ನಡೆಯುತ್ತಿದ್ದ ವ್ಯಾಪಾರ ಮಾತುಕತೆಗಳ ಸಮಯದಲ್ಲಿ ಅಮೆರಿಕ ಮುಂದಿಟ್ಟ ಎಲ್ಲಾ ಬೇಡಿಕೆಗಳನ್ನು ಸ್ವೀಕರಿಸಿದೇ ಇದ್ದುದಕ್ಕಾಗಿ ಭಾರತೀಯ ರಫ್ತುಗಳ ಮೇಲೆ ಶೇಕಡಾ 25ರಷ್ಟು ಸುಂಕ ವಿಧಿಸಲಾಗುವುದು ಎಂದು ಪ್ರಕಟಿಸಿದ್ದರು. ಇದರ ಜೊತೆಗೆ, ಭಾರತವು ರಷ್ಯಾದ ತೈಲವನ್ನು ಖರೀದಿಸದೇ ಇದ್ದುದಕ್ಕಾಗಿ ದಂಡವಾಗಿ ಹೆಚ್ಚುವರಿ ಶೇಕಡಾ 25ರಷ್ಟು ವಿಧಿಸಲಾಗಿದೆ. ಈ ಸುಂಕ ಹೆಚ್ಚಳದ ಪರಿಣಾಮವು ಕರ್ನಾಟಕದ ಐಟಿ ಬಿಟಿ ಉದ್ಯಮ, ಔಷಧೀಯ ಉದ್ಯಮ, ವಾಹನ ತಯ್ಯಾರಿಕಾ ಉದ್ಯಮ, ಸೋಲಾರ್ ವಿದ್ಯುತ್ ಉದ್ಯಮಗಳ ಮೇಲೆ ಬೀರುತ್ತದೆ. ಸಿದ್ದಉಡುಪು ಕಾರ್ಖಾನೆಗಳು ಮತ್ತು ಹತ್ತಿ ಬೆಳೆಯುವ ರೈತರ ಮೇಲೆ ಪರಿಣಾಮ ಬೀರುತ್ತದೆ. ಉದ್ಯೋಗ ಕಡಿತ ಹೆಚ್ಚಾಗುತ್ತದೆ, ನಿರುದ್ಯೋಗ ಸಮಸ್ಯೆ ಮತ್ತಷ್ಟು ಹೆಚ್ಚುತ್ತದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಗಸ್ಟ್ ಒಂದರಿಂದ ಭಾರತದ ರಫ್ತಿನ ಮೇಲೆ ಶೇ. 25 ರಷ್ಟು ಹೆಚ್ಚುವರಿ ಆಮದು ಸುಂಕವನ್ನು ವಿಧಿಸಿದ್ದಾರೆ. ದಂಡವನ್ನೂ ವಿಧಿಸುತ್ತೇವೆ ಎಂದು ಎಚ್ಚರಿಕೆ ನೀಡುತ್ತಿದ್ದಾರೆ. ತಮ್ಮ ಹಸ್ತಕ್ಷೇಪದಿಂದ ಕದನವಿರಾಮ ಸಾಧ್ಯವಾಯಿತು ಎಂದು ಪದೇ ಪದೇ ಹೇಳಿದ ಟ್ರಂಪ್, ಈಗ ರಷ್ಯಾದಿಂದ ಭಾರತವು ಕಚ್ಚಾ ತೈಲ ಆಮದು ಮಾಡಿಕೊಳ್ಳುವುದಿಲ್ಲ ಎಂದು ತನಗೆ ಹೇಳಿತ್ತು ಎಂಬಂತೆ ಹೇಳಿಕೊಳ್ಳುತ್ತಿದ್ದಾರೆ. ಭಾರತದ ಸಾರ್ವಭೌಮತ್ವವನ್ನು ಅಮೆರಿಕದ ಅಧ್ಯಕ್ಷರು ಅಗೌರವಿಸುತ್ತಿದ್ದರೆ, ದೇಶಭಕ್ತಿ ತನ್ನ ಪೇಟೆಂಟ್ ಎಂಬಂತೆ ಹೇಳಿಕೊಳ್ಳುವ ಕೇಂದ್ರ ಸರ್ಕಾರ, ಅವರ ಅನುಯಾಯಿ ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮ ಗುಂಪುಗಳು ಮೌನಜಪ ಮಾಡುತ್ತಿವೆ. ಆರು ವರ್ಷಗಳ ಹಿಂದೆ ಅಮೆರಿಕದ ಹೂಸ್ಟನ್‌ನಲ್ಲಿರುವ ಎನ್‌ಆರ್‌ಜಿ ಸ್ಟೇಡಿಯಂನಲ್ಲಿ 50,000 ಅನಿವಾಸಿ ಭಾರತೀಯರ ಸಮ್ಮುಖದಲ್ಲಿ 'ಮೈ ಫ್ರೆಂಡ್ ಡೊನಾಲ್ಡ್' ಎಂದು ಗಾಂಭೀರ್ಯದಿಂದ ಘೋಷಿಸಿದ್ದ ಮೋದಿಯವರು ಈಗ ಬಾಯಿ ತೆರೆಯುತ್ತಿಲ್ಲ. ಪ್ರಧಾನಿ ಮೋದಿಯವರಾಗಲಿ, ಮೋದಿಯವರನ್ನು ನಿತ್ಯವೂ ಜಪಿಸುತ್ತಿರುವ ನಮ್ಮ ರಾಜ್ಯದ ವಿರೋಧ ಪಕ್ಷದ ನಾಯಕರಾಗಲೀ ನಮ್ಮ ದೇಶದ ಆರ್ಥಿಕತೆ ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರುವ ಸುಂಕ ಹೆಚ್ಚಳದ ಕುರಿತು ಮಾತನಾಡುತ್ತಿಲ್ಲ.

ಇಡೀ ಪ್ರಪಂಚದ ಮೇಲೆ ಪರಿಣಾಮ

ಅಮೆರಿಕ ಅಧ್ಯಕ್ಷರಾಗಿ ಎರಡನೇ ಬಾರಿಗೆ ಅಧಿಕಾರ ವಹಿಸಿಕೊಂಡಾಗಿನಿಂದ, ಟ್ರಂಪ್ ತೆಗೆದುಕೊಂಡ ನಿರ್ಧಾರಗಳು ಇಡೀ ಪ್ರಪಂಚದ ಮೇಲೆ ಪರಿಣಾಮ ಬೀರುತ್ತಿವೆ. ವಿದ್ಯಾರ್ಥಿಗಳ ವೀಸಾದಿಂದ ಆರಂಭಗೊಂಡು, ದೇಶಗಳ ನಡುವಿನ ಯುದ್ಧಗಳನ್ನು ಕೊನೆಗೊಳಿಸುವ, ಕದನವಿರಾಮದವರೆಗೆ ಎಲ್ಲವನ್ನೂ ತಾನೇ ಮಾಡುತ್ತಿದ್ದೇನೆ ಎಂದು ಟ್ರಂಪ್ ಪದೇ ಪದೇ ಹೇಳುತ್ತಿದ್ದಾರೆ. ಸಮಾಜವಾದಿ ವ್ಯವಸ್ಥೆಯು ಹಿನ್ನಡೆಯನ್ನು ಅನುಭವಿಸಿದ ನಂತರ, ಜಗತ್ತಿನಲ್ಲಿ ತನ್ನ ಪ್ರಾಬಲ್ಯಕ್ಕೆ ಸವಾಲೇ ಇಲ್ಲ ಎಂದು ಅಮೆರಿಕ ಭಾವಿಸಿದೆ. ಆದರೆ, ಯಾವುದೇ ದೇಶವಾದರೂ ತನ್ನ ಹಿತಾಸಕ್ತಿಗಳಿಗೆ ಆದ್ಯತೆ ನೀಡುತ್ತದೆ. ಅದಕ್ಕಾಗಿಯೇ ಕಳೆದ ಕೆಲವು ವರ್ಷಗಳಲ್ಲಿ ಅನೇಕ ದೇಶಗಳು ವಿವಿಧ ಕೂಟಗಳನ್ನು ರಚಿಸಿಕೊಂಡು, ಅಮೆರಿಕದ ಹಸ್ತಕ್ಷೇಪವಿಲ್ಲದೆ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿವೆ. ಈ ಬೆಳವಣಿಗೆಗಳು ಅಮೆರಿಕದ ಆಡಳಿತಗಾರರು ಮತ್ತು ಕಾರ್ಪೊರೇಟ್ ಶಕ್ತಿಗಳಿಗೆ ಸಹಿಸಲಾಗುತ್ತಿಲ್ಲ. 'ಅಮೆರಿಕ ಮೊದಲು' ಎಂಬ ಯುಗವನ್ನು ತರುತ್ತೇನೆಂದು ಚುನಾವಣೆಯಲ್ಲಿ ಭರವಸೆ ಕೊಟ್ಟು ಗೆದ್ದ ಟ್ರಂಪ್, ಇಂತಹ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ನಿಲುವನ್ನು ಚೀನಾ ಸೇರಿದಂತೆ ಅಮೆರಿಕದ ನೆರೆಹೊರೆಯ ದೇಶಗಳಾದ ಕೆನಡಾ ಮತ್ತು ಅನೇಕ ಸಣ್ಣ ದೇಶಗಳು ಕೂಡಾ ಪ್ರಶ್ನಿಸುತ್ತಿವೆ ಮತ್ತು ಪ್ರತಿಭಟಿಸುತ್ತಿವೆ. ನಮ್ಮ ದೇಶದ ಆಡಳಿತಗಾರರು ಮಾತ್ರ ದೇಶದ ಪ್ರತಿಷ್ಠೆಯನ್ನು, ಆರ್ಥಿಕ ವ್ಯವಸ್ಥೆಯನ್ನು ತೀವ್ರ ಸಂಕಷ್ಟಕ್ಕೆ ಸಿಲುಕಿಸುತ್ತಿದ್ದಾರೆ.

'ಮೈ ಫ್ರೆಂಡ್ ಡೊನಾಲ್ಡ್' ಕೆಲಸ ಮಾಡಲಿಲ್ಲ

ಅಮೆರಿಕದೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ನಮ್ಮ ದೇಶದ ಆಡಳಿತಗಾರರು ಮತ್ತು ಅಧಿಕಾರಿಗಳು ಸುಮಾರು ನಾಲ್ಕು ತಿಂಗಳುಗಳಿಂದ ಅಮೆರಿಕದೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ. ಟ್ರಂಪ್ ಜೊತೆಗೆ ಮೋದಿಯವರಿಗೆ ಇರುವ ಸ್ನೇಹದಿಂದಾಗಿ ಭಾರತಕ್ಕೆ ಅನುಕೂಲಕರವಾದ ವ್ಯಾಪಾರ ಒಪ್ಪಂದ ಏರ್ಪಡುತ್ತದೆ ಎಂದು ಜುಲೈ 29ರವರೆಗೆ ವಿವಿಧ ರೀತಿಯ ಪ್ರಚಾರಗಳನ್ನು ಮಾಡಿದರು. ಟ್ರಂಪ್ ಕೂಡ ಅದೇ ಅನಿಸಿಕೆ ವ್ಯಕ್ತಪಡಿಸಿದರು. ಆದರೆ, ಜುಲೈ 30ರಂದು ಭಾರತದ ರಫ್ತಿನ ಮೇಲೆ ಶೇಕಡಾ 25 ಸುಂಕವನ್ನು ಹೆಚ್ಚಿಸುವ ಮೂಲಕ ಟ್ರಂಪ್ ಒಂದು ಸಂಚಲನಕಾರಿ ಘೋಷಣೆ ಮಾಡಿದರು.

ಹಲವು ದಶಕಗಳ ಕಾಲದಿಂದ ಪ್ರಪಂಚದಾದ್ಯಂತದ ಪರಿಣಿತರನ್ನು ಸೇರಿಸಿ, ವೈಜ್ಞಾನಿಕ ಜ್ಞಾನದ ಮೂಲಕ ಕಡಿಮೆ ವೆಚ್ಚದಲ್ಲಿ ಸರಕುಗಳನ್ನು ಉತ್ಪಾದಿಸಿ, ಪ್ರಪಂಚದಾದ್ಯಂತ ಮಾರಾಟಮಾಡಿಕೊಂಡು ಬಂದ ಅಮೆರಿಕನ್ ಕಂಪನಿಗಳ ಎದರು, ನೂರಾರು ವರ್ಷಗಳ ವಸಾಹತುಶಾಹಿ ದಬ್ಬಾಳಿಕೆಯಿಂದ ಮುಕ್ತವಾದ ದೇಶಗಳ ಕಂಪನಿಗಳ ಉತ್ಪನ್ನಗಳು ಉಳಿಯಬಹುದೇ? ಅಭಿವೃದ್ಧಿಶೀಲ ರಾಷ್ಟ್ರಗಳು ತಮ್ಮ ದೇಶೀಯ ಕಂಪನಿಗಳನ್ನು ರಕ್ಷಿಸಿಕೊಳ್ಳಲು ಅನೇಕ ಕಾನೂನುಗಳನ್ನು ಜಾರಿಗೆ ತಂದು ಸುಂಕಗಳ ವ್ಯತ್ಯಾಸಗಳನ್ನು ಅನುಸರಿಸುತ್ತಿವೆ. ಜಾಗತೀಕರಣದ ಸುಳ್ಳು ಘೋಷಣೆಯೊಂದಿಗೆ ಈ ದೇಶಗಳಿಗೆ ನುಸುಳಿರುವ ಸೂಪರ್ ಪವರ್ ಕಂಪನಿಗಳು ಈಗ ತೆರಿಗೆ ಸಮಾನತೆಯ ಬಗ್ಗೆ ಮಾತನಾಡುತ್ತಿವೆ. ವಿದೇಶಗಳಿಂದ ನಮ್ಮ ದೇಶಕ್ಕೆ ಬರುವ ಸರಕುಗಳ ಮೇಲೆ ಸರ್ಕಾರ ಸರಾಸರಿ ಶೇ. 17ರಷ್ಟು ಆಮದು ಸುಂಕವನ್ನು ವಿಧಿಸುತ್ತಿದೆ. ಟ್ರಂಪ್ ಎರಡನೇ ಬಾರಿಗೆ ಅಧಿಕಾರ ವಹಿಸಿಕೊಳ್ಳುವವರೆಗೆ, ಅಮೆರಿಕಕ್ಕೆ ಆಮದು ಮಾಡಿಕೊಳ್ಳುವ ವಿದೇಶಿ ಸರಕುಗಳ ಮೇಲೆ ಸರಾಸರಿ ಶೇಕಡಾ 3.3ರಷ್ಟು ಆಮದು ಸುಂಕ ವಿಧಿಸುತ್ತಿತ್ತು. ನಮ್ಮ ಮೇಲೆ ನೀವು ಎಷ್ಟು ತೆರಿಗೆ ವಿಧಿಸುತ್ತೀರೋ ನಾವೂ ಅಷ್ಟೇ ತೆರಿಗೆ ವಿಧಿಸುತ್ತೇವೆ ಎಂದು ಟ್ರಂಪ್ ಈಗ ಹೇಳುತ್ತಿದ್ದಾರೆ. ಇದರ ನಿಜವಾದ ಉದ್ದೇಶ ನಮ್ಮ ಕೃಷಿ ವಲಯವನ್ನು ಕಬಳಿಸುವುದಾಗಿದೆ.

ಯಾವುದಕ್ಕೆಲ್ಲಾ ಸುಂಕ ಹೆಚ್ಚಳ?

ನಮ್ಮ ದೇಶದ ಆಹಾರ ಮತ್ತು ಕೃಷಿ ಉತ್ಪನ್ನಗಳ ಮೇಲೆ ಪ್ರಸ್ತುತ ಅಮೆರಿಕಾ ಶೇ. 15ರಷ್ಟು ಆಮದು ಸುಂಕವನ್ನು ವಿಧಿಸುತ್ತಿದೆ. ಇದು ಸರಾಸರಿ ಶೇ. 30ಕ್ಕೆ ಹೆಚ್ಚಾಗುತ್ತದೆ. ಭಾರತದ ಉಡುಪುಗಳ ಮೇಲೆ ಶೇ. 12ರಿಂದ ಶೇ. 37ಕ್ಕೆ, ಡೈರಿ ಉತ್ಪನ್ನಗಳ ಮೇಲೆ ಶೇ. 188, ಹಣ್ಣುಗಳು ಮತ್ತು ತರಕಾರಿಗಳ ಮೇಲೆ ಶೇ. 132 ಹೆಚ್ಚಾಗುತ್ತದೆ. ಕಾಫಿ, ಚಹಾ ಮತ್ತು ಸುಗಂಧ ದ್ರವ್ಯಗಳ ಮೇಲೆ ಶೇ. 53, ಸಿರಿಧಾನ್ಯಗಳ ಮೇಲೆ ಶೇ. 193, ಎಣ್ಣೆಬೀಜಗಳು ಮತ್ತು ಎಣ್ಣೆಗಳ ಮೇಲೆ ಶೇ. 164, ಆಲ್ಕೋಹಾಲ್ ಮತ್ತು ತಂಬಾಕಿನ ಮೇಲೆ ಶೇ. 150, ಖನಿಜಗಳು ಮತ್ತು ಲೋಹಗಳ ಮೇಲೆ ಶೇ. 187 ಮತ್ತು ರಾಸಾಯನಿಕಗಳ ಮೇಲೆ ಶೇ. 56ರಷ್ಟು ಸುಂಕವನ್ನು ಅಮೆರಿಕ ಈಗಾಗಲೇ ವಿಧಿಸುತ್ತಿದೆ.

ಕೃಷಿ ಮತ್ತು ಡೈರಿ ಕ್ಷೇತ್ರಗಳಲ್ಲಿ ನುಸುಳಲು ಪ್ರಯತ್ನ

ಕಳೆದ ಎರಡು ತಿಂಗಳುಗಳಲ್ಲಿ, ಅಮೆರಿಕಾ ನಮ್ಮ ದೇಶದೊಂದಿಗೆ 5 ಸುತ್ತಿನ ದ್ವಿಪಕ್ಷೀಯ ವ್ಯಾಪಾರ ಮಾತುಕತೆಗಳನ್ನು ನಡೆಸಿದೆ. ಈ ಚರ್ಚೆಗಳಲ್ಲಿ ಭಾರತದ ಕೃಷಿ ಮತ್ತು ಡೈರಿ ಕ್ಷೇತ್ರಗಳಲ್ಲಿ ತನ್ನ ಕಂಪನಿಗಳಿಗೆ ಬಾಗಿಲು ತೆರೆಯಬೇಕೆಂಬ ಅಮೆರಿಕದ ಬೇಡಿಕೆಯು ಪ್ರಮುಖ ವಿಷಯವಾಗಿದೆ. ನಮ್ಮ ಆಡಳಿತಗಾರರಿಗೂ ಸಹಾ ರೈತರ ಕೃಷಿಯನ್ನು ರಕ್ಷಿಸುವ ಪ್ರಾಮಾಣಿಕತೆ ಇಲ್ಲವಾದ್ದರಿಂದ ಈ ಹಿಂದೆ ಮೂರು ಕೃಷಿ ಕರಾಳ ಕಾನೂನನ್ನು ತಂದಿದ್ದರು. ಕೃಷಿಯನ್ನು ತನ್ನ ದೇಶೀಯ ಕಾರ್ಪೊರೇಟ್‌ಗಳಿಗೆ ಹಸ್ತಾಂತರಿಸಲು ಅಮೆರಿಕವು ಬಯಸಿದ್ದರಿಂದ ಆಡಳಿತಗಾರರು ಸಂದಿಗ್ಧ ಸ್ಥಿತಿಯಲ್ಲಿದ್ದರು. ಕೋಟಿಗಟ್ಟಲೆ ಜನರ ಜೀವನಾಧಾರವಾಗಿರುವ ಈ ಕ್ಷೇತ್ರಗಳಿಗೆ ಅಮೆರಿಕದ ಕಂಪನಿಗಳಿಗೆ ನೇರವಾಗಿ ಪ್ರವೇಶ ನೀಡಿದರೆ ರಾಜ್ಯಾಧಿಕಾರಕ್ಕೆ ಧಕ್ಕೆ ಬರಲಿದೆ ಎಂಬ ಆತಂಕ ಬಿಜೆಪಿ ನಾಯಕರಲ್ಲಿದೆ.

ಸುಂಕ ಏರಿಕೆಯ ಪರಿಣಾಮಗಳು:

ಹತ್ತಿ ಕೃಷಿಯ ಮೇಲೆ

ಭಾರತದ ಉಡುಪು ರಫ್ತಿನ ಶೇ. 28ರಷ್ಟು ಅಮೆರಿಕಕ್ಕೆ ಹೋಗುತ್ತದೆ. ಅಮೆರಿಕದ ಸುಂಕ ಹೆಚ್ಚಳವು ಈ ರಫ್ತುಗಳನ್ನು ಕಡಿಮೆ ಮಾಡುತ್ತದೆ. ಪರಿಣಾಮವಾಗಿ ಹತ್ತಿ ಬೆಲೆ ಕಡಿಮೆಯಾಗುತ್ತದೆ. ಹತ್ತಿ ಬೆಳೆಯುವ ರೈತರು ಈಗಾಗಲೇ ಲಾಭದಾಯಕ ಬೆಲೆಗಳಿಗಾಗಿ ರಸ್ತೆಗಿಳಿದು ಹೋರಾಟ ಮಾಡುತ್ತಿದ್ದಾರೆ. ಈ ಸುಂಕ ಹೆಚ್ಚಳವು ಹತ್ತಿ ಕೃಷಿಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಮತ್ತು ಲಕ್ಷಾಂತರ ಮಹಿಳೆಯರಿಗೆ ಉದ್ಯೋಗ ಒದಗಿಸುತ್ತಿರುವ ಗಾರ್ಮೆಂಟ್ ಕಾರ್ಖಾನೆಗಳ ಮೇಲೆ ಪರಿಣಾಮ ಬೀರುತ್ತದೆ.

ರಾಜ್ಯದ ಔಷಧೀಯ ಉದ್ಯಮದ ಮೇಲೆ

ಭಾರತದ ಔಷಧ ರಫ್ತಿನಲ್ಲಿ ಶೇ. 40ರಷ್ಟು ಅಮೆರಿಕಾದ್ದೆ. ಕರ್ನಾಟಕವು ಉತ್ಕರ್ಷದ ಐಟಿ ವಲಯ ಮತ್ತು ಬಲವಾದ ಔಷಧೀಯ ಉದ್ಯಮಕ್ಕೆ ಹೆಸರುವಾಸಿಯಾಗಿದೆ. ರಾಜ್ಯವು 280ಕ್ಕೂ ಹೆಚ್ಚು ಫಾರ್ಮಾ ಮತ್ತು ಬಯೋಟೆಕ್ ಕಂಪನಿಗಳಿಗೆ ನೆಲೆಯಾಗಿದ್ದು, ಇದು ಭಾರತದ ಉನ್ನತ ಆರೋಗ್ಯ ಕೇಂದ್ರಗಳಲ್ಲಿ ಒಂದಾಗಿದೆ. ಇದರ ರಾಜಧಾನಿಯಾದ ಬೆಂಗಳೂರು, ಭಾರತದ ಸಿಲಿಕಾನ್ ವ್ಯಾಲಿ ಮಾತ್ರವಲ್ಲದೆ ಔಷಧೀಯ ಸಂಶೋಧನೆ ಮತ್ತು ನಾವೀನ್ಯತೆಗಳ ಕೇಂದ್ರವೂ ಆಗಿದೆ. ಕರ್ನಾಟಕವು ಭಾರತದ ಶೇ. 60ಕ್ಕಿಂತ ಹೆಚ್ಚು ಬಯೋಟೆಕ್ ಕಂಪನಿಗಳಿಗೆ ನೆಲೆಯಾಗಿದೆ ಮತ್ತು ಔಷಧ ಉತ್ಪಾದನೆ ಹಾಗೂ ರಫ್ತಿಗೆ ಗಮನಾರ್ಹವಾಗಿ ಕೊಡುಗೆ ನೀಡುತ್ತದೆ. ಈ ತೆರಿಗೆ ಏರಿಕೆಯಿಂದಾಗಿ, ಈ ಕೈಗಾರಿಕೆಗಳು ತೀವ್ರ ಸ್ಪರ್ಧೆಯನ್ನು ಎದುರಿಸಬೇಕಾಗುತ್ತದೆ. ಔಷಧ ಕೈಗಾರಿಕೆಗಳು ಬಿಕ್ಕಟ್ಟಿಗೆ ಸಿಲುಕುತ್ತವೆ. ಕಾರ್ಮಿಕರು ತಮ್ಮ ಉದ್ಯೋಗಗಳನ್ನು ಕಳೆದುಕೊಳ್ಳುತ್ತಾರೆ.

ವಾಹನ ಉದ್ಯಮದ ಮೇಲೆ

ಭಾರತದಲ್ಲಿ ತಯಾರಾಗುತ್ತಿರುವ ವಾಹನ ಭಾಗಗಳಲ್ಲಿ, 2024ರಲ್ಲಿ ಶೇ. 29.1ರಷ್ಟನ್ನು, ಅಂದರೆ, ರೂ. 19,000 ಕೋಟಿ ಮೌಲ್ಯದ ವಾಹನ ಬಿಡಿ ಭಾಗಗಳನ್ನು ಅಮೆರಿಕಕ್ಕೆ ರಫ್ತು ಮಾಡಲಾಯಿತು. ಪ್ರಸ್ತುತ ಸುಂಕ ಹೆಚ್ಚಳವು ಈ ಸರಕುಗಳ ರಫ್ತು ವೆಚ್ಚವನ್ನು ಬಹಳಷ್ಟು ಹೆಚ್ಚಿಸುತ್ತದೆ. ಇದರಿಂದ ನಮ್ಮ ದೇಶದಲ್ಲಿ ವಾಹನ ಬಿಡಿ ಭಾಗಗಳು, ಉಕ್ಕು ಮತ್ತು ಅಲ್ಯೂಮಿನಿಯಂ ಕಂಪನಿಗಳ ಮುಚ್ಚುವಿಕೆ, ವೇತನ ಕಡಿತ ಮತ್ತು ಕೆಲಸದ ಸಮಯವನ್ನು ಹೆಚ್ಚಿಸುವಂತಹ ಕಾರ್ಮಿಕ ವಿರೋಧಿ ಕ್ರಮಗಳಿಗೆ ಕಾರಣವಾಗುವ ಸಾಧ್ಯತೆಯಿದೆ.

ಸೋಲಾರ್ ಕಂಪನಿಗಳಿಗೆ ಲೀಸ್‌ಗೆ ಭೂಮಿ ಕೊಟ್ಟಿರುವ ರೈತರ ಪರಿಸ್ಥಿತಿ

ಭಾರತದಲ್ಲಿ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಕರ್ನಾಟಕ ಮುಂಚೂಣಿಯಲ್ಲಿರುವ ರಾಜ್ಯವಾಗಿದೆ. ಇದಕ್ಕಾಗಿ ಸಾವಿರಾರು ರೈತರು ತಮ್ಮ ಭೂಮಿಯನ್ನು ಸೋಲಾರ್ ಕಂಪನಿಗಳಿಗೆ ಗುತ್ತಿಗೆಗೆ ನೀಡಿದ್ದಾರೆ. ನಮ್ಮ ರಾಜ್ಯ ಸರಕಾರವೂ ಗ್ರೀನ್ ಎನರ್ಜಿ ಹೆಸರಿನಲ್ಲಿ ಸಾವಿರಾರು ಎಕರೆ ಭೂಮಿಯನ್ನು ಸೋಲಾರ್ ಕಂಪನಿಗಳಿಗೆ ಹಸ್ತಾಂತರಿಸುತ್ತಿದೆ. ಅಮೆರಿಕದ ತೆರಿಗೆ ಹೆಚ್ಚಳದಿಂದ ಈ ಕಂಪನಿಗಳು ಉತ್ಪಾದಿಸುವ ವಿದ್ಯುತ್‌ಗೆ ಬೇಡಿಕೆ ಕಡಿಮೆಯಾದರೆ, ಲೀಸ್‌ಗೆ ಭೂಮಿ ನೀಡಿದ ರಾಜ್ಯದ ರೈತರ ಪರಿಸ್ಥಿತಿ ಹೇಗಿರುತ್ತದೆ ಎಂಬುದನ್ನು ಯೋಚಿಸಬೇಕು.

ಐಟಿ ವಲಯದ ಮೇಲೆ ಪರಿಣಾಮ

2024ರ ಆರ್ಥಿಕ ವರ್ಷದಲ್ಲಿ, ಭಾರತದಿಂದ ಐಟಿ (ಸಾಫ್ಟ್‌ವೇರ್) ಸೇವೆಗಳ ರಫ್ತಿನಲ್ಲಿ ಶೇ. 54ರಷ್ಟು ಅಮೆರಿಕಾದ್ದೆ. ಇನ್ಫೋಸಿಸ್, ಟಿಸಿಎಸ್, ವಿಪ್ರೋದಂತಹ ದೈತ್ಯ ಕಂಪನಿಗಳ ಜೊತೆಗೆ, ಸಾವಿರಾರು ಸಣ್ಣ ಕಂಪನಿಗಳು ಅಮೆರಿಕಕ್ಕೆ ಸಾಫ್ಟ್‌ವೇರ್ ಸೇವೆಗಳನ್ನು ಒದಗಿಸುತ್ತಿವೆ. ಈಗಾಗಲೇ ಈ ವಲಯದಲ್ಲಿ ವೇತನ ಕಡಿತ, ಕೆಲಸದಿಂದ ವಜಾದಂತಹ ಕ್ರಮಗಳು ನಡೆಯುತ್ತಿವೆ. ಕರ್ನಾಟದಲ್ಲಿ ಈ ವಲಯದಲ್ಲಿ ಕೆಲಸದ ಸಮಯ ಹೆಚ್ಚಳ ಮಾಡುವ ಪ್ರಯತ್ನವೂ ನಡೆಯಿತು. ಅಮೆರಿಕದ ಐಟಿ ಕಂಪನಿಗಳಲ್ಲಿ ಭಾರತೀಯರಿಗೆ ಉದ್ಯೋಗಳನ್ನು ನೀಡುವುದಿಲ್ಲ ಎಂದು ಟ್ರಂಪ್ ಬೆದರಿಕೆ ಹಾಕುತ್ತಿದ್ದಾರೆ. ಕರ್ನಾಟಕ, ವಿಶೇಷವಾಗಿ, ಬೆಂಗಳೂರು ಭಾರತದ ಐಟಿ ಕೇಂದ್ರವಾಗಿದೆ. ಇದು ದೇಶದ ಅತಿದೊಡ್ಡ ಸಾಫ್ಟ್‌ವೇರ್ ರಫ್ತುದಾರನಾಗಿದ್ದು, ಭಾರತದ IT ಮತ್ತು ITeS ಕ್ಷೇತ್ರಗಳಿಗೆ ಗಮನಾರ್ಹ ಕೊಡುಗೆಗಳನ್ನು ನೀಡಿದೆ. ಟ್ರಂಪ್‌ರ ಸುಂಕ ಹೆಚ್ಚಳದ ಪ್ರಭಾವ ಈ ವಲಯದ ಮೇಲೆ ತೀವ್ರ ಪರಿಣಾಮ ಬೀರಲಿದೆ.

ಇದೆಲ್ಲವೂ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ವನ್ನು ಕಡಿಮೆ ಮಾಡುತ್ತದೆ. ಹಿಂದೆ ಮಾಡಿದ ಅಂದಾಜುಗಳಿಗೆ ಭಿನ್ನವಾಗಿ, ಈ ವರ್ಷ ಶೇ. 6.2ರಷ್ಟು ಮಾತ್ರವೇ ಬೆಳವಣಿಗೆ ಇರಲಿದೆ ಎಂದು ತಜ್ಞರು ಘೋಷಿಸುತ್ತಿದ್ದಾರೆ. ಈಗ ನಿರುದ್ಯೋಗ

ಪುಟ 13 ಕ್ಕೆ



ಬಲವಂತದ ಭೂಸ್ವಾಧೀನದ ವಿರುದ್ಧ ಐತಿಹಾಸಿಕ ಗೆಲುವು ಸಾಧಿಸಿದ

ಚನ್ನರಾಯಪಟ್ಟಣದ ಹಳ್ಳಿಗಳಿಗೆ ಅಶೋಕ್ ದವಳೆ ಭೇಟಿ

"ಪ್ರೀತಿಯ ರೈತ ಬಂಧುಗಳೆ, ನಿರಂತರವಾಗಿ 1198 ದಿನಗಳ ಕಾಲ ಐತಿಹಾಸಿಕ ಹೋರಾಟ ನಡೆಸಿ ಗೆಲುವು ಸಾಧಿಸಿದ 13 ಗ್ರಾಮದ ರೈತರಿಗೂ ಹಾಗೂ ಸಂಘಟನೆಗಳಿಗೂ ಹೃದಯ ತುಂಬಿದ ಅಭಿನಂದನೆಗಳು. ಇದು ನಿಮ್ಮೆಲ್ಲರ ಐಕ್ಯತೆ ಮತ್ತು ದೃಡವಾದ ಹೋರಾಟಕ್ಕೆ ಸಂದ ಜಯ. ಈ ಗೆಲುವು ಕೇವಲ ದೇವನಹಳ್ಳಿಗೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಮಾತ್ರ ಗೆಲುವಲ್ಲ, ಇದು ಇಡೀ ಕರ್ನಾಟಕದ ರೈತರಿಗೆ ಸಿಕ್ಕ ಗೆಲುವು, ಅಷ್ಟು ಮಾತ್ರವಲ್ಲದೆ, ಇದು ದೇಶದ ರೈತರಿಗೆ ಸಿಕ್ಕ ಗೆಲುವು. ಹಾಗಾಗಿ ದೇಶದ ರೈತರ ಪರವಾಗಿ ನಿಮಗೆ ಮತ್ತೊಮ್ಮೆ ಅಭಿನಂದನೆ ಸಲ್ಲಿಸುತ್ತೇನೆ. ನಿಮ್ಮ ಐಕ್ಯತೆಯನ್ನು ಹೀಗೇ ಮತ್ತಷ್ಟು ಗಟ್ಟಿಯಾಗಿ ಮುಂದುವರೆಸಿ." ರೈತರನ್ನು ಅಭಿನಂದಿಸಲು ಈ ಹಳ್ಳಿಗಳಿಗೆ ಆಗಸ್ಟ್ 11 ರಂದು ಭೇಟಿ ನೀಡಿದ್ದ ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರ ಅಧ್ಯಕ್ಷರಾದ ಅಶೋಕ್ ದವಳೆಯವರ ಮಾತುಗಳಿವು.



ಐಕ್ಯತೆ ಮತ್ತು ಬದ್ಧತೆಯ ಮೂಲಕ ಒಂದು ಐತಿಹಾಸಿಕ ಹೋರಾಟವನ್ನು ಗೆದ್ದ ರೈತರನ್ನು ಅಭಿನಂದಿಸಲು, ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳಿಗೆ ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ರಾಷ್ಟ್ರ ಅಧ್ಯಕ್ಷರಾದ ಅಶೋಕ್ ದವಳೆಯವರು ಆಗಸ್ಟ್ 11 ರಂದು ಭೇಟಿ ನೀಡಿದ್ದರು.

ಅಶೋಕ್ ದವಳೆಯವರು ಚನ್ನರಾಯಪಟ್ಟಣಕ್ಕೆ ಪ್ರವೇಶಿಸುತ್ತಿದ್ದಂತೆ, ಸತತವಾಗಿ 1198 ದಿನಗಳ ಕಾಲ ಚಳುವಳಿಯನ್ನು ಮುನ್ನಡೆಸಿದ ಧರಣಿ ಸ್ಥಳಕ್ಕೆ ಭೇಟಿ ಕೊಟ್ಟರು. ಅಷ್ಟರಲ್ಲಾಗಲೇ ರೈತರು ಇದೇ ಜಾಗದಲ್ಲಿ ಮಧ್ಯಾಹ್ನ ನಡೆಯುವ ರೈತರ ಸಮಾವೇಶಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದರು. ಅಲ್ಲಿಂದ ರೈತರ ದಂಡೊಂದು ಅಶೋಕ್ ದವಳೆಯವರನ್ನು ತಮ್ಮ ಊರುಗಳಿಗೆ, ಜಮೀನುಗಳಿಗೆ ಕರೆದೊಯ್ದರು.

ಹೋರಾಟನಿರತ ಹಳ್ಳಿಗಳಿಗೆ ಭೇಟಿ, ರೈತರೊಂದಿಗೆ ಸಂವಾದ ನಡೆಸಿದ ಅಶೋಕ್ ದವಳೆಯವರು, ನಂತರ ಮತ್ತೆ ಚನ್ನರಾಯಪಟ್ಟಣದ ಧರಣಿ ಸ್ಥಳಕ್ಕೆ ಆಗಮಿಸಿದರು. ಅಲ್ಲಿ ಆಯೋಜಿಸಲಾಗಿದ್ದ ರೈತರ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಅವರ ಮಾತಿನ ಪೂರ್ಣ ಪಾಠ ಇಲ್ಲಿದೆ:

ಪ್ರೀತಿಯ ರೈತ ಬಂಧುಗಳೆ, ನಿರಂತರವಾಗಿ 1198 ದಿನಗಳ ಕಾಲ ಐತಿಹಾಸಿಕ ಹೋರಾಟ ನಡೆಸಿದ 13 ಗ್ರಾಮದ ರೈತರಿಗೂ ಹಾಗೂ ಸಂಘಟನೆಗಳಿಗೂ ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಅಖಿಲ ಭಾರತ ಕಿಸಾನ್ ಸಭಾದಿಂದ ಹೃದಯ ತುಂಬಿದ ಅಭಿನಂದನೆಗಳು. ಬಲವಂತವಾಗಿ 1777 ಎಕರೆ ಕೃಷಿ ಭೂಮಿಯನ್ನು ಭೂಸ್ವಾಧೀನ ಮಾಡಿಕೊಳ್ಳುವುದಿಲ್ಲ ಎಂದು ಮುಖ್ಯಮಂತ್ರಿಗಳು ಘೋಷಿಸಿದ್ದು ನಿಮ್ಮೆಲ್ಲರ ಐಕ್ಯತೆ ಮತ್ತು ದೃಡವಾದ ಹೋರಾಟಕ್ಕೆ ಸಂದ ಜಯ. ಈ ಗೆಲುವು ಕೇವಲ ದೇವನಹಳ್ಳಿಗೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಮಾತ್ರ ಗೆಲುವಲ್ಲ, ಇದು ಇಡೀ ಕರ್ನಾಟಕದ ರೈತರಿಗೆ ಸಿಕ್ಕ ಗೆಲುವು, ಅಷ್ಟು ಮಾತ್ರವಲ್ಲದೆ, ಇದು ದೇಶದ ರೈತರಿಗೆ ಸಿಕ್ಕ ಗೆಲುವು. ಹಾಗಾಗಿ ದೇಶದ ರೈತರ ಪರವಾಗಿ ನಿಮಗೆ ಮತ್ತೊಮ್ಮೆ ಅಭಿನಂದನೆ ಸಲ್ಲಿಸುತ್ತೇನೆ.

ಜುಲೈ 15ರಂದು ಮಾನ್ಯ ಮುಖ್ಯಮಂತ್ರಿಗಳು ಭೂಸ್ವಾಧೀನವನ್ನು ಕೈಬಿಡುವುದಾಗಿ ಘೋಷಿಸಿದ ನಂತರದ ಒಂದು ವಾರದಲ್ಲಿ ದೆಹಲಿಯಲ್ಲಿ ನಡೆದ ಸಂಯುಕ್ತ ಕಿಸಾನ್ ಮೋರ್ಚಾದ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ಹೋರಾಟದ ಗೆಲುವಿನ ಬಗ್ಗೆ ಪ್ರಸ್ತಾಪ ಮಾಡಿ, ಸಭೆಯಲ್ಲಿ ಇದ್ದವರೆಲ್ಲಾ ಎದ್ದುನಿಂತು ಕರತಾಡನ ಮಾಡುವ ಮೂಲಕ ನಿಮ್ಮನ್ನು ಅಭಿನಂದಿಸಿದರು.

ಇಂದು ಬೆಳಗ್ಗಿನಿಂದ ಚನ್ನರಾಯಪಟ್ಟಣ ಹೋಬಳಿಯ ಹಲವು ಹಳ್ಳಿಗಳಿಗೆ ನಾನು ಭೇಟಿ ನೀಡಿದ್ದೇನೆ, ಇಲ್ಲಿಯ ರೈತರು ಅತ್ಯುತ್ತಮ ಕೃಷಿಕರು. ಫಲವತ್ತಾದ ಭೂಮಿಯಲ್ಲಿ ವಿಶಿಷ್ಟ ತಳಿಯಾದ ಬೆಂಗಳೂರು ಬ್ಲೂ ದ್ರಾಕ್ಷಿ, ವಿವಿಧಿ ರೀತಿಯ ಹಣ್ಣುಗಳು, ತರಕಾರಿ ಬೆಳೆಗಳನ್ನು ಅತ್ಯುತ್ತಮವಾಗಿ ಬೆಳೆಯಲಾಗಿದೆ. ಇಂತಹ ಉತ್ಕೃಷ್ಟ ಭೂಮಿಯನ್ನು ನಿಮ್ಮೆಲ್ಲರ ಒಗ್ಗಟ್ಟಿನ ಹೋರಾಟದಿಂದ ಉಳಿಸಿಕೊಳ್ಳಲು ಸಾಧ್ಯವಾಗಿದೆ. ಈ ಹಿಂದೆ, ಅಂದರೆ 2022 ಜೂನ್ 22ರಂದು ನಿಮ್ಮ ಧರಣಿ 84ನೇ ದಿನಕ್ಕೆ ಕಾಲಿಟ್ಟಾಗ ನಾನು ಇದೇ ಧರಣಿ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿದ್ದು ಈಗ ನನಗೆ ನೆನಪಾಗುತ್ತಿದೆ.


ಆದರೆ ಇದು ಇನ್ನೂ ಗೆಜೆಟ್ ನೋಟಿಫಿಕೇಶನ್ ಆಗಿಲ್ಲ

ಐತಿಹಾಸಿಕ ಹೋರಾಟದ ಪ್ರತಿಫಲವಾಗಿ ರಾಜ್ಯದ ಮುಖ್ಯಮಂತ್ರಿಗಳು ಭೂಸ್ವಾಧೀನವನ್ನು ಸಂಪೂರ್ಣವಾಗಿ ಕೈಬಿಡಲಾಗಿದೆ ಎಂದು ಘೋಷಿಸಿದ್ದಾರೆ. ಆದರೆ ಇದು ಇನ್ನೂ ಗೆಜೆಟ್ ನೋಟಿಫಿಕೇಶನ್ ಆಗಿಲ್ಲ, ಸರ್ಕಾರದ ಅಧಿಕೃತ ಆದೇಶವಾಗಿ ಲಿಖಿತ ರೂಪದಲ್ಲಿ ನಮ್ಮ ಕೈ ಸೇರಿಲ್ಲ. ಅದು ನಮ್ಮ ಕೈಸೇರಿದಾಗ ಮಾತ್ರ ನಾವು ವಿಜಯೋತ್ಸವವನ್ನು ಆಚರಿಸಬಹುದು. ರಾಜ್ಯ ಸರ್ಕಾರದಲ್ಲಿರುವ ಕೆಲವರು ಮತ್ತು ಕೆಲವು ಕಾರ್ಪೋರೇಟ್ ಕಂಪನಿಗಳು ಇಂತಹ ಆದೇಶ ಹೊರಬಿದ್ದರೆ ಮುಂದೆ ಎಲ್ಲಿಯೂ ನಾವುಗಳು ಭೂಸ್ವಾಧೀನ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ, ರಾಜ್ಯದ ರೈತರು ಎಲ್ಲೆಡೆ ಭೂಸ್ವಾಧೀನದ ವಿರುದ್ಧ ನಿರಂತರವಾಗಿ ಹೋರಾಟಕ್ಕಿಳಿಯುತ್ತಾರೆ ಎಂದು ಪ್ರಚಾರಮಾಡುತ್ತಿದ್ದಾರೆ.

ಮಹಾರಾಷ್ಟ್ರದಲ್ಲಿ ರೈತರಿಂದ 4 ವರ್ಷಗಳ ಕಾಲ ಹೋರಾಟ

ಮಹಾರಾಷ್ಟ್ರದಲ್ಲಿ ನಡೆದ ಒಂದು ಐತಿಹಾಸಿಕ ಹೋರಾಟದ ಅನುಭವದ ಕುರಿತು ನಿಮ್ಮ ಗಮನ ಸೆಳೆಯಲು ಬಯಸುತ್ತೇನೆ. ವಿಶೇಷ ಆರ್ಥಿಕ ವಲಯದ ಹೆಸರಿನಲ್ಲಿ ಮುಖೇಶ್ ಅಂಬಾನಿ ಮತ್ತು ಗೌತಮ್ ಅದಾನಿ ಕಂಪನಿಗೆ ರಾಜ್ಯದ ರಾಯಘಡ ಜಿಲ್ಲೆಯ (ದಕ್ಷಿಣ ಮುಂಬೈ) ಸುಮಾರು 10 ಸಾವಿರ ಹೆಕ್ಟೇರ್ ಅಂದರೆ, ಸುಮಾರು 25,000 ಎಕರೆಯಷ್ಟು ಭೂಮಿಯನ್ನು ಭೂಸ್ವಾಧೀನ ಮಾಡಿಕೊಳ್ಳುವುದಾಗಿ, 3 ತಾಲ್ಲೂಕುಗಳ 45 ಹಳ್ಳಿಗಳ ಸುಮಾರು 2.5 ಲಕ್ಷ ಜನಸಂಖ್ಯೆಯಿರುವ 50,000 ಕುಟುಂಬಕ್ಕೆ ಅಲ್ಲಿನ ಕಾಂಗ್ರೆಸ್ ರಾಜ್ಯ ಸರ್ಕಾರ ನೋಟಿಸ್ ನೀಡಿತು.

ಇದರ ವಿರುದ್ಧ ಎಐಕೆಎಸ್ ನೇತೃತ್ವದಲ್ಲಿ ಇತರೆ ಕಾರ್ಮಿಕ, ಮಹಿಳಾ, ಯುವಜನ ಸಂಘಟನೆಗಳ ಬೆಂಬಲವನ್ನು ಪಡೆದು ಹೋರಾಟ ಆರಂಭಿಸಲಾಯಿತು. ಚನ್ನರಾಯಪಟ್ಟಣ ಹೋಬಳಿಯಲ್ಲಿ ರೈತ ಮೋಹನ್ ಅವರ ಜಮೀನಿನಲ್ಲಿ 15–20 ಜನ ಮೊದಲ ಸಭೆ ಸೇರಿದಂತೆ, ಮಹಾರಾಷ್ಟ್ರದಲ್ಲಿಯೂ ಒಂದು ಗ್ರಾಮದಿಂದ ಆರಂಭವಾಯಿತು. ಕ್ರಮೇಣ ಇದು ಬೆಳೆಯುತ್ತಾ ಹೋಯಿತು. ಅಂತಿಮವಾಗಿ ಒಂದು ಲಕ್ಷ ರೈತರ ಮೆರವಣಿಗೆ ಜಿಲ್ಲಾಧಿಕಾರಿ ಕಛೇರಿಗೆ ಮುತ್ತಿಗೆ ಹಾಕಿತು. ಈ ಸಂದರ್ಭದಲ್ಲಿ ರಾಜ್ಯಸಭಾ ಸದಸ್ಯರಾಗಿದ್ದ ಸಿಪಿಐ(ಎಂ) ಮುಖಂಡರಾದ ಸೀತಾರಾಂ ಯೆಚೂರಿಯವರು ಭಾಗವಹಿಸಿ ರೈತರಿಗೆ ಬೆಂಬಲ ನೀಡಿ, ಈ ವಿಷಯವನ್ನು ಸಂಸತ್ತಿನಲ್ಲಿ ಪ್ರಸ್ತಾಪ ಮಾಡುವುದಾಗಿ ಘೋಷಿಸಿದರು. ಹೋರಾಟಕ್ಕೆ ಮಣಿದ ಸರ್ಕಾರ ಭೂಸ್ವಾಧೀನವನ್ನು ಸಂಪೂರ್ಣ ಕೈಬಿಟ್ಟಿತು. ನಾವು ಈ ಹೋರಾಟವನ್ನು 2007ರಲ್ಲಿ ಆರಂಭಿಸಿ 2011ರಲ್ಲಿ ಮುಗಿಸಿದೆವು. ನೀವು ಚನ್ನರಾಯಪಟ್ಟಣದ 13 ಹಳ್ಳಿಗಳ ರೈತರು ನಿಮ್ಮ ಹೋರಾಟವನ್ನು 2022ರಿಂದ ಆರಂಭಿಸಿ, 2025ರಲ್ಲಿ ಜಯ ಕಾಣುತ್ತಿದ್ದೀರಿ.



ಫಲವತ್ತಾದ ಭೂಮಿಯನ್ನು ಮಾರಾಟಮಾಡುವುದಿರಲಿ, ಆ ದಿಕ್ಕಿನಲ್ಲಿ ಯೋಚಿಸುವುದು ಸಾಧ್ಯವಿಲ್ಲ. ಸರ್ಕಾರ ಭೂಮಿಗೆ ಪರಿಹಾರವಾಗಿ ಎಷ್ಟೇ ಹಣ ಕೊಡಬಹುದು, ಅದು ಆರು ತಿಂಗಳಲ್ಲಿ ಇಲ್ಲವಾಗುತ್ತದೆ. ಒಂದು ಕಡೆ ಭೂಮಿಯೂ ಇಲ್ಲದೆ, ಮತ್ತೊಂದು ಕಡೆ ಕೈಯಲ್ಲಿ ಕಾಸೂ ಇಲ್ಲದೆ ಅತಂತ್ರರಾಗಿ ನರಳಾಡುತ್ತಿರುವ ಸಾವಿರಾರು ಪ್ರಕರಣಗಳು ದೇಶದಾದ್ಯಂತ ಇವೆ. ಈ ಪ್ರದೇಶದ ಯುವಕ ಯುವತಿಯರು ಎಂಜಿನಿಯರಿಂಗ್ ಪದವೀದರರಿದ್ದಾರೆ. 10–15 ಸಾವಿರ ರೂಪಾಯಿಗಳಿಗೆ ಯಾವುದೋ ಕಂಪನಿಗಳಲ್ಲಿ ಗುಲಾಮರಂತೆ ಕೆಲಸ ಮಾಡುವ ಬದಲಾಗಿ, ನಮ್ಮ ಸ್ವಂತ ಭೂಮಿಯಲ್ಲಿ ಸ್ವಾವಲಂಬಿಯಾಗಿ ಕೃಷಿ ಮಾಡುತ್ತೇವೆ ಎನ್ನುತ್ತಿದ್ದಾರೆ. ಇದು ಸಕಾರಾತ್ಮಕ ಬೆಳವಣಿಗೆ.

ಅಂಬಾನಿ ತಮ್ಮ ದಲ್ಲಾಳಿಗಳನ್ನು ರೈತರ ವಿರುದ್ಧ ಛೂಬಿಟ್ಟರು

ಮಹಾರಾಷ್ಟ್ರದಲ್ಲಿ 45 ಗ್ರಾಮಗಳಲ್ಲಿ ಸರ್ಕಾರ ಭೂಮಿಯನ್ನು ಬಿಟ್ಟುಕೊಡುವವರು ಮತ್ತು ಕೊಡದವರ ಜನಮತಗಣನೆಯೊಂದನ್ನು ನಡೆಸಿತು. ಇದರಲ್ಲಿ ಶೇ. 98ರಷ್ಟು ರೈತರು 'ನಾವು ಯಾವುದೇ ಕಾರಣಕ್ಕೂ ಈ ಭೂಮಿಯನ್ನು ಬಿಟ್ಟುಕೊಡುವುದಿಲ್ಲ' ಎಂದು ಸ್ಪಷ್ಟವಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಮುಖೇಶ್ ಅಂಬಾನಿ ತಮ್ಮ ದಲ್ಲಾಳಿಗಳನ್ನು ರೈತರ ವಿರುದ್ಧ ಛೂಬಿಟ್ಟರು. ಆದರೂ ಇವೆಲ್ಲವಕ್ಕೂ ಜಗ್ಗದ ರೈತರು ಐಕ್ಯತೆಯನ್ನು ಪ್ರದರ್ಶಿಸಿ, ನಾಲ್ಕು ವರ್ಷಗಳ ನಂತರ ಭೂಮಿಯನ್ನು ಉಳಿಸಿಕೊಂಡರು. ಚನ್ನರಾಯಪಟ್ಟಣದ ಎಲ್ಲಾ ರೈತರಿಗೆ ನನ್ನ ಮನವಿ ಏನೆಂದರೆ, ಇದುವರೆಗೂ ಉಳಿಸಿಕೊಂಡು ಬಂದಿರುವ ನಿಮ್ಮ ಐಕ್ಯತೆಯನ್ನು ಹೀಗೇ ಮತ್ತಷ್ಟು ಗಟ್ಟಿಯಾಗಿ ಮುಂದುವರೆಸಿ, ಭೂಸ್ವಾಧೀನವನ್ನು ಸಂಪೂರ್ಣ ಕೈಬಿಟ್ಟಿರುವ ಆದೇಶವನ್ನು ಪಡೆಯಲು ಸಾಧ್ಯವಾಗಬೇಕು. ಅದಕ್ಕಾಗಿ ಈ ಧರಣಿ ಸ್ಥಳವನ್ನು ಇನ್ನೂ ಉಳಿಸಿಕೊಂಡಿರುವ ನೀವು ಅಭಿನಂದನಾರ್ಹರು.

ಬೆಳೆಗಳಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ

ರೈತ ಮುಕುಂದ ಅವರ ಮಾವಿನ ತೋಟಕ್ಕೆ ಭೇಟಿ ನೀಡಿದಾಗ,

ಪುಟ 14 ನೋಡಿ

ಚುನಾವಣಾ ಆಯೋಗಕ್ಕೆ ಸಲಹೆ, ನಿರ್ದೇಶನದ ನಂತರ ಈಗ ಆದೇಶ



ಕೈಬಿಡಲಾದ ಹೆಸರುಗಳ ಪಟ್ಟಿಯನ್ನು ಕಾರಣ ಸಹಿತ ಆಗಸ್ಟ್ 19ರ ಸಂಜೆಯ ಒಳಗೆ ಪ್ರಕಟಿಸಿ

ಈ ಆದೇಶದಲ್ಲಿ, ಇಬ್ಬರು ನ್ಯಾಯಾಧೀಶರ ಸುಪ್ರಿಂ ಕೋರ್ಟ್ ಪೀಠವು, ಹೆಸರು ಸೇರಿಸದಿರಲು ಕಾರಣಗಳೊಂದಿಗೆ ಮತಗಟ್ಟೆವಾರು, ಈ ಎಲ್ಲ ಹೆಸರುಗಳನ್ನು ಹುಡುಕಬಹುದಾದ ಜನಸ್ನೇಹಿ ರೀತಿಯಲ್ಲಿ ಪಟ್ಟಿಯನ್ನು ಜಿಲ್ಲಾ ಚುನಾವಣಾ ಅಧಿಕಾರಿಗಳ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಬೇಕು ಎಂದು ಹೇಳಿದೆ.

ಕಾರಣಗಳನ್ನು ಹೊಂದಿರುವ ಭೌತಿಕ ಪಟ್ಟಿಗಳನ್ನು ಮತಗಟ್ಟೆ–ಮಟ್ಟದ ಅಧಿಕಾರಿಗಳು ಮತ್ತು ಬ್ಲಾಕ್ ಅಭಿವೃದ್ಧಿ/ ಪಂಚಾಯತ್ ಕಚೇರಿಗಳ ಸೂಚನಾ ಫಲಕಗಳಲ್ಲಿ ಪ್ರದರ್ಶಿಸಬೇಕು. ಬಿಹಾರದ ಮುಖ್ಯ ಚುನಾವಣಾಧಿಕಾರಿಯು ಪಟ್ಟಿಯ ಸಾಫ್ಟ್ ಪ್ರತಿಗಳನ್ನು ತಮ್ಮ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲು ಕಾರಣಗಳೊಂದಿಗೆ ಪಡೆಯಬೇಕು ಹಾಗೂ ಪ್ರಾದೇಶಿಕ ಮತ್ತು ಇಂಗ್ಲೀಷ್ ಪತ್ರಿಕೆಗಳು, ರೇಡಿಯೋ, ಟಿವಿ ಮತ್ತು ಭಾರತ ಚುನಾವಣಾ ಆಯೋಗದ ಅಧಿಕೃತ ಸಾಮಾಜಿಕ ಮಾಧ್ಯಮ ವೇದಿಕೆಗಳ ಮೂಲಕ ಇದಕ್ಕೆ ವ್ಯಾಪಕ ಪ್ರಚಾರ ನೀಡಬೇಕು. ಈ ಸಾರ್ವಜನಿಕ ಸೂಚನೆಯಲ್ಲಿ, ಬಾಧಿತ ವ್ಯಕ್ತಿಗಳು ತಮ್ಮ ಆಧಾರ್ ಪ್ರತಿಯೊಂದಿಗೆ ಆಕ್ಷೇಪಣೆಗಳನ್ನು ಎತ್ತಬಹುದು, ಇದಕ್ಕೆ ಆಧಾರ್ ಅನ್ನು ಗುರುತು ಮತ್ತು ನಿವಾಸದ ಪುರಾವೆಯಾಗಿ ಪರಿಗಣಿಸಲಾಗುತ್ತದೆ ಎಂದು ನಿರ್ದಿಷ್ಟವಾಗಿ ಉಲ್ಲೇಖಿಸಿರಬೇಕು ಎಂದು ಆದೇಶದಲ್ಲಿ ಹೇಳಲಾಗಿದೆ.

ಬಿಎಲ್‌ಒಗಳು/ ಜಿಲ್ಲಾ ಚುನಾವಣಾ ಅಧಿಕಾರಿಗಳಿಂದ ಈ ಆದೇಶದ ಪಾಲನೆಯ ಪುರಾವೆಗಳನ್ನು ಕಲೆಹಾಕಿ, ಒಟ್ಟು ಸ್ಥಿತಿಯ ವರದಿಯನ್ನು ಆಗಸ್ಟ್ 22ರಂದು ಮುಂದಿನ ವಿಚಾರಣೆ ವೇಳೆಯಲ್ಲಿ ಪೀಠದ ಪರಿಗಣನೆಗೆ ಸಲ್ಲಿಸಬೇಕು ಎಂದೂ ಆದೇಶದಲ್ಲಿ ಹೇಳಲಾಗಿದೆ.

ಏಕೆ ಕೈಬಿಡಲಾಗಿದೆ ಎಂಬಿತ್ಯಾದಿ ವಿವರಗಳನ್ನು ಕೊಟ್ಟಿಲ್ಲ

ಕೈಬಿಟ್ಟ ಸುಮಾರು 65 ಲಕ್ಷ ಮತದಾರರ ವಿವರಗಳನ್ನು ರಾಜಕೀಯ ಪಕ್ಷಗಳಿಗೆ ಕೊಡಲಾಗಿದೆ ಎಂದು ಆಯೋಗ ಹೇಳಿಕೊಂಡರೂ, ವಾಸ್ತವವಾಗಿ ಹೆಸರುಗಳನ್ನು ಏಕೆ ಕೈಬಿಡಲಾಗಿದೆ ಎಂಬಿತ್ಯಾದಿ ವಿವರಗಳನ್ನು ಕೊಟ್ಟಿಲ್ಲ, ಅಲ್ಲದೆ ಬ್ಲಾಕ್ ಮಟ್ಟದ ಪಟ್ಟಿಗಳನ್ನು ರಾಜಕೀಯ ಪಕ್ಷಗಳಿಗೆ ನಿರಾಕರಿಸಲಾಗಿದೆ ಎಂದು ಎಸ್‌ಐಆರ್ ಅನ್ನು ಪ್ರಶ್ನಿಸಿದ ಅರ್ಜಿದಾರರಲ್ಲಿ ಒಬ್ಬರಾದ ಎಡಿಆರ್ ಸಲ್ಲಿಸಿದ ಅರ್ಜಿಯನ್ನು ಅನುಸರಿಸಿ, ನ್ಯಾಯಪೀಠ ಆಗಸ್ಟ್ 9ರ ಒಳಗೆ ಎಡಿಆರ್ ಎತ್ತಿರುವ ವಿಷಯಗಳಿಗೆ ಉತ್ತರಿಸುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿತು.

ಕರಡು ಪಟ್ಟಿ ಪ್ರಕಟವಾದ ಎರಡು ದಿನಗಳ ನಂತರ ಆಯೋಗವು, ಪರಿಷ್ಕರಣೆಯ ಕಾರ್ಯ ಯಶಸ್ವಿಯಾಗಿ ನಡೆದಿದೆ, ಯಾವ ರಾಜಕೀಯ ಪಕ್ಷದಿಂದಲೂ ಆಕ್ಷೇಪಣೆಗಳು ಬಂದಿಲ್ಲ ಎಂದೂ ಹೇಳಿತ್ತು. ವಾಸ್ತವವಾಗಿ, ಆಯೋಗ ಪ್ರಕಟಿಸಿರುವ ಪಟ್ಟಿ ಮತ್ತು ಲೋಕಸಭಾ ಚುನಾವಣೆಗಳ ಮೊದಲು ಜನವರಿ 2024ರಲ್ಲಿ ಪ್ರಕಟಿಸಿದ್ದ ಪಟ್ಟಿ ಪರಸ್ಪರ ಹೋಲಿಸುವ ರೀತಿಯಲ್ಲಿ ಇಲ್ಲ, ಇದನ್ನು ಉದ್ದೇಶಪೂರ್ವಕವಾಗಿಯೇ ಮಾಡಲಾಗಿದೆ ಎಂದು ಬಿಜೆಪಿ ಬಿಟ್ಟು ಉಳಿದೆಲ್ಲ ಪಕ್ಷಗಳು ಆಕ್ರೋಶ ವ್ಯಕ್ತಪಡಿಸಿದ್ದವು. ಈ ಹಿನ್ನೆಲೆಯಲ್ಲಿ ಸುಪ್ರಿಂ ಕೋರ್ಟ್ ನ್ಯಾಯಪೀಠದ ಆಗಸ್ಟ್ 6ರ ನಿರ್ದೇಶನ ಬಂದಿತ್ತು. ಆದರೂ ಚುನಾವಣಾ ಆಯೋಗ ಕಾನೂನಿನ ಪ್ರಕಾರ ತಾನು ಈ ವಿವರಗಳನ್ನು ನೀಡಬೇಕಾಗಿಲ್ಲ ಎಂಬ ನಿಲುವನ್ನು ತಳೆಯಿತು ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.

‘.. 15 ಮಂದಿಯನ್ನು ತರುವುದು’ ಹೇಗೆ?

ಈ 65 ಲಕ್ಷ ಮಂದಿ ಜುಲೈ 25ರ ವರೆಗೆ ಗಣತಿ ಪತ್ರಗಳನ್ನು ಸಲ್ಲಿಸಿಲ್ಲವಾದ್ದರಿಂದ ಹೀಗಾಗಿದೆ ಎಂದು ತಿಳಿಸಲಾಗಿತ್ತು. ಇವರಲ್ಲಿ 22 ಲಕ್ಷ ಮಂದಿ ನಿಧನರಾಗಿರುವವರು, 36 ಲಕ್ಷ ಮಂದಿ ‘ಪತ್ತೆಯಾಗದವರು’ ಅಂದರೆ ಉದ್ಯೋಗ ಅರಸಿ ವಲಸೆ ಹೋದವರು ಹಾಗೂ ಸುಮಾರು 7 ಲಕ್ಷ ಮಂದಿಯ ಹೆಸರುಗಳು ಒಂದಕ್ಕಿಂತ ಹೆಚ್ಚು ಮತದಾರ ಕ್ಷೇತ್ರಗಳಲ್ಲಿ ಇದ್ದವುಗಳು ಎಂದು ಒಂದು ವಾರದ ಹಿಂದೆ ಆಯೋಗ ಹೇಳಿತ್ತು. ಇದನ್ನು ಜುಲೈ 28–29ರ ವಿಚಾರಣೆಯ ವೇಳೆಗೆ ಗಮನಕ್ಕೆ ತಂದಾಗ ನ್ಯಾಯಪೀಠ “65 ಲಕ್ಷದಷ್ಟು ಮತದಾರರು (ಪಟ್ಟಿಯಲ್ಲಿ) ಇರಲಿಕ್ಕಿಲ್ಲ ಎಂಬುದು ನಿಮ್ಮ ಸಂದೇಹ, ಚುನಾವಣಾ ಆಯೋಗ 2025ರ ಪಟ್ಟಿಗೆ ಸಂಬಂಧಿಸಿದಂತೆ ಸರಿಪಡಿಕೆಗಳನ್ನು ಪ್ರಯತ್ನಿಸುತ್ತಿದೆ. ನಾವು ನ್ಯಾಯಾಂಗ ಪ್ರಾಧಿಕಾರವಾಗಿ ಇದನ್ನು ಗಮನಿಸುತ್ತೇವೆ. ಸಾಮೂಹಿಕ ಹೊರಪಡಿಕೆ ಇದ್ದರೆ, ನಾವು ತಕ್ಷಣವೇ ಪ್ರವೇಶಿಸುತ್ತೇವೆ, ತಾವು ಬದುಕಿದ್ದೇವೆ, ಆದರೂ ಹೊರಪಡಿಸಲಾಗಿದೆ ಎನ್ನುವ 15 ಮಂದಿಯನ್ನು ತನ್ನಿ” ಎಂದು ನ್ಯಾಯಪೀಠದ ಒಬ್ಬ ನ್ಯಾಯಮೂರ್ತಿಗಳು ಹೇಳಿರುವುದಾಗಿಯೂ ವರದಿಯಾಗಿತ್ತು.

ಆದರೆ ಈಗ ಪ್ರಕಟಿಸಿರುವ ಕರಡು ಪಟ್ಟಿಯಲ್ಲಿ ಅರ್ಜಿದಾರರು ಸಂದೇಹ ಪಟ್ಟಂತೆ ಈ 65 ಲಕ್ಷ ಮಂದಿಯ ಹೆಸರುಗಳು ಇಲ್ಲ ಮಾತ್ರವಲ್ಲ, ಅವರನ್ನು ಏಕೆ ಕೈಬಿಡಲಾಗಿದೆ ಎಂಬ ಬಗ್ಗೆ ಯಾವ ವಿವರಗಳೂ ಇಲ್ಲ. ಆದ್ದರಿಂದ ಯಾವ ಆಧಾರದ ಮೇಲೆ ನ್ಯಾಯಾಲಯ ಮಧ್ಯಪ್ರವೇಶಿಸುವಂತೆ ಕೇಳುವುದು ಎಂಬ ಪ್ರಶ್ನೆ ಸಹಜವಾಗಿಯೇ ಎದ್ದಿತ್ತು.

94 ಲಕ್ಷದಿಂದ 1.5 ಕೋಟಿ ಜನರ ‘ವೋಟ್ ಬಂದಿ’?

ಈ ‘ವಿಶೇಷ ತೀವ್ರ ಪರಿಷ್ಕರಣೆ’ ಅಥವಾ ಎಸ್‌ಐಆರ್ ನಿಬಂಧನೆಗಳ ಪ್ರಕಾರ ಈ 65 ಲಕ್ಷ ಮಂದಿ ಭಾರತದ ನಾಗರಿಕರಾಗಿ ತಮ್ಮ ಬಹು ಅಮೂಲ್ಯವಾದ ಮತದಾನದ ಹಕ್ಕನ್ನು ಕಳಕೊಳ್ಳುತ್ತಾರೆ. ಆದರೆ ಈ ಸಂಖ್ಯೆ ಇಷ್ಟಕ್ಕೇ ನಿಲ್ಲುವುದಿಲ್ಲ ಎಂದು ಪರಿಣಿತರು ಲೆಕ್ಕ ಹಾಕಿದ್ದಾರೆ.

ಈ ಪ್ರಕ್ರಿಯೆಯ ತರಾತುರಿಯ ಬಗ್ಗೆ ಬಹಳಷ್ಟು ಟೀಕೆಗಳು ಬಂದಾಗ, ಆಯೋಗ ಅಗತ್ಯ ದಾಖಲೆಗಳನ್ನು ನಂತರವೂ ಕೊಡಬಹುದು ಎಂದಿತ್ತು. ಇದರಿಂದಾಗಿ ಕರಡು ಪಟ್ಟಿಯಲ್ಲಿ ಇರುವವರಲ್ಲಿ ಶೇ. 75ರಷ್ಟು ಮಂದಿ ಅಗತ್ಯ ದಾಖಲೆಗಳನ್ನು ಕೊಟ್ಟಿಲ್ಲ. ನ್ಯಾಯಾಲಯ ಸೂಚಿಸಿದಂತೆ ಆಧಾರ್ ಮತ್ತು ಮತದಾರ ಕಾರ್ಡ್(ಎಪಿಕ್)ಗಳನ್ನು ಪರಿಗಣಿಸಲಾಗುತ್ತದೆಯೇ ಎಂದು ಇನ್ನೂ ಆಯೋಗ ಹೇಳಿಲ್ಲ. ಅದರ ವಾದದ ಪ್ರಕಾರ ಪರಿಗಣಿಸದೇ ಇದ್ದಲ್ಲಿ, ಕರಡು ಪಟ್ಟಿಯಲ್ಲಿ ಇರುವವರಲ್ಲಿಯೂ ಬಹಳಷ್ಟು ಮಂದಿ ಪಟ್ಟಿಯಿಂದ ಹೊರಗಾಗುತ್ತಾರೆ.

ಈ ಸಂಖ್ಯೆ ಕನಿಷ್ಟ 94 ಲಕ್ಷದಿಂದ 1,5 ಕೋಟಿಯವರೆಗೂ ಹೋಗಬಹುದು ಎಂದು ಲೆಕ್ಕ ಹಾಕಲಾಗಿದೆ. ಏಕೆಂದರೆ ಜುಲೈ 2025ರ ವೇಳೆಗೆ ಬಿಹಾರದ ಜನಸಂಖ್ಯೆಯಲ್ಲಿ 18 ವರ್ಷಕ್ಕೆ ಮೇಲ್ಪಟ್ಟವರ ಸಂಖ್ಯೆ, ಅಂದರೆ ಮತದಾನದ ಅರ್ಹತೆ ಇರುವವರ ಸಂಖ್ಯೆ 8.18 ಕೋಟಿ. ಆಗಸ್ಟ್ 1, 2025ರ ಕರಡು ಪಟ್ಟಿಯಲ್ಲಿ ಇರುವವರ ಸಂಖ್ಯೆ 7.24 ಕೋಟಿ. ಅಂದರೆ, ಸರಕಾರೀ ದಾಖಲೆಗಳು ಮತ್ತು ಚುನಾವಣಾ ಆಯೋಗದ ದಾಖಲೆಗಳಲ್ಲಿನ ಅಂಕಿ–ಅಂಶಗಳ ಪ್ರಕಾರವೇ ಮತದಾನ ಪಟ್ಟಿಗಳಲ್ಲಿ ಇಲ್ಲದ ಅರ್ಹ ಮತದಾರರ ಸಂಖ್ಯೆ 94 ಲಕ್ಷ (8.18–7.24=94 ಲಕ್ಷ) ಆಗುತ್ತದೆ. ಇದು ಮತದಾನದ ಹಕ್ಕು ನಿರಾಕರಿಸಲ್ಪಡುವವರ ಕನಿಷ್ಟ ಸಂಖ್ಯೆ. ಅಂದರೆ ಅರ್ಹ ಮತದಾರರಲ್ಲಿ ಕನಿಷ್ಟ ಶೇ. 12.

ಬಿಹಾರದಲ್ಲಿ ‘ವಿಶೇಷ ತೀವ್ರ ಪರಿಷ್ಕರಣೆ’ (ಎಸ್‌ಐಆರ್) ಎಂಬ ಕಾರ್ಯಕ್ರಮದ ನಂತರ ಚುನಾವಣಾ ಆಯೋಗ ಆಗಸ್ಟ್ 1 ರಂದು ಪ್ರಕಟಿಸಿದ ಕರಡು ಪಟ್ಟಿಯಲ್ಲಿ ಹಿಂದಿನ ಮತದಾರ ಪಟ್ಟಿಯಲ್ಲಿದ್ದ ಸುಮಾರು 65 ಲಕ್ಷ ಹೆಸರುಗಳನ್ನು ಕೈಬಿಡಲಾಗಿದೆ ಎಂಬುದನ್ನು ಗಮನಿಸಿದ ಸುಪ್ರಿಂ ಕೋರ್ಟ್, ಹೀಗೆ ಕೈಬಿಡಲಾಗಿರುವ ಹೆಸರುಗಳ ಪಟ್ಟಿಯನ್ನು ಆಗಸ್ಟ್ 19, 2025ರ ಸಂಜೆ 5 ಗಂಟೆಯೊಳಗೆ ಪ್ರಕಟಿಸಬೇಕು ಎಂದು ಚುನಾವಣಾ ಆಯೋಗಕ್ಕೆ ಮಧ್ಯಂತರ ಆದೇಶ ನೀಡಿದೆ.

ಇದಲ್ಲದೆ, ರಾಜ್ಯದಲ್ಲಿ ಮುಂದಿನ ವಿಧಾನಸಭಾ ಚುನಾವಣೆ ನಡೆಯುವ ಅಕ್ಟೋಬರ್ 2025ರ ವೇಳೆಗೆ, 18 ವರ್ಷ ತುಂಬುವ ಸುಮಾರು 20ಲಕ್ಷ ಯುವಜನರ ಹೆಸರುಗಳು ಸೇರಿಲ್ಲ ಎಂದೂ ಅಂದಾಜು ಮಾಡಲಾಗಿದೆ.

ಎಸ್‌ಐಆರ್ ನಿಬಂಧನೆಗಳ ಪ್ರಕಾರ ಬ್ಲಾಕ್ ಮಟ್ಟದ ಅಧಿಕಾರಿ(ಬಿಎಲ್‌ಒ)ಗಳು ಗಣತಿ ಪ್ರಪತ್ರವನ್ನು ಸಲ್ಲಿಸಿದವರ ಬಗ್ಗೆಯೂ ‘ಶಿಫಾರಸು ಮಾಡಲ್ಪಡದವರು’ ಎಂದು ಷರಾ ಹಾಕಬಹುದು. ಇಂತವರನ್ನು ಸೇರಿಸುವ ಅಥವ ಕೈಬಿಡುವ ಅಂತಿಮ ನಿರ್ಧಾರವನ್ನು ಚುನಾವಣಾ ನೋಂದಣಿ ಅಧಿಕಾರಿ(ಇಆರ್‌ಒ) ‘ಸ್ಥಳೀಯ ತನಿಖೆ’ಯ ನಂತರ ಕೈಗೊಳ್ಳುತ್ತಾರೆ.

ಇವೆಲ್ಲ ಪ್ರಕ್ರಿಯೆಗಳನ್ನು ಹಾದು ಹೋಗುವಾಗ ಇನ್ನೂ 50–60 ಲಕ್ಷ ಮಂದಿಯ ಹೆಸರುಗಳು ಕಡಿತವಾಗಬಹುದು, ಅಂದರೆ ಎಸ್‌ಐಆರ್‌ನಲ್ಲಿ ಸುಮಾರು 1.5 ಕೋಟಿ (ಸುಮಾರು ಶೇ.19) ಬಿಹಾರಿ ಜನರಿಗೆ ಮತದಾನದ ಹಕ್ಕು ನಿರಾಕರಿಸಲ್ಪಡಬಹುದು ಎಂದು ಲೆಕ್ಕ ಹಾಕಲಾಗಿದೆ. (ಪವನ್ ಕೊರಾಡ, ದಿ ವೈರ್, ಆಗಸ್ಟ್ 5)

ಈ ಹಿಂದೆ 2024ರಲ್ಲಿ 18 ವರ್ಷ ಮೇಲ್ಪಟ್ಟವರ ಸಂಖ್ಯೆ 7.93 ಕೋಟಿ ಇತ್ತು. ಮತದಾರರ ಪಟ್ಟಿಯಲ್ಲಿ ಇದ್ದವರ ಸಂಖ್ಯೆ 7.71 ಕೋಟಿ ಆಗಿತ್ತು. ಅಂದರೆ ಶೇ. 97ರಷ್ಟು ಮಂದಿ ಮತದಾರರಾಗಿ ಸೇರ್ಪಡೆಯಾಗಿದ್ದರು. ಈಗ 8.18 ಕೋಟಿ ಅರ್ಹ ಜನಸಂಖ್ಯೆಯಲ್ಲಿ ಕರಡು ಪಟ್ಟಿಗಳಲ್ಲಿ ಇರುವವರು 7.23 ಕೋಟಿ, ಅಂದರೆ ಶೇ. 88. ಒಟ್ಟು ಶೇ. 9ರಷ್ಟು ಕಡಿತ.

ಹೊರದಬ್ಬಲ್ಪಟ್ಟವರು ಯಾರು?

ಚುನಾವಣಾ ಆಯೋಗ ಕೈಬಿಟ್ಟವರ ವಿವರಗಳನ್ನು, ಅದೂ ಕ್ಷೇತ್ರವಾರಾಗಿ ನೀಡಿಲ್ಲವಾದ್ದರಿಂದ ಹೀಗೆ ಮತದಾನದ ಹಕ್ಕು ನಿರಾಕರಿಸಲ್ಪಟ್ಟವರು ಯಾರು ಎಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಆಯೋಗ ವಿವರಗಳನ್ನು ಒದಗಿಸಿದರೆ ಇದು ಹೆಚ್ಚು ಸ್ಪಷ್ಟವಾಗಬಹುದು. ಆದರೂ ಎಸ್‌ಐಆರ್‌ನ ತರಾತುರಿ ಮತ್ತು ಕಠಿಣ ನಿಬಂಧನೆಗಳು ಮುಖ್ಯವಾಗಿ ಸಮಾಜದ ಅಂಚಿನಲ್ಲಿರುವ ಜನವಿಭಾಗಗಳಿಗೆ ಮತದಾನದ ಹಕ್ಕನ್ನು ವಂಚಿಸುತ್ತದೆ ಎಂಬ ಸಂದೇಹ ಕರಡು ಪಟ್ಟಿಯ ಪ್ರಾಥಮಿಕ ವಿಶ್ಲೇಷಣೆಯಲ್ಲಿ ದೃಢಪಡುತ್ತಿರುವಂತೆ ಕಾಣುತ್ತದೆ ಎನ್ನಲಾಗಿದೆ.


ಕರಡು ಪಟ್ಟಿಯಲ್ಲಿ ಇಲ್ಲದವರ ಪ್ರಮಾಣ (%) ರಾಜ್ಯದ ಸರಾಸರಿಗಿಂತ ಹೆಚ್ಚಿರುವ 10 ಜಿಲ್ಲೆಗಳಲ್ಲಿ 4 ರಾಜ್ಯದ ಅತ್ಯಂತ ಹೆಚ್ಚು ಬಡತನ ಇರುವ ಜಿಲ್ಲೆಗಳು –ಪೂರ್ಣಿಯ (12.07%), ಕಿಷನ್‌ಗಂಜ್ (11.82%), ಸೀತಾಮಡಿ (9.32%) ಮತ್ತು ಸಹರ್ಸಾ (9,45%). ಪೂರ್ಣಿಯ, ಕಿಷನ್‌ಗಂಜ್ ಮತ್ತು ಸೀತಾಮಡಿ ಜೊತೆಗೆ ಮಧುಬನಿ (10.44%) ಮುಸ್ಲಿಂ ಸಮುದಾಯ ಬಹುಸಂಖ್ಯೆಯಲ್ಲಿರುವ ಜಿಲ್ಲೆಗಳು. ಈ 10 ಜಿಲ್ಲೆಗಳಲ್ಲಿ ವಲಸೆ ಕಾರ್ಮಿಕರ ಪ್ರಮಾಣ ಬಹಳ ಹೆಚ್ಚಿರುವ ಮತ್ತು ಬುಡಕಟ್ಟು ಸಮುದಾಯಗಳ ಪ್ರಮಾಣ ಹೆಚ್ಚಿರುವ 5 ಜಿಲ್ಲೆಗಳೂ ಸೇರಿವೆ ಎನ್ನುತ್ತಾರೆ ಪತ್ರಕರ್ತೆ ಶ್ರಾವಸ್ತಿ ದಾಸ್‌ಗುಪ್ತ. (ದಿ ವೈರ್, ಆಗಸ್ಟ್ 5) ಮತ್ತೆ ಮತ್ತೆ ಪ್ರವಾಹಗಳಿಗೆ ತುತ್ತಾಗುವ ಪ್ರದೇಶಗಳಲ್ಲೂ ಮತದಾರ ಪಟ್ಟಿಗಳಲ್ಲಿ ಹೆಸರಿಲ್ಲದವರ ಪ್ರಮಾಣ ಸರಾಸರಿಗಿಂತ ಹೆಚ್ಚಿದೆ.

ಜುಲೈ 16ರಂದು ಬಿಹಾರದ ಮುಖ್ಯ ಚುನಾವಣಾಧಿಕಾರಿ ಪ್ರಕಟಿಸಿದ ಗಣತಿ ಪ್ರಪತ್ರಗಳನ್ನು ಸಲ್ಲಿಸದ 1.49 ಮತದಾರರ ಪಟ್ಟಿಯನ್ನು ವಿಶ್ಲೇಷಿಸಿದ ಆಯುಷ್ ತಿವಾರಿ (ಸ್ಕ್ರಾಲ್, ಜುಲೈ 31) ಕೂಡ ಸುಮಾರಾಗಿ ಇದೇ ತೀರ್ಮಾನಕ್ಕೆ ಬರುತ್ತಾರೆ.

ಕರಡು ಪಟ್ಟಿಯ ವಿಶ್ಲೇಷಣೆ ನಡೆಸಿರುವ ಇನ್ನೂ ನಾಲ್ಕು ವಿಶ್ಲೇಷಕರು (ದಿ ಹಿಂದೂ, ಡಾಟಾ ಪಾಯಿಂಟ್, ಆಗಸ್ಟ್ 6) ಕೂಡ ಈ ಕರಡು ಪಟ್ಟಿಯ ಪ್ರಾಥಮಿಕ ವಿಶ್ಲೇಷಣೆ ಕಳವಳಕಾರಿ ಪ್ರವೃತ್ತಿಗಳನ್ನು ತೋರಿಸುತ್ತಿದೆ ಎಂದಿದ್ದಾರೆ. ಅವರೂ ಕೈಬಿಟ್ಟ ಮತದಾರರ ಪ್ರಮಾಣ ಮುಸ್ಲಿಂ–ಬಾಹುಳ್ಯದ ಮತ್ತು ಹೆಚ್ಚಿನ ಪ್ರಮಾಣದಲ್ಲಿ ಹೊರವಲಸೆ ಇರುವ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣ ಬಂದಿದೆ ಎಂದು ಹೇಳುತ್ತಾರೆ.

ಇವರ ವಿಶ್ಲೇಷಣೆಯಲ್ಲಿ ಕಂಡುಬಂದ ಮತ್ತೊಂದು ಗಮನಾರ್ಹ ಸಂಗತಿಯೆಂದರೆ, ಮತದಾರ ಪಟ್ಟಿಗಳಲ್ಲಿ ಕಾಣೆಯಾದ ಹೆಸರುಗಳಲ್ಲಿ ಮಹಿಳೆಯರ ಸಂಖ್ಯೆಯೇ ಹೆಚ್ಚು. ಜನವರಿ 2025ರ ಪಟ್ಟಿಗಳಲ್ಲಿದ್ದ 25 ಲಕ್ಷ ಪುರುಷರ ಹೆಸರುಗಳು ಎಸ್‌ಐಆರ್ ನಂತರದ ಪಟ್ಟಿಗಳಲ್ಲಿ ಕಾಣೆಯಾಗಿದ್ದರೆ, 31 ಲಕ್ಷ ಮಹಿಳೆಯರ ಹೆಸರುಗಳು ಕಾಣದಾಗಿವೆ ಎಂದು ಕಂಡು ಬಂದಿದೆ. ಉದ್ಯೋಗ ಅರಸಿ ವಲಸೆ ಹೋಗುವವರ ಪ್ರಮಾಣ ಪುರುಷರಲ್ಲೇ ಹೆಚ್ಚು, ಮರಣದರ ಸುಮಾರಾಗಿ ಒಂದೇ ಆಗಿದೆ (ಮಹಿಳೆಯರಲ್ಲಿ ತುಸು ಕಡಿಮೆಯೇ ಇದೆ), ಆದರೂ





ಭಾರತದ ಮೇಲೆ ಸಾಮ್ರಾಜ್ಯಶಾಹಿಯ ದಾದಾಗಿರಿ

ಸ್ವಾವಲಂಬನೆಗೆ ಆದ್ಯತೆ ನೀಡಿದ ನಿಯಂತ್ರಣ ನೀತಿಗಳ ಆಳ್ವಿಕೆಯು ಭಾರತದ ಅಲಿಪ್ತ ವಿದೇಶಾಂಗ ನೀತಿಯೊಂದಿಗೆ ಮತ್ತು ಆ ಮೂಲಕ ಸಾಮ್ರಾಜ್ಯಶಾಹಿಯ ಬೆದರಿಕೆಯನ್ನು ಎದುರಿಸುವ ಇಚ್ಚಾಶಕ್ತಿ ಮತ್ತು ಸಾಮರ್ಥ್ಯದೊಂದಿಗೆ ತಳಕು ಹಾಕಿಕೊಂಡಿತ್ತು. ಆದರೆ, ಸ್ವಾವಲಂಬನೆಯನ್ನು ಬುಡಮೇಲು ಮಾಡುವ ಬಗ್ಗೆಯೇ ಹೆಮ್ಮೆಪಡುವ ನವ ಉದಾರವಾದಿ ಆಳ್ವಿಕೆಯು 'ಭಾರತದಲ್ಲಿ ತಯಾರಿಕೆ ಮಾಡಿ' ಎಂದು ವಿದೇಶಿ ಬಂಡವಾಳವನ್ನು ಆಹ್ವಾನಿಸುತ್ತದೆ. ಅಭಿವೃದ್ಧಿಶೀಲ ದೇಶವನ್ನು ಅದರ ಸ್ವಾವಲಂಬನೆಯ ಪ್ರಯತ್ನಗಳಿಂದ ದೂರ ಸರಿಯುವಂತೆ ಮಾಡುವುದನ್ನೇ ಮೂಲೋದ್ದೇಶವಾಗಿ ಹೊಂದಿರುವ ನವ ಉದಾರವಾದವನ್ನು ಒಪ್ಪಿಕೊಂಡ ದೇಶವು, ತೋಳು ತಿರುಚುವ ಸಾಮ್ರಾಜ್ಯಶಾಹಿಗೆ ತನ್ನನ್ನು ತಾನೇ ಗುರಿಯಾಗಿ ಮಾಡಿಕೊಳ್ಳುತ್ತದೆ, ಸಾಮ್ರಾಜ್ಯಶಾಹಿಯ ದಾದಾಗಿರಿಗೆ ಶರಣಾಗಲು ಮುಂದಾಗುತ್ತದೆ. ನವ ಉದಾರವಾದದ ಅನುಸರಣೆಯು ದೇಶದ ಸ್ವಾತಂತ್ರ್ಯವನ್ನು ನಿರ್ಬಂಧಿಸಿದೆ. ಡೊನಾಲ್ಡ್ ಟ್ರಂಪ್‌ರ ದಾದಾಗಿರಿಯ ಮಂಗಾಟಗಳು ಈ ಅಂಶವನ್ನು ಧಾರಾಳವಾಗಿ ಸ್ಪಷ್ಟಪಡಿಸುತ್ತವೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು. ಕೆ.ಎಂ.ನಾಗರಾಜ್



ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಭಾರತದ ಜನತೆ ಸಾಧಿಸಿದ ವಿಜಯದ 78ನೇ ವಾರ್ಷಿಕೋತ್ಸವದ ಆಚರಣೆಯ ಸಂದರ್ಭದಲ್ಲಿ, ಸಾಮ್ರಾಜ್ಯಶಾಹಿ ಅಮೆರಿಕವು ತನ್ನ ಆದೇಶವನ್ನು ಪಾಲಿಸುವಂತೆ ಭಾರತವನ್ನು ಬಹಿರಂಗವಾಗಿ ಬೆದರಿಸುತ್ತಿರುವುದು ಒಂದು ವಿಪರ್ಯಾಸವೇ ಸರಿ. ಈ ಬೆದರಿಕೆಯು ಸಾಮ್ರಾಜ್ಯಶಾಹಿಯ ಒಂದು ಲಕ್ಷಣವೂ ಹೌದು. ಹಾಗೆ ನೋಡಿದರೆ ಈ 78 ವರ್ಷಗಳ ಅವಧಿಯಲ್ಲಿ ತನ್ನ ಆದೇಶಗಳನ್ನು ಭಾರತವು ಪಾಲಿಸುವಂತೆ ಮಾಡಲು ಸಾಮ್ರಾಜ್ಯಶಾಹಿ ಅಮೆರಿಕವು ಹಲವಾರು ಪ್ರಯತ್ನ ಮಾಡಿದೆ. ಆದರೆ, ಈ ವರೆಗೆ ಮಾಡಿದ ಪ್ರಯತ್ನಗಳು ಮತ್ತು ಈಗ ಅದು ಮಾಡುತ್ತಿರುವ ಪ್ರಯತ್ನದ ನಡುವೆ ಎರಡು ಮೂಲಭೂತ ವ್ಯತ್ಯಾಸಗಳಿವೆ: ಮೊದಲನೆಯದು, ಈಗ ಮಾಡುತ್ತಿರುವ ಪ್ರಯತ್ನವು "ನಾವು ಹೇಳುತ್ತಿರುವುದನ್ನು ನಿಮ್ಮದೇ ಒಳಿತಿಗಾಗಿ ಮಾಡಿ" ಎನ್ನುವ ನಯವಾದ ಭಾಷೆಯಲ್ಲಿಲ್ಲ; ಅದು ನೇರವಾಗಿ ಗುಂಡು ಹೊಡೆದಂತಿದೆ: "ನಮ್ಮ ಒಳಿತಿಗಾಗಿ ನಾವು ಹೇಳುತ್ತಿರುವುದನ್ನು ಮಾಡದಿದ್ದರೆ ಶಿಕ್ಷೆ ನಿಮಗೆ ತಪ್ಪಿದ್ದಲ್ಲ". ಎರಡನೆಯ ವ್ಯತ್ಯಾಸವೆಂದರೆ, ಬೆದರಿಕೆಗಳು ಎದುರಾದಾಗ ಹಿಂದಿನ ಅವಧಿಯಲ್ಲಿ ಭಾರತ ಸರ್ಕಾರವು ಮುಲಾಜಿಲ್ಲದೆ ಸೆಟೆದು ನಿಲ್ಲುತ್ತಿತ್ತು; ಆದರೆ, ಇಂದಿನ ಭಾರತ ಸರ್ಕಾರವು ಅಡ್ಡ ಗೋಡೆಯ ಮೇಲೆ ದೀಪ ಇಟ್ಟಂತೆ ಮಿಶ್ರ ಸಂಕೇತಗಳನ್ನು ನೀಡುತ್ತಿದೆ. ಈ ಅಂಶವನ್ನು ವಿವರವಾಗಿ ನೋಡೋಣ.

ಸ್ವತಂತ್ರ ಭಾರತವು, ಸೋವಿಯತ್ ಒಕ್ಕೂಟವನ್ನು ಸುತ್ತುವರಿಯುವ ಉದ್ದೇಶದಿಂದ ಸಾಮ್ರಾಜ್ಯಶಾಹಿ ಅಮೆರಿಕವು ರಚಿಸಿದ SEATO ಮತ್ತು CENTO ದಂತಹ ಯಾವುದೇ ವಿಶ್ವವ್ಯಾಪೀ ಮಿಲಿಟರಿ ಕೂಟಗಳಿಗೆ ಸೇರಲು ನಿರಾಕರಿಸಿತು. ಬದಲಾಗಿ ಅಲಿಪ್ತ ನೀತಿಯನ್ನು ಅನುಸರಿಸುವುದನ್ನು ಆರಿಸಿಕೊಂಡ ಪರಿಣಾಮವಾಗಿ ಭಾರತವು ಅಮೆರಿಕದ ಕೆಂಗಣ್ಣಿಗೆ ಗುರಿಯಾಯಿತು. ಅಮೆರಿಕದ ಅಂದಿನ ವಿದೇಶಾಂಗ ಕಾರ್ಯದರ್ಶಿ ಜಾನ್ ಫಾಸ್ಟರ್ ಡಲ್ಲೆಸ್ "ನೀವು ನಮ್ಮೊಂದಿಗೆ ಇಲ್ಲವೆಂದರೆ ಆಗ ನೀವು ನಮ್ಮ ವಿರುದ್ಧ" ಎಂಬ ನಿಲುವನ್ನು ಮಂಡಿಸಿದ್ದರು. ಈ ನಿಲುವಿಗೆ ಅನುಗುಣವಾಗಿ ಅಮೆರಿಕವು ಭಾರತವನ್ನು ಹಗೆತನದಿಂದಲೇ ನಡೆಸಿಕೊಂಡಿತ್ತು. ಪಂಚವಾರ್ಷಿಕ ಯೋಜನೆಗಳ ಮೂಲಕ ಅಭಿವೃದ್ಧಿ ಸಾಧಿಸುವ ಮಹತ್ವಾಕಾಂಕ್ಷೆ ಹೊಂದಿದ್ದ ಅಂದಿನ ವರ್ಷಗಳಲ್ಲಿ ಸ್ವಾವಲಂಬನೆ, ಸಾರ್ವಜನಿಕ ವಲಯದ ನೇತೃತ್ವದಲ್ಲಿ ಭಾರೀ ಕೈಗಾರಿಕಾರಿಕೆಗಳಿಗಾಗಿ ಒಂದು ತಳಹದಿಯನ್ನು ನಿರ್ಮಿಸುವುದು ಮತ್ತು ಅರ್ಥವ್ಯವಸ್ಥೆಯ ಮೇಲೆ ಮುಂದುವರೆದ ದೇಶಗಳ ಬಂಡವಾಳಗಾರರು ಹೊಂದಿದ್ದ ಹಿಡಿತವನ್ನು ತೆಗೆದುಹಾಕುವುದಕ್ಕೆ ಒತ್ತು ನೀಡಲಾಗುತ್ತಿತ್ತು. ಅಮೆರಿಕದಿಂದಾಗಲಿ ಅಥವಾ ಅದು ನಿಯಂತ್ರಿಸುವ ವಿಶ್ವಬ್ಯಾಂಕ್‌ನಂತಹ ಸಂಸ್ಥೆಗಳಿಂದಾಗಲಿ ಯಾವುದೇ "ಅಭಿವೃದ್ಧಿ ನೆರವು" ಬರಲಿಲ್ಲ. ಭಾರತಕ್ಕೆ ಆಗಾಗ ಭೇಟಿ ನೀಡುತ್ತಿದ್ದ ಅಮೇರಿಕದ ಅನೇಕ ಆರ್ಥಿಕ "ತಜ್ಞರು" ಸ್ವಾವಲಂಬನೆಯ ಮೇಲಿನ ಈ ಆದ್ಯತೆಗೆ ಅಭಿವ್ಯಕ್ತಿ ನೀಡಿದ ಮಹಾಲನೋಬಿಸ್ ಕಾರ್ಯತಂತ್ರದ ವಿರುದ್ಧ "ಸಲಹೆ" ನೀಡಿದರು. (ಡೇನಿಯಲ್ ಮತ್ತು ಆಲಿಸ್ ಥಾರ್ನರ್ ಅವರ "Land and Labour in India" ಎಂಬ ಪುಸ್ತಕದಲ್ಲಿರುವ “Ploughing the Plan Under” ಎಂಬ ಪ್ರಬಂಧವನ್ನು ನೋಡಿ).

ಆದರೆ, ಸೋವಿಯತ್ ಒಕ್ಕೂಟದ ಅಚಲ ಬೆಂಬಲದೊಂದಿಗೆ, ಭಾರತವು ತನ್ನ ಅಲಿಪ್ತ ವಿದೇಶಾಂಗ ನೀತಿ ಮತ್ತು ಆರ್ಥಿಕ ಸ್ವಾವಲಂಬನೆಯ ನೀತಿಯನ್ನು ಮುಂದುವರೆಸಿತು ಮತ್ತು ಅರ್ಥವ್ಯವಸ್ಥೆಯ ಮೇಲೆ ಮುಂದುವರೆದ ದೇಶಗಳ ಬಂಡವಾಳಗಾರರು ಹೊಂದಿದ್ದ ಪ್ರಾಬಲ್ಯವನ್ನು ಎದುರಿಸಲು ಸಾರ್ವಜನಿಕ ವಲಯವನ್ನು ಬಳಸಿಕೊಂಡಿತು. ವಿದೇಶಿ ವಿನಿಮಯವನ್ನು ಒಂದು ತೀವ್ರ ಸ್ವರೂಪದ ಪಡಿತರಕ್ಕೆ ಒಳಪಡಿಸಬೇಕಾಗಿ ಬಂತು ಮತ್ತು ವರ್ಷಗಳ ಕಾಲ ಅದನ್ನು ಅನುಸರಿಸಿತೂ ಕೂಡ. ಡಲ್ಲೆಸ್ ಅವರ ಮರಣಾನಂತರ, 1950ರ ದಶಕದ ಅಂತ್ಯದ ವೇಳೆಗೆ, ತಾನು ತಳೆದ ವಿರೋಧಿ–ನಿಲುವು ನೀತಿಗಳು ಭಾರತದಂತಹ ದೇಶಗಳನ್ನು ಬಗ್ಗಿಸುವ ಬದಲು ತನಗೇ ಹಾನಿ ಮಾಡುತ್ತಿವೆ (ಮತ್ತು ಸೋವಿಯತ್ ಒಕ್ಕೂಟಕ್ಕೆ ಸಹಾಯ ಮಾಡುತ್ತಿವೆ) ಎಂಬುದನ್ನು ಅರಿತು ಹೆದರಿದ ಅಮೆರಿಕ ನಿಧಾನವಾಗಿ ತನ್ನ ನಿಲುವನ್ನು ಬದಲಿಸಿಕೊಂಡಿತು. ಐವತ್ತರ ದಶಕದ ಉತ್ತರಾರ್ಧದಲ್ಲಿ ಐಸೆನ್‌ಹೋವರ್ ಭಾರತಕ್ಕೆ ಭೇಟಿ ನೀಡಿದ ನಂತರ, ವಿಶ್ವಬ್ಯಾಂಕ್‌ನಿಂದ ಅಲ್ಪ ಸ್ವಲ್ಪ "ನೆರವು", ಅದೂ ಕೂಡ ಮೂಲಸೌಕರ್ಯ ಯೋಜನೆಗಳಿಗಾಗಿ ಮಾತ್ರವೇ, ಬರಲಾರಂಭಿಸಿತು.

ಆನಂತರ, ಬಾಂಗ್ಲಾದೇಶ ಯುದ್ಧದ ಸಮಯದಲ್ಲಿ ಬೆಂದ ಮನೆಯಲ್ಲಿ ಗಳ ಹಿರಿಯುವ ಸ್ವಭಾವದ ಅಮೆರಿಕಕ್ಕೆ ದೊರಕಲಿದ್ದ ಸುವರ್ಣಾವಕಾಶ ಭಾರತದ ಮಧ್ಯಪ್ರವೇಶದಿಂದಾಗಿ ಕೈತಪ್ಪಿಹೋದಾಗ, ಅಮೆರಿಕ ಸರ್ಕಾರವು ಅದೆಷ್ಟು ಕೋಪಗೊಂಡಿತು ಎಂದರೆ ಭಾರತವನ್ನು ಬೆದರಿಸಲು ತನ್ನ ವಿಮಾನವಾಹಕ USS Enterprise ನೌಕೆ ನೇತೃತ್ವದ ತನ್ನ ಟಾಸ್ಕ್ ಫೋರ್ಸ್ 74ನ್ನು ಅದು ಕಲ್ಲತ್ತಾದ ಸಮೀಪಕ್ಕೆ ಕಳುಹಿಸಿತು. ಅಮೆರಿಕದ ಒಣ ಬೆದರಿಕೆಗಳಿಗೆ ಸ್ವಲ್ಪವೂ ತಲೆಕೆಡಿಸಿಕೊಳ್ಳದ ಭಾರತವು ತನ್ನ ಹಾದಿಯಲ್ಲಿ ತನ್ನಷ್ಟಕ್ಕೆ ತಾನು ಸಾಗಿತು ಮತ್ತು ಬಾಂಗ್ಲಾದೇಶವು ಉದಯವಾಗುವಲ್ಲಿ ಅಪಾರ ಸಹಾಯ ಮಾಡಿತು.

ಸಾಮ್ರಾಜ್ಯಶಾಹಿ ಪ್ರಯತ್ನ ಮಾತ್ರವಲ್ಲ

ಸಾಮ್ರಾಜ್ಯಶಾಹಿ ಅಮೆರಿಕದ ಬೆದರಿಸುವ ಚಾಳಿಯು ಕೇವಲ ಅದರ ಪ್ರಾಬಲ್ಯವನ್ನು ಸ್ಥಾಪಿಸಿಕೊಳ್ಳುವುದಕ್ಕಾಗಿ ಮಾಡುವ ಒಂದು ಸಾಧಾರಣವಾದ ಸಾಮ್ರಾಜ್ಯಶಾಹಿ ಪ್ರಯತ್ನ ಮಾತ್ರವಲ್ಲ, ಕೆಲವು ನಿರ್ದಿಷ್ಟ ಪ್ರಕರಣಗಳನ್ನು ದುರ್ಬಳಕೆ ಮಾಡಿಕೊಂಡು ಈ ದೇಶವನ್ನು ಅಮೆರಿಕದ ಕಾರ್ಯಸೂಚಿಗೆ ಹೊಂದಿಕೊಳ್ಳುವಂತೆ ಮಾಡುವ ಉದ್ದೇಶವನ್ನೂ ಹೊಂದಿದೆ. ಈ ವಿದ್ಯಮಾನವು ತೀರಾ ಹಳೆಯದು. ಇಂತಹ ಬೆದರಿಕೆಗಳನ್ನು ಸ್ವತಂತ್ರ ಭಾರತವು ಈ ಹಿಂದೆ ಯಶಸ್ವಿಯಾಗಿ ಪ್ರತಿರೋಧಿಸಿತ್ತು. ಈಗಿನ ಬೆದರಿಕೆ ಹೊಸದಲ್ಲದಿದ್ದರೂ, ದೇಶವು ನವ ಉದಾರವಾದಿ ಬಂಡವಾಳಶಾಹಿಯನ್ನು ಮತ್ತು ಆ ಮೂಲಕ ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಪ್ರಾಬಲ್ಯವನ್ನು ಅವಲಂಬಿಸಿಕೊಂಡಿರುವ ಒಂದು ವಿಭಿನ್ನ ಸಂದರ್ಭದಲ್ಲಿ ಪ್ರಕಟಗೊಂಡಿದೆ.

ಡೊನಾಲ್ಡ್ ಟ್ರಂಪ್ ಈಗ ಒಡ್ಡಿರುವ ಬೆದರಿಕೆಯು ಭಾರತಕ್ಕೆ ಮಾತ್ರವೇ ಸೀಮಿತವಾಗಿಲ್ಲ. ಈ ಬೆದರಿಕೆಯು ಎರಡು ವಿಷಯಗಳಿಗೆ ಸಂಬಂಧಿಸಿದೆ: ಮೊದಲನೆಯದು, ಸುಂಕಗಳ ಬಗ್ಗೆ. ಈ ವಿಷಯದಲ್ಲಿ ಆಗಸ್ಟ್ 1ರೊಳಗೆ ಒಂದು ದ್ವಿಪಕ್ಷೀಯ ಒಪ್ಪಂದವನ್ನು ಮಾಡಿಕೊಳ್ಳದಿದ್ದರೆ, ಯುಎಸ್ ಮಾರುಕಟ್ಟೆಯಲ್ಲಿ ಭಾರತದ ಸರಕುಗಳ ಮೇಲೆ ಶೇ. 25ರಷ್ಟು ಸುಂಕಗಳನ್ನು ವಿಧಿಸಲಾಗುತ್ತದೆ. ಎರಡನೆಯದು, ರಷ್ಯಾದ ಮೇಲೆ ಪಾಶ್ಚಾತ್ಯ ದೇಶಗಳು ವಿಧಿಸಿರುವ ನಿರ್ಬಂಧಗಳನ್ನು ಉಲ್ಲಂಘಿಸಿ ಭಾರತವು ರಷ್ಯಾದಿಂದ ತೈಲವನ್ನು ಖರೀದಿಸುತ್ತಿರುವುದರಿಂದಾಗಿ, ಭಾರತದ ಸರಕುಗಳ ಮೇಲೆ ದಂಡ ರೂಪದ ಸುಂಕಗಳನ್ನು ವಿಧಿಸುವ ಬೆದರಿಕೆಯನ್ನು ಅಮೆರಿಕ ಹಾಕುತ್ತಿದೆ. ಇದರ ಜೊತೆಗೆ, ಟ್ರಂಪ್ ಬ್ರಿಕ್ಸ್ ಸಂಘಟನೆಯ ಬಗ್ಗೆ ಕೂಡ ಟೀಕೆ ಮಾಡಿದ್ದಾರೆ. ಈ ಟೀಕೆಗಳು ಭಾರತವನ್ನು ಬ್ರಿಕ್ಸ್ ಸಂಘಟನೆಯಿಂದ ಹೊರಬರುವಂತೆ ಅಥವಾ ಅದು ಸಾಧ್ಯವಾಗದಿದ್ದಲ್ಲಿ ಅಮೇರಿಕದ ಗುಪ್ತಚರನಂತೆ ವರ್ತಿಸುವಂತೆ ಸೂಚ್ಯವಾಗಿ ಹೇಳುತ್ತವೆ. ಇದು ತಕ್ಷಣದಲ್ಲಿ ಪ್ರಸ್ತುತವಾಗುವ ವಿಷಯವಲ್ಲ. ಆದರೆ, ರಷ್ಯಾದ ತೈಲವನ್ನು ಖರೀದಿಸುವ ತಕ್ಷಣದ ಮತ್ತು ಮೂಲಭೂತವಾದ ವಿಷಯದ ಬಗ್ಗೆ ಭಾರತ ಸರ್ಕಾರವು ಮೀನ–ಮೇಷ ಎಣಿಸುತ್ತಿದೆ. ವೈರುಧ್ಯಾತ್ಮಕ ಹೇಳಿಕೆಗಳನ್ನು ನೀಡುತ್ತಿದೆ. ಇದು ಸರ್ಕಾರವು ಅಮೆರಿಕವನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ ಎಂಬುದನ್ನು ಸೂಚಿಸುತ್ತದೆ.

ರಷ್ಯಾದ ತೈಲವು, ಭಾರತಕ್ಕೆ ಲಭ್ಯವಿರುವ ಮತ್ತು ಯುಎಸ್–ಅನುಮೋದಿಸುವ ಯಾವುದೇ ಮೂಲದಿಂದ ದೊರಕುವುದಕ್ಕಿಂತ ಅಗ್ಗವಾಗಿರುವುದರಿಂದ, ರಷ್ಯಾದಿಂದ ತೈಲ ಖರೀದಿಯನ್ನು ನಿಲ್ಲಿಸುವಂತೆ ಭಾರತವನ್ನು ಒತ್ತಾಯಿಸುವ ಕ್ರಮವು, ತನ್ನ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಸ್ವತಃ ತಾನೇ ವರ್ತಿಸುವಂತೆ ಮಾಡುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಈ ಒತ್ತಾಯವೇಕೆ? ರಷ್ಯಾದ ಮೇಲೆ ವಿಧಿಸಿರುವ ನಿರ್ಬಂಧಗಳು, ವರ್ಣಭೇದ ನೀತಿಯನ್ನು ಅನುಸರಿಸುತ್ತಿದ್ದ ದಕ್ಷಿಣ ಆಫ್ರಿಕಾದ ವಿರುದ್ಧ ವಿಶ್ವಸಂಸ್ಥೆಯ ಆದೇಶದ ಮೇರೆಗೆ ವಿಧಿಸಿದ ರೀತಿಯ ನಿರ್ಬಂಧಗಳಲ್ಲ. ಇವು ತಮ್ಮ ದಾದಾಗಿರಿಯನ್ನು ಧಿಕ್ಕರಿಸುವ ಕ್ಯೂಬಾ, ಇರಾನ್ ಅಥವಾ ವೆನೆಜುವೆಲಾದಂತಹ ದೇಶಗಳ ಮೇಲೆ ಯುಎಸ್ ಮತ್ತು ಇತರ ಸಾಮ್ರಾಜ್ಯಶಾಹಿ ದೇಶಗಳು ವಿಧಿಸಿರುವ ಏಕಪಕ್ಷೀಯ ನಿರ್ಬಂಧಗಳ ರೀತಿಯವು. ಆದ್ದರಿಂದ, ದೇಶ ದೇಶಗಳನ್ನು ಅಂತಹ ನಿರ್ಬಂಧಗಳನ್ನು ಒಪ್ಪಿಕೊಳ್ಳುವಂತೆ ಬೆದರಿಸುವುದು ಸಾಮ್ರಾಜ್ಯಶಾಹಿಯ ಉದ್ದೇಶ ಈಡೇರಿಕೆಗಾಗಿ ತಮ್ಮ ಸ್ವಂತ ಹಿತಾಸಕ್ತಿಗಳಿಗೆ ವಿರುದ್ಧವಾಗಿ ತಾವೇ ವರ್ತಿಸುವಂತೆ ಮಾಡುತ್ತದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಯಾವುದೇ ಉನ್ನತ ತತ್ವಗಳ ಸಬೂಬನ್ನೂ

ಪುಟ 13 ನೋಡಿ



ಇಂದಿನ ಸ್ವಾತಂತ್ರ್ಯ ದಿನ ಮತ್ತು ಭಾರತೀಯ ಪ್ರಜೆ

ನೀಲೋತ್ಪಲ್ ಬಸು
ಕನ್ನಡಕ್ಕೆ: ವಿಶ್ವ



79ನೇ ಸ್ವಾತಂತ್ರ್ಯ ದಿನ ಆಚರಿಸುತ್ತಿರುವ ಸಂದರ್ಭದಲ್ಲಿ, ನಮ್ಮ ಸಂವಿಧಾನ ಸಭೆಯ ಕಲಾಪಗಳಿಗೆ ಮರುಭೇಟಿ ನೀಡುವುದು ತುಂಬಾ ಪ್ರಯೋಜನಕಾರಿಯಾಗಿದೆ. ಸಭೆಯಲ್ಲಿ ಮುಖ್ಯವಾಗಿ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರಿದ್ದರು. ಈ ಹೋರಾಟಗಾರರು ನಮ್ಮ ಇತಿಹಾಸ, ಸಾಮಾಜಿಕ ವಾಸ್ತವತೆಗಳು, ಸಾಂಸ್ಕೃತಿಕ ಪರಂಪರೆಗಳು, ಮಾತ್ರವಲ್ಲದೆ ಐತಿಹಾಸಿಕ ಮಾನವ ಪ್ರಗತಿ ಮತ್ತು ಸಮಕಾಲೀನ ಜಗತ್ತಿನ ವಿಶಾಲ ಪ್ರವಾಹಗಳಲ್ಲಿ ಆಳವಾದ ಸಂಬಂಧ ಹೊಂದಿದ್ದರು.

ಎರಡು ಪ್ರಮುಖ ಪ್ರಶ್ನೆಗಳು ಅವರ ಮುಂದಿನ ಐತಿಹಾಸಿಕ ಸವಾಲನ್ನು ರೂಪಿಸಿದ್ದವು: ಇಷ್ಟೊಂದು ವೈವಿಧ್ಯತೆ ಹೊಂದಿರುವ ಇಷ್ಟು ದೊಡ್ಡ ಜನಸಂಖ್ಯೆಯ ದೇಶವನ್ನು ಮುಂದೆ ಸಾಗುವ, ಪ್ರಗತಿಪರ ರಾಷ್ಟ್ರವನ್ನಾಗಿ ಕಟ್ಟುವುದು ಹೇಗೆ?

ಅವರು ಒಂದು ವಿಶಿಷ್ಟ ಪರಿಹಾರವನ್ನು ಕಂಡುಕೊಂಡರು, ಇಡೀ ಪ್ರಕ್ರಿಯೆಯ ಹೃದಯಭಾಗದಲ್ಲಿ ಪೌರತ್ವವನ್ನು ಪ್ರಧಾನವಾಗಿಸುವುದೇ ಆ ಪರಿಹಾರ. ಸ್ವತಂತ್ರ ಭಾರತವು ಬಹುಮುಖಿ ಬಹುಪದರ ವೈವಿಧ್ಯದ ಹೊರತಾಗಿಯೂ ಎಲ್ಲರಿಗೂ ಒಂದು ಸಾರ್ವತ್ರಿಕ ಹಾಗೂ ಸಮಾನ ಪೌರತ್ವವನ್ನು ಹೊಂದುವುದೇ ಆ ಪರಿಹಾರ ಮಾರ್ಗ.

ಅದರ ನಂತರ ರೂಪಿತವಾದ ಸಂವಿಧಾನದ ಪೀಠಿಕೆಯು ಈ ಪರಿಕಲ್ಪನೆಗೆ ಮತ್ತಷ್ಟು ಇಂಬು ನೀಡಿತು:

"ಭಾರತದ ಜನತೆಯಾದ ನಾವು ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ರೂಪಿಸುವುದಕ್ಕಾಗಿ; ಭಾರತದ ಎಲ್ಲ ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು; ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು ಆರಾಧನೆಯ ಸ್ವಾತಂತ್ರ್ಯವನ್ನು; ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು ದೊರೆಯುವಂತೆ ಮಾಡುವುದಕ್ಕಾಗಿ; ವ್ಯಕ್ತಿಗೌರವ ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ ದೃಢ ಸಂಕಲ್ಪ ಮಾಡಿ, ನಮ್ಮ ಸಂವಿಧಾನ ಸಭೆಯಲ್ಲಿ 1949ನೇ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ".

ಪೀಠಿಕೆಯ ದೂರದೃಷ್ಟಿಯನ್ನು ಸಾಕಾರಗೊಳಿಸಲು ಪ್ರಾತಿನಿಧಿಕ ಸರಕಾರವೊಂದನ್ನು ರಚಿಸುವಲ್ಲಿ ನಮ್ಮ ಪಾಲುದಾರಿಕೆಯೂ ಇದೆಯೆಂಬ ಭಾವನೆಯನ್ನು ಪ್ರತಿ ಪ್ರಜೆಯಲ್ಲಿ ಇರುವಂಥ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಖಾತರಿಪಡಿಸುವುದು ಸಹಜವೇ ಆಗಿದೆ. ವೈಯಕ್ತಿಕ ಮತದಾನದ ಮೂಲಕ ಜನರು ಅಂಥ ಸರಕಾರವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅಧ್ಯಕ್ಷೀಯ ಪದ್ಧತಿ ಭಾರತಕ್ಕೆ ಸೂಕ್ತವಲ್ಲ; ಬದಲಿಗೆ ಸಂಸದೀಯ ವ್ಯವಸ್ಥೆಯ ಸರಕಾರದೊಳಗೆ ಸಂಪುಟ (ಕ್ಯಾಬಿನೆಟ್) ವ್ಯವಸ್ಥೆಯೇ ಸೂಕ್ತವೆಂದು ಸಂವಿಧಾನ ರೂಪಿಸಿದವರು ಅಭಿಪ್ರಾಯಪಟ್ಟಿದ್ದರು ಎನ್ನುವುದನ್ನು ಸಂವಿಧಾನಸಭೆಯ ಚರ್ಚೆಗಳು ಸ್ಪಷ್ಟಪಡಿಸುತ್ತವೆ.

ಅದರ ಪ್ರಕಾರ, ಕೆಲವು ಏಕರೂಪದ ಅಂಶಗಳೊಂದಿಗೆ ಒಕ್ಕೂಟ ಸ್ವರೂಪದ ಸಂಸದೀಯ ಸ್ವರೂಪದ ಸರಕಾರವನ್ನು ಸಂವಿಧಾನ ಸ್ಥಾಪಿಸಿತು. ರಾಷ್ಟ್ರಪತಿಯವರು ಒಕ್ಕೂಟದ ಕಾರ್ಯನಿರ್ವಾಹಕ ಸಾಂವಿಧಾನಿಕ ಮುಖ್ಯಸ್ಥರಾಗಿರುತ್ತಾರೆ. ಭಾರತದ ಸಂವಿಧಾನದ 79ನೇ ಅನುಚ್ಛೇದದ ಪ್ರಕಾರ, ಒಕ್ಕೂಟದ ಸಂಸತ್ತು ರಾಷ್ಟ್ರಪತಿ ಮತ್ತು ಎರಡು ಸದನಗಳನ್ನು ಹೊಂದಿರುತ್ತದೆ: ರಾಜ್ಯಗಳ ಮಂಡಳಿ (ರಾಜ್ಯ ಸಭೆ) ಮತ್ತು ಜನತಾ ಸದನ (ಲೋಕಸಭೆ).

ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ

ಸಂಸದೀಯ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ಮೂಲಕ, ಸಂವಿಧಾನವು ಯಾರೂ ಹೊರಗುಳಿಯದಂತಿರುವ ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯನ್ನು ಖಾತರಿಪಡಿಸಿತು. ಈ ಸಂಬಂಧ 326ನೇ ಅನುಚ್ಛೇದವನ್ನು ಸೇರಿಸಲಾಯಿತು: 'ಜನತಾ ಸದನ ಮತ್ತು ಪ್ರತಿ ರಾಜ್ಯದ ವಿಧಾನಸಭೆಗೆ ವಯಸ್ಕ ಮತದಾನದ ಆಧಾರದಲ್ಲಿ ಚುನಾವಣೆ ನಡೆಯತಕ್ಕದ್ದು. ಭಾರತದ ಪ್ರಜೆಯಾಗಿರುವ, ನಿರ್ದಿಷ್ಟಪಡಿಸಿದ ದಿನಾಂಕದಂದು 18 ವರ್ಷಕ್ಕಿಂತ ಕಡಿಮೆಯಲ್ಲದ ವಯಸ್ಸಿನ ಪ್ರತಿಯೊಬ್ಬರು, ಸಂವಿಧಾನ ಅಥವಾ ಯಾವುದೇ ಕಾನೂನು ಅನರ್ಹಗೊಳಿಸದ ಹೊರತು, ಅನಿವಾಸಿ, ಮಾನಸಿಕ ಸ್ಥಿತಿ ಸರಿಯಿಲ್ಲದವರು, ಅಪರಾಧಿಗಳು, ಅಥವಾ ಭ್ರಷ್ಟರು ಅಥವಾ ಅಕ್ರಮ ಚಟುವಟಿಕೆಗಳಲ್ಲಿ ಭಾಗವಹಿಸಿದವರನ್ನು ಹೊರತುಪಡಿಸಿ ಎಲ್ಲರೂ ನಿರ್ದಿಷ್ಟ ಚುನಾವಣೆಗಳಲ್ಲಿ ಮತದಾರರಾಗಿ ನೊಂದಾಯಿಸಿಕೊಳ್ಳುವ ಹಕ್ಕನ್ನು ಹೊಂದಿರುತ್ತಾರೆ'.ತದನಂತರ, ಸರ್ವೋನ್ನತ ನ್ಯಾಯಾಲಯ ಈ ಸಾರ್ವತ್ರಿಕತೆಯನ್ನು ಪುನರುಚ್ಚರಿಸಿ ದೃಢೀಕರಿಸಿತು. ವಿಶೇಷವಾಗಿ, ಮತದಾನದ ಹಕ್ಕು ಒಂದು ಸಾಂವಿಧಾನಿಕ ಹಕ್ಕು ಎಂದು ಪ್ರತಿಪಾದಿಸಿತು.

ಚುನಾವಣೆಗಳು ಸಾರ್ವತ್ರಿಕವಾಗಿರುವುದನ್ನು ಖಾತರಿಪಡಿಸುವುದು

ಇದಲ್ಲದೆ, ರಾಜಕೀಯ ಪಕ್ಷಗಳು ಹಾಗೂ ಕಾರ್ಯಾಂಗದ ಪ್ರಭಾವದಿಂದ ಮುಕ್ತವಾದ ಬಲಿಷ್ಠ ಹಾಗೂ ಸ್ವತಂತ್ರ ಚುನಾವಣಾ ಆಯೋಗವನ್ನು ಸಂವಿಧಾನ ಸಲಹೆ ಮಾಡಿತು. ಚುನಾವಣೆಗಳು ಮುಕ್ತ ಹಾಗೂ ನ್ಯಾಯಸಮ್ಮತವಾಗಿರಲು ಮತ್ತು ಹಾಗೆ ಕಾಣಿಸಲು, ಮತ್ತು ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಲು ಇದು ಅಗತ್ಯವಾಗಿದೆ. 324ನೇ ಆರ್ಟಿಕಲ್ ಹೀಗೆ ಹೇಳುತ್ತದೆ: ಮತದಾರರ ಪಟ್ಟಿಯ ಸಿದ್ಧತೆಯ ಮೇಲುಸ್ತುವಾರಿ, ನಿರ್ದೇಶನ ಮತ್ತು ನಿಯಂತ್ರಣಕ್ಕಾಗಿ ಮತ್ತು ಸಂಸತ್ತು ಹಾಗೂ ಪ್ರತಿ ರಾಜ್ಯದ ಶಾಸನಸಭೆಗೆ, ರಾಷ್ಟ್ರಪತಿ ಹಾಗೂ ಉಪ ರಾಷ್ಟ್ರಪತಿ ಸ್ಥಾನಕ್ಕೆ ಚುನಾವಣೆಗಳನ್ನು ನಡೆಸುವುದು ಚುನಾವಣೆ ಆಯೋಗದ ವ್ಯಾಪ್ತಿಯಲ್ಲಿ ಇರುತ್ತದೆ. ಚುನಾವಣೆ ಆಯೋಗದಲ್ಲಿ ಮುಖ್ಯ ಚುನಾವಣೆ ಕಮಿಷನರ್ ಮತ್ತು ರಾಷ್ಟ್ರಪತಿಯವರು ಕಾಲಕಾಲಕ್ಕೆ ನಿಗದಿಪಡಿಸುವ ಸಂಖ್ಯೆಯ ಚುನಾವಣಾ ಆಯುಕ್ತರು ಇರುತ್ತಾರೆ. ಮುಖ್ಯ ಚುನಾವಣಾ ಆಯುಕ್ತರು ಹಾಗೂ ಇತರ ಆಯುಕ್ತರನ್ನು ಸಂಸತ್ತಿನ ಪರವಾಗಿ ರೂಪಿಸಿದ ಕಾನೂನಿನ ನಿಯಮಗಳಂತೆ ನೇಮಿಸಲಾಗುತ್ತದೆ. ಚುನಾವಣಾ ಆಯುಕ್ತರು ಹಾಗೂ ಪ್ರಾದೇಶಿಕ ಆಯುಕ್ತರ ಸೇವಾ ಪರಿಸ್ಥಿತಿಗಳು ಮತ್ತು ಅವಧಿಯನ್ನು ರಾಷ್ಟ್ರಪತಿಯವರು ನಿರ್ಧರಿಸುತ್ತಾರೆ. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳನ್ನು ತೆಗೆದುಹಾಕುವ ರೀತಿಯಲ್ಲಿ ಅಥವಾ ಅದಕ್ಕೆ ಕಾರಣವಾಗುವಂಥ ಅಂಶಗಳ ಆಧಾರದಲ್ಲಿ ಮುಖ್ಯ ಚುನಾವಣೆ ಆಯುಕ್ತರನ್ನು ಅಧಿಕಾರದಿಂದ ತೆಗೆದು ಹಾಕುವಂತಿಲ್ಲ. ಪ್ರಥಮ ಚುನಾವಣೆ ಆಯೋಗವು ಪರಿಚಯಿಸಿದ ಎರಡು ಮೂಲಭೂತ ಸಿದ್ಧಾಂತಗಳಂತೆ ಚುನಾವಣೆ ಆಯೋಗ ಕಾರ್ಯನಿರ್ವಹಿಸುತ್ತದೆ: 1. ಚುನಾವಣೆಗಳು ಸಾರ್ವತ್ರಿಕವಾಗಿರುವುದನ್ನು ಖಾತರಿಪಡಿಸುವುದು. 2. ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗುವುದು ವೈಯಕ್ತಿಕ ನಾಗರಿಕರ ಮೇಲೆಯೇ ಅವಲಂಬಿಸಬಾರದು.

ಸಮಾನ ಪೌರತ್ವ ಸಿದ್ಧಾಂತ ಉಲ್ಲಂಘನೆಯ ಕಳವಳ

ಆದರೆ, ಈಗ ಈ ವಿಚಾರದಲ್ಲಿ ದೊಡ್ಡ ವಿವಾದವೇ ಸೃಷ್ಟಿಯಾಗಿದೆ. ಭಾರತ ಸರಕಾರದ ಹೊಸ ನೀತಿಗಳಲ್ಲಿ ಅದರ ಬೇರು ಅಡಗಿದೆ: ಮೊದಲಿಗೆ, ಪೌರತ್ವ ತಿದ್ದುಪಡಿ ಕಾನೂನು (ಸಿಎಎ) ಮೂಲಕ ಅದು ಶುರುವಾಯಿತು. ನಂತರ, ರಾಷ್ಟ್ರೀಯ ಪೌರತ್ವ ದಾಖಲೆ (ನ್ಯಾಷನಲ್ ರಿಜಿಸ್ಟರ್ ಆಫ್ ಸಿಟಿಜನ್ಸ್– ಎನ್‌ಆರ್‌ಸಿ). ಸಿಎಎ ಪಕ್ಕಾ ವಿಭಜನಕಾರಿ ಎನ್ನುವುದು ಸಾಬೀತಾಗಿದೆ. ಧಾರ್ಮಿಕ ಅಸ್ಮಿತೆ ಆಧಾರದಲ್ಲಿ ತಾರತಮ್ಯದಿಂದ ಕೂಡಿದ್ದು ಎನ್ನುವ ಭಾವನೆ ವ್ಯಾಪಕವಾಗಿದೆ. ಕಾನೂನಾಗಿ ಪರಿವರ್ತನೆಗೊಂಡರೂ ಅದರ ಬಗ್ಗೆ ಅಧಿಕೃತವಾಗಿ ಅಧಿಸೂಚನೆ ಹೊರಡಿಸಲಾಗಿಲ್ಲ. ಹಾಗೂ ಎನ್‌ಆರ್‌ಸಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ. ಅವುಗಳು ಸಂವಿಧಾನದಲ್ಲಿ ಅಡಕವಾಗಿರುವ ಏಕರೂಪದ ಹಾಗೂ ಸಮಾನ ಪೌರತ್ವ ಸಿದ್ಧಾಂತವನ್ನು ಉಲ್ಲಂಘಿಸುತ್ತವೆ ಎಂಬುದು ಈ ಎರಡೂ ಕಾನೂನುಗಳನ್ನು ವಿರೋಧಿಸಿದ ಪ್ರತಿಪಕ್ಷಗಳ ಕಳವಳದ ಕೇಂದ್ರ ಬಿಂದುವಾಗಿದೆ.

ಆರೆಸ್ಸೆಸ್‌ನ ವಿಭಜನಕಾರಿ ಅಜೆಂಡಾ

ಐತಿಹಾಸಿಕ ಹಿನ್ನೆಲೆ ಮತ್ತು ಆರೆಸ್ಸೆಸ್ ಪಾತ್ರದ ಬಗ್ಗೆ ಹಿನ್ನೋಟವನ್ನು ಪಡೆಯುವುದು ಅಗತ್ಯವಾಗಿದೆ. ಆರೆಸ್ಸೆಸ್ ಆರಂಭವಾದಾಗಿನಿಂದಲೂ ಸಂವಿಧಾನ, ಮತ್ತು ಜನತಾಂತ್ರಿಕ, ಜಾತ್ಯತೀತ ಗಣರಾಜ್ಯವನ್ನು ಒಪ್ಪಲು ನಿರಾಕರಿಸಿತ್ತು. ಹಿಂದೂ ರಾಷ್ಟ್ರದ ಹಿಂದೂ ರಾಷ್ಟ್ರೀಯತಾವಾದಿ ಸಿದ್ಧಾಂತದಲ್ಲಿ ಅದರ ಬೇರು ಅಡಗಿದೆ. ಅದು, ಪಾಕಿಸ್ತಾನ ಇಸ್ಲಾಮಿಕ್ ರಾಷ್ಟ್ರ ಹುಟ್ಟಲು ಕಾರಣವಾದ ಇಸ್ಲಾಮಿಕ್ ರಾಷ್ಟ್ರವಾದದ ತದ್ರೂಪವಾಗಿದೆ.

ರಾಷ್ಟ್ರವಾದ (ನೇಶನ್‌ಹುಡ್) ಮತ್ತು ಪ್ರಭುತ್ವ (ಸ್ಟೇಟ್) ಕುರಿತ ಧಾರ್ಮಿಕ ಅಸ್ಮಿತೆಯ ಎರಡೂ ದೃಷ್ಟಿಕೋನಗಳು ಬ್ರಿಟಿಷರ 'ಒಡೆದಾಳುವ' ವಸಾಹತುಶಾಹಿ ನೀತಿಯ ನೇರ ಉತ್ಪನ್ನಗಳಾಗಿವೆ. ಭಾರತದ ಗತ ಇತಿಹಾಸವು ಸಂಪೂರ್ಣವಾಗಿ ಹಿಂದೂ ಮತ್ತು ಮುಸ್ಲಿಮರ ನಡುವಿನ ಸಂಘರ್ಷದ ಇತಿಹಾಸವೆಂಬ ಸಂಕಥನವನ್ನು ಬ್ರಿಟಿಷ್ ವಸಾಹತುಶಾಹಿ ಇತಿಹಾಸಕಾರರು ಹರಡಿದ್ದರು. ವಿರೂಪಗೊಂಡ ಈ ಇತಿಹಾಸವು ಧಾರ್ಮಿಕ ಅಸ್ಮಿತೆ ಆಧಾರಿತ ರಾಷ್ಟ್ರೀಯವಾದಗಳು ತಲೆಯೆತ್ತುವುದರೊಂದಿಗೆ ಮತ್ತೆ ಮುನ್ನೆಲೆಗೆ ಬಂದು ಅಂತಿಮವಾಗಿ ದೇಶ ವಿಭಜನೆಯಲ್ಲಿ ಅಂತ್ಯಗೊಂಡಿತು. ಭಾರತದ ಸ್ವಾತಂತ್ರ್ಯದ ಮಹತ್ವವನ್ನು ಕಡೆಗಣಿಸುವುದು ಮತ್ತು ಕೀವುಗಟ್ಟಿದ ಗಾಯವನ್ನು ಬಿಡುವುದು ಇದರ ಫಲಿತಾಂಶವಾಗಿದೆ.

ಈ ವಿಭಜನಕಾರಿ ಅಜೆಂಡಾವನ್ನು ಹಿಂದಕ್ಕೆ ಸರಿಸುವುದು ಸಂವಿಧಾನ ರೂಪಿಸಿದವರ ಆದ್ಯ ಕರ್ತವ್ಯವಾಗಿತ್ತು. ಆದಾಗ್ಯೂ, ಸ್ವಾತಂತ್ರ್ಯದ 78 ವರ್ಷಗಳ ನಂತರವೂ ಒಂದು ಸಂಕುಚಿತ, ವಿಭಾಗೀಯ, ಹಿಂದೂ ರಾಷ್ಟ್ರದ ಫ್ಯಾಸಿಸ್ಟಿಕ್ ದೃಷ್ಟಿಕೋನವನ್ನು ಪ್ರಜಾಸತ್ತಾತ್ಮಕ, ಜಾತ್ಯತೀತ ಗಣರಾಜ್ಯಕ್ಕೆ ಪರ್ಯಾಯವೆಂಬಂತೆ ಆರೆಸ್ಸೆಸ್ ಬಿಂಬಿಸುತ್ತಿದೆ. ಆಗಸ್ಟ್ 14ರಂದು ಕೇರಳದಲ್ಲಿ 'ವಿಭಜನೆ ದಿನ'ವನ್ನು ಅಧಿಕೃತವಾಗಿ ಆಚರಿಸಬೇಕೆಂದು ಆರ್‌ಎಸ್‌ಎಸ್ ಸಿದ್ಧಾಂತಕ್ಕೆ ಬದ್ಧವಾದ ರಾಜ್ಯಪಾಲರು ಒತ್ತಾಯಿಸಿರುವುದು ಆರೆಸ್ಸೆಸ್‌ನ ವಿಷಮಯ ಧೋರಣೆ ಎಷ್ಟು ಆಳವಾಗಿ ಬೇರೂರಿದೆ ಎನ್ನುವುದನ್ನು ತೋರಿಸುತ್ತದೆ.


ಇಂದು ಆರೆಸ್ಸೆಸ್, ಪ್ರಸ್ತುತ ಸರಕಾರವನ್ನು ನಡೆಸುತ್ತಿರುವ ಕಾರ್ಪೊರೇಟ್–ಕೋಮುವಾದಿ ಮೈತ್ರಿಕೂಟದ ನಾಯಕ ಸ್ಥಾನದಲ್ಲಿ ಕುಳಿತಿದೆ. ಸ್ವತಂತ್ರ ಸಾಂವಿಧಾನಿಕ ಸಂಸ್ಥೆಗಳನ್ನು ಹೇಗಾದರೂ ಬುಡಮೇಲು ಮಾಡಲು ಬಯಸುವ ನವ–ಫ್ಯಾಸಿಸ್ಟ್ ಪ್ರವೃತ್ತಿಯ ಕೇಂದ್ರ ಬಿಂದುವಾಗಿದೆ. ಬಿಹಾರದ ಮತದಾರರ ಪಟ್ಟಿಯ ವಿಶೇಷ ತ್ವರಿತ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಪೌರತ್ವದ ಪ್ರಶ್ನೆಯನ್ನು ಮತದಾನದ ಹಕ್ಕಿನೊಂದಿಗೆ ತಳಕು ಹಾಕುವ ಪ್ರಯತ್ನವು ಚುನಾವಣೆ ಆಯೋಗದ ಕುತಂತ್ರವಾಗಿ ಕಾಣಿಸುತ್ತದೆ. ಅದನ್ನು ಇಡೀ ದೇಶದಲ್ಲಿ ಅನುಸರಿಸುವುದು ಅದರ ಉದ್ದೇಶವಾಗಿದೆ. ಆದ್ದರಿಂದ, ಈ ಸ್ವಾತಂತ್ರ್ಯ ದಿನವನ್ನು ನಾವು ಪೌರತ್ವದ ರಕ್ಷಣೆ, ಸಾರ್ವತ್ರಿಕ ಮತ್ತು ಸಮಾನ ಪೌರತ್ವ ಸಿದ್ಧಾಂತದ ರಕ್ಷಣೆ, ಪ್ರಜಾಪ್ರಭುತ್ವ, ಜಾತ್ಯತೀತತೆ, ಒಕ್ಕೂಟತತ್ವ ಮತ್ತು ನಮ್ಮ 'ವಿವಿಧತೆಯಲ್ಲಿ ಏಕತೆ'ಯ ರಕ್ಷಣೆಗಾಗಿ ಆಚರಿಸಬೇಕು. ಇದು ಈ ಬಾರಿಯ ಸ್ವಾತಂತ್ರ್ಯ ದಿನದ ರಣ ಕಹಳೆಯಾಗಲಿ. ●

ಬಾಂಬೆ ಹೈಕೋರ್ಟ್ ತೀರ್ಪು: ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಒಂದು ಗೆಲವು

ಬಾಂಬೆ ಹೈಕೋರ್ಟ್ ತೀರ್ಪು: ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಒಂದು ಗೆಲವು

ಆಗಸ್ಟ್ 12 ರಂದು ಬಾಂಬೆ ಹೈಕೋರ್ಟ್‌ನಲ್ಲಿ ನಡೆದ ವಿಚಾರಣೆಯಲ್ಲಿ, ಗಾಜಾದಲ್ಲಿ ಇಸ್ರೇಲ್ ನಡೆಸುತ್ತಿರುವ ನರಮೇಧವನ್ನು ಕೊನೆಗೊಳಿಸಬೇಕೆಂದು ಮತ್ತು ಪ್ಯಾಲೆಸ್ತೀನ್ ಜನರಿಗೆ ಒಗ್ಗಟ್ಟನ್ನು ವ್ಯಕ್ತಪಡಿಸಲು ಆಗಸ್ಟ್ 20 ರಂದು ಮುಂಬೈನ ಆಜಾದ್ ಮೈದಾನದಲ್ಲಿ ಶಾಂತಿಯುತ ಸಭೆ ನಡೆಸಲು ಅರ್ಜಿದಾರರಾದ ಸಿಪಿಐ(ಎಂ), ಸಿಪಿಐ ಮತ್ತು ಎಐಪಿಎಸ್‌ಒಗೆ ಮುಂಬೈ ಪೊಲೀಸರು ಅನುಮತಿ ನೀಡಿದರು.

ಗಾಜಾದಲ್ಲಿ ನಡೆಯುತ್ತಿರುವ ಇಸ್ರೇಲ್ ನರಮೇಧವನ್ನು ಕೊನೆಗೊಳಿಸಲು ಜೂನ್ 18 ರಂದು ಇಂತಹ ಪ್ರದರ್ಶನವನ್ನು ನಡೆಸಲು ಅನುಮತಿ ಕೊಡಲು ಮುಂಬೈ ಪೊಲೀಸರು ಮೊದಲು ಜೂನ್ 17 ರಂದು, ನಂತರ ಜುಲೈ 15, ಜುಲೈ 31 ಮತ್ತು ಆಗಸ್ಟ್ 8 ರಂದು ಮೂರು ಬಾರಿ ನಿರಾಕರಿಸಿದರು. ಅನುಮತಿಗಾಗಿ ಮಾಡಿದ ಪ್ರತಿ ವಿನಂತಿಗೆ ಃಓಖಖ ನ ಸೆಕ್ಷನ್ 168 ಮತ್ತು ಕಾನೂನಿನ ಇತರ ವಿಭಾಗಗಳ ಅಡಿಯಲ್ಲಿ ನಿಷೇಧಿತ ನೋಟೀಸ್‌ಗಳೊಂದಿಗೆ ಪ್ರತಿಕ್ರಿಯಿಸಲಾಯಿತು.



High Court of Bombay

ಜೂನ್ 17 ರ ರಾತ್ರಿ ಮತ್ತು ಜೂನ್ 18 ರ ಮುಂಜಾನೆ, ಅನುಮತಿಗಾಗಿ ಪತ್ರಕ್ಕೆ ಸಹಿ ಮಾಡಿದವರನ್ನು ಮತ್ತು ಭಾಗವಹಿಸುವ ಸಂಘಟನೆಗಳ ಪ್ರಮುಖ ಕಾರ್ಯಕರ್ತರನ್ನು ಬಂಧಿಸಲು ಮುಂಬೈನಾದ್ಯಂತ ಪೊಲೀಸ್ ಠಾಣೆಗಳನ್ನು ಸಜ್ಜುಗೊಳಿಸಲಾಯಿತು. ಜೂನ್ 18 ರಂದು ಯಾವುದೇ ಪ್ರದರ್ಶನ ನಡೆಯದಂತೆ ತಡೆಯಲು ಮುಂಬೈ ಪೊಲೀಸರಿಗೆ ಕಟ್ಟುನಿಟ್ಟಿನ ಸೂಚನೆಗಳಿದ್ದವು ಎಂಬುದು ಸ್ಪಷ್ಟವಾಗಿತ್ತು. ಆದಾಗ್ಯೂ, ಈ ಬರಹಗಾರ ಸೇರಿದಂತೆ ಹಲವಾರು ಪ್ರಮುಖ ಕಾರ್ಯಕರ್ತರು ಪೋಲೀಸರ ಬಲೆಯಿಂದ ಯಶಸ್ವಿಯಾಗಿ ತಪ್ಪಿಸಿಕೊಂಡು, ಆಜಾದ್ ಮೈದಾನದ ಹೊರಗೆ ನಿಗದಿತ ಸಮಯದಲ್ಲಿ ಪ್ರತಿಭಟನೆ ನಡೆಸಿದರು. ಅವರನ್ನು ಬಂಧಿಸಿ, ಕಾರ್ಯಕ್ರಮ ನಡೆದ ಸ್ಥಳದಿಂದ ದೂರದಲ್ಲಿರುವ ಯೆಲ್ಲೋ ಗೇಟ್ ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು.

ಈ ವಿಷಯದ ಬಗ್ಗೆ ಸಿಪಿಐ(ಎಂ) ಮತ್ತು ಸಿಪಿಐ ಜಂಟಿಯಾಗಿ ಜುಲೈ 10 ರಂದು ತಮ್ಮ ಮೊದಲ ರಿಟ್ ಅರ್ಜಿಯನ್ನು ಸಲ್ಲಿಸಿದವು. ಜುಲೈ 25 ರಂದು ಮೌಖಿಕವಾಗಿ ಆದೇಶವನ್ನು ಉಚ್ಚರಿಸುವಾಗ, ಪೀಠವು ಎರಡು ಅರ್ಜಿದಾರರ ಪಕ್ಷಗಳ ಬಗ್ಗೆ ಕೆಲವು ಹೇಳಿಕೆಗಳನ್ನು ನೀಡಿತ್ತು, ಇದನ್ನು ನ್ಯಾಯಾಲಯದ ಕಲಾಪಗಳನ್ನು ಒಳಗೊಂಡ ಹಲವಾರು ಸುದ್ದಿ ಪ್ರಕಟಣೆಗಳು ವರದಿ ಮಾಡಿದ್ದವು. ಬಾರ್ ಮತ್ತು ಬೆಂಚ್‌ನಂತಹ ಕಾನೂನು ಪತ್ರಿಕಾ ಮಾಧ್ಯಮದಲ್ಲಿ ವರದಿ ಮಾಡಿದಂತೆ, ನ್ಯಾಯಾಲಯವು ಗಮನಿಸಿದ್ದು: "ಮೊದಲು ನಮ್ಮದೇ ದೇಶದ ಪ್ರಜೆಗಳಿಗೆ ದೇಶಪ್ರೇಮ ತೋರಿಸಿ...ನಮ್ಮ ದೇಶ ಎದುರಿಸುವ ಸಾಕಷ್ಟು ಸಮಸ್ಯೆಗಳಿವೆ. ನಮಗೆ ಈ ರೀತಿಯ ಯಾವುದೂ ಬೇಡ. ನೀವು ದೂರದೃಷ್ಟಿಯಿಲ್ಲದವರು ಎಂದು ಹೇಳಲು ವಿಷಾದಿಸುತ್ತೇನೆ. ನೀವು ಗಾಜಾ ಮತ್ತು ಪ್ಯಾಲೆಸ್ಟೈನ್ ಅನ್ನು ನೋಡುತ್ತಿದ್ದೀರಿ, ಇಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನಿರ್ಲಕ್ಷಿಸುತ್ತಿದ್ದೀರಿ. ನಿಮ್ಮ ಸ್ವಂತ ದೇಶಕ್ಕಾಗಿ ನೀವು ಯಾಕೆ ಏನನ್ನೂ ಮಾಡಬಾರದು? ನಿಮ್ಮದೇ ದೇಶವನ್ನು ನೋಡಿ... ದೇಶಭಕ್ತರಾಗಿರಿ. ಇದು ದೇಶಭಕ್ತಿ ಅಲ್ಲ...". ನ್ಯಾಯಾಧೀಶರು ಮುಂದುವರಿದು, " ಪ್ಯಾಲೆಸ್ತೀನ್ ಕಡೆಗೆ ಅಥವಾ ಇಸ್ರೇಲ್ ಕಡೆಗೆ ಹೋಗುವುದು ಎಷ್ಟು ಧೂಳನ್ನು ಎಬ್ಬಿಸಬಹುದೆಂದು ನಿಮಗೆ ತಿಳಿದಿಲ್ಲ. ನೀವು ಇದನ್ನು ಏಕೆ ಮಾಡಲು ಬಯಸುತ್ತೀರಿ? ನೀವು ಪ್ರತಿನಿಧಿಸುವ ಪಕ್ಷದಿಂದ ಇದು ಸ್ಪಷ್ಟವಾಗಿದೆ, ಇದು ದೇಶದ ವಿದೇಶಾಂಗ ವ್ಯವಹಾರಗಳಿಗೆ ಏನು ಪರಿಣಾಮ ಬೀರುತ್ತದೆ ಎಂದು ನಿಮಗೆ ಅರ್ಥವಾಗುತ್ತಿಲ್ಲ... ನೀವು ಭಾರತದಲ್ಲಿ ನೋಂದಾಯಿತ ಸಂಸ್ಥೆ. ಕಸ ಸುರಿಯುವುದು, ಮಾಲಿನ್ಯ, ಒಳಚರಂಡಿ, ಪ್ರವಾಹದಂತಹ ಸಮಸ್ಯೆಗಳನ್ನು ನೀವು ಕೈಗೆತ್ತಿಕೊಂಡರೆ, ನಾವು ಉದಾಹರಣೆಗಳನ್ನು ನೀಡುತ್ತಿದ್ದೇವೆ ಅಷ್ಟೆ. ನೀವು ಈ ವಿಷಯಗಳ ಮೇಲೆ ಪ್ರತಿಭಟಿಸುತ್ತಿಲ್ಲ, ಬದಲಾಗಿ ದೇಶದಿಂದ ಸಾವಿರಾರು ಮೈಲುಗಳಷ್ಟು ದೂರದಲ್ಲಿ ನಡೆಯುತ್ತಿರುವ ವಿಷಯದ ಮೇಲೆ ಪ್ರತಿಭಟಿಸುತ್ತಿದ್ದೀರಿ. "

ಈ ಹೇಳಿಕೆಗಳಿಗೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಜೂನ್ 25 ರಂದು ನೀಡಿದ ಹೇಳಿಕೆಯಲ್ಲಿ ತಕ್ಷಣವೇ ವಿಮರ್ಶಾತ್ಮಕವಾಗಿ ಪ್ರತಿಕ್ರಿಯಿಸಿತು. ಮುದ್ರಣ ಮಾಧ್ಯಮದಲ್ಲಿನ ಹಲವಾರು ಲೇಖನಗಳು ವರದಿಯಾದ ಹೇಳಿಕೆಗಳನ್ನು ವಿಮರ್ಶಾತ್ಮಕವಾಗಿ ನೋಡಿವೆ.

ಜುಲೈ 30 ರಂದು ಅಂತಿಮ ಸಹಿ ಮಾಡಿದ ಆದೇಶವನ್ನು ನೀಡಿದಾಗ, ಜುಲೈ 25 ರ ನ್ಯಾಯಾಲಯದ ವಿಚಾರಣೆಯ ವರದಿಯಾದ ಯಾವುದೇ ಹೇಳಿಕೆಗಳನ್ನು ಅದು ಒಳಗೊಂಡಿರಲಿಲ್ಲ. ವಾಸ್ತವವಾಗಿ, ಆದೇಶವು ಅರ್ಜಿದಾರರ ಸಂಖ್ಯೆ 1, ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ಅನ್ನು "ಪ್ರಸಿದ್ಧ ಮತ್ತು ಗೌರವಾನ್ವಿತ ರಾಜಕೀಯ ಪಕ್ಷವೆಂದು ಮತ್ತು ಅರ್ಜಿದಾರ ಸಂಖ್ಯೆ 2, ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ" ಅನ್ನು ಡಿಸೆಂಬರ್ 26, 1925 ರಂದು ಕಾನ್ಪುರ (ಕಾನ್‌ಪೋರ್) ಸಮ್ಮೇಳನದಲ್ಲಿ ಸ್ಥಾಪಿಸಲಾಯಿತು" ಎಂದು ಸೂಚಿಸಲಾಗಿದೆ.

ಜುಲೈ 25 ರ ಆದೇಶವು ಅರ್ಜಿದಾರರ ಅರ್ಜಿಯನ್ನು ತನ್ನದೇ ಆದ ಅರ್ಹತೆಯ ಮೇಲೆ ನಿರ್ಧರಿಸಲು ಮುಂಬೈ ಪೊಲೀಸರಿಗೆ ನಿರ್ದೇಶಿಸಿದೆ. ತರುವಾಯ, ಮಧ್ಯಂತರ ಅವಧಿಯಲ್ಲಿ, ಪೊಲೀಸ್ ಅನುಮತಿಯೊಂದಿಗೆ ಆಗಸ್ಟ್ 3 ರಂದು ವಿವಿಧ ಸಂಘಟನೆಗಳಿಂದ ಪ್ಯಾಲೆಸ್ತೀನ್‌ಗೆ ಒಗ್ಗಟ್ಟಿನ ಸಾರ್ವಜನಿಕ ಪ್ರದರ್ಶನವನ್ನು ಶಾಂತಿಯುತವಾಗಿ ಪುಣೆಯಲ್ಲಿ ನಡೆಸಲಾಯಿತು. ಇದನ್ನು ಆಗಸ್ಟ್ 11 ರಂದು ನ್ಯಾಯಾಧೀಶರ ಗಮನಕ್ಕೆ ತರಲಾಯಿತು.

ಜುಲೈ 25 ರಂದು ನ್ಯಾಯಾಲಯದ ಕಲಾಪಗಳ ಮಾಧ್ಯಮ ವರದಿಗಳಿಗೆ ಪ್ರತಿಕ್ರಿಯೆಯಾಗಿ ಹೊರಡಿಸಲಾದ ಪತ್ರಿಕಾ ಟಿಪ್ಪಣಿಗಳಿಗಾಗಿ ಅರ್ಜಿದಾರರ ವಿರುದ್ಧ ನ್ಯಾಯಾಲಯವು ಸ್ವಯಂಪ್ರೇರಿತವಾಗಿ ನಿಂದನೆ ಪ್ರಕ್ರಿಯೆಗಳನ್ನು ಪ್ರಾರಂಭಿಸಬೇಕು ಎಂದು ಹಿರಿಯ ವಕೀಲ ಎಸ್ ಎಂ ಗೋರ್ವಾಡ್ಕರ್ ಮಾಡಿದ ಪ್ರಾರ್ಥನೆಯನ್ನು ಆಗಸ್ಟ್ 4 ರಂದು ಬಾಂಬೆ ಹೈಕೋರ್ಟ್‌ನ ಅದೇ ವಿಭಾಗೀಯ ಪೀಠವು ತಿರಸ್ಕರಿಸಿತು.

ಅನುಮತಿಗಾಗಿ ಹೊಸದಾಗಿ ಸಲ್ಲಿಸಿದ ಅರ್ಜಿಯನ್ನು ಮುಂಬೈ ಪೊಲೀಸರು ತಿರಸ್ಕರಿಸಿದ ನಂತರ, ಆಗಸ್ಟ್ 11 ಮತ್ತು 12 ರಂದು ಎರಡನೇ ರಿಟ್ ಅರ್ಜಿಯ ವಿಚಾರಣೆ ನಡೆಯಿತು. ಆಗಸ್ಟ್ 20 ರಂದು ಮಧ್ಯಾಹ್ನ 3 ರಿಂದ 6 ರವರೆಗೆ ಆಜಾದ್ ಮೈದಾನದಲ್ಲಿ ಸಾರ್ವಜನಿಕ ಸಭೆ ನಡೆಸಲು ಅನುಮತಿ ನೀಡಲಾಗುವುದು ಎಂದು ಆಗಸ್ಟ್ 12 ರಂದು ಮುಂಬೈ ಪೊಲೀಸರ ಪರ ವಕೀಲರು ಹೇಳಿದರು. ಈ ಪ್ರಮುಖ ಗೆಲುವು ಅರ್ಜಿದಾರರ ವ್ಯವಸ್ಥಿತ ಮತ್ತು ನಿರಂತರ ಜಂಟಿ ಪ್ರಯತ್ನಗಳ ಫಲಿತಾಂಶವಾಗಿದೆ.

ಬಾಂಬೆ ಹೈಕೋರ್ಟ್‌ನ ಆಗಸ್ಟ್ 12 ರ ಆದೇಶವನ್ನು ಸ್ವಾಗತಿಸಿ ಅರ್ಜಿದಾರರು ಜಂಟಿ ಪತ್ರಿಕಾ ಹೇಳಿಕೆಯನ್ನು ಬಿಡುಗಡೆ ಮಾಡಿದರು ಮತ್ತು "ಭಾರತೀಯ ಸಂವಿಧಾನದ ಅಡಿಯಲ್ಲಿ ನಾಗರಿಕರಿಗೆ ಲಭ್ಯವಿರುವ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ಪ್ರಜಾಪ್ರಭುತ್ವದ ಜಾಗಗಳನ್ನು ನಿರ್ಬಂಧಿಸಲು ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಂದ ಮಾಡಲಾಗುತ್ತಿರುವ ಸಂಘಟಿತ ಪ್ರಯತ್ನಗಳಲ್ಲಿ ಇದು ಮೊಳಕೆಯೊಡೆದಿದೆ" ಎಂದು ಹೇಳಿದ್ದಾರೆ.

ಆಗಸ್ಟ್ 12 ರ ಬಾಂಬೆ ಹೈಕೋರ್ಟ್‌ನ ಆದೇಶವು ಪ್ರಜಾಪ್ರಭುತ್ವ ಚಳವಳಿಗೆ ಒಂದು ಪ್ರಮುಖ ಗೆಲುವಾಗಿದೆ. ಮಹಾರಾಷ್ಟ್ರದ ಬಿಜೆಪಿ ನೇತೃತ್ವದ ಸರ್ಕಾರ ಇತ್ತೀಚಿನ ತಿಂಗಳುಗಳಲ್ಲಿ ನಾಗರಿಕರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮೊಟಕುಗೊಳಿಸಲು ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. ಆಗಸ್ಟ್ 12 ರ ನ್ಯಾಯಾಲಯದ ತೀರ್ಪು ಕೋಮು ರಾಜಕೀಯ ಮತ್ತು ವಿಧೇಯ ಅಧಿಕಾರಶಾಹಿಯ ಈ ಅಪವಿತ್ರ ಮೈತ್ರಿಕೂಟಕ್ಕೆ ಒಂದು ಕಪಾಳಮೋಕ್ಷವಾಗಿದೆ. ಈ ದುಷ್ಕೃತ್ಯದ ಯೋಜನೆಯ ಅಡಿಯಲ್ಲಿರುವ ಸುಳ್ಳು ನಿರೂಪಣೆಗಳನ್ನು ಬಯಲು ಮಾಡಲು ಮತ್ತು ಕೆಡವಲು ಇದು ಸಹಾಯ ಮಾಡುತ್ತದೆ.

–ವಿವೇಕ್ ಮಾಂಟೆರೋ

ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳ ಸಿಇಒಗಳಲ್ಲಿ ಒಬ್ಬರಾದರೂ ಎಸ್‌ಸಿ, ಎಸ್‌ಟಿ, ಅಲ್ಪಸಂಖ್ಯಾತ ಅಥವಾ ಮಹಿಳೆ ಇಲ್ಲ!

ಸರಕಾರಿ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರು (ಸಿಇಒ–Chief Executive Officers) ಒಬ್ಬರೇ ಒಬ್ಬ ಎಸ್‌ಸಿ, ಎಸ್‌ಟಿ, ಅಲ್ಪಸಂಖ್ಯಾತರು ಅಥವಾ ಮಹಿಳೆಯರು ಇಲ್ಲ ಎಂಬ ಅಂಶ ಬೆಳಕಿಗೆ ಬಂದಿದೆ. ಈ ನಿಟ್ಟಿನಲ್ಲಿ ಸಿಪಿಐ(ಎಂ)ನ ಮದುರೈ ಸಂಸದ ಎಸ್. ವೆಂಕಟೇಶನ್ ಹೇಳಿಕೆ ಹೀಗಿದೆ.

ಸರ್ಕಾರಿ ಬ್ಯಾಂಕುಗಳಲ್ಲಿ ಒಬ್ಬರಾದರೂ ಎಸ್‌ಸಿ, ಎಸ್‌ಟಿ, ಅಲ್ಪಸಂಖ್ಯಾತ ಅಥವಾ ಮಹಿಳೆ ಸಿಇಒ ಇಲ್ಲ! ಸಿಪಿಐ(ಎಂ)ನ ಮದುರೈ ಸಂಸದ ಎಸ್.ವೆಂಕಟೇಶನ್ ಅವರು ಸಂಸತ್ತಿನಲ್ಲಿ ಮಾಡಿದ ಪ್ರಶ್ನೆಗೆ ಸಚಿವರು ನೀಡಿದ ಉತ್ತರದಿಂದ ಬೆಳಕಿಗೆ ಬಂದ ಸತ್ಯ ಇದು. ಸಚಿವರ ಉತ್ತರ ಬರೀ ಅಂಕಿಅಂಶವಲ್ಲ, ಜಾತಿ ತಾರತಮ್ಯದ ಅಭಿವ್ಯಕ್ತಿಯಾಗಿದೆ. ಮೀಸಲಾತಿ ಇಲ್ಲದ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು ಮತ್ತು ಮಹಿಳೆಯರನ್ನು ಎಷ್ಟರ ಮಟ್ಟಿಗೆ ಕಡೆಗಣಿಸಲಾಗುತ್ತಿದೆ ಎಂಬುದಕ್ಕೆ ಸಚಿವರ ಉತ್ತರ ಸಾಕ್ಷಿಯಾಗಿದೆ.

ಸಂಸದರ ಹೇಳಿಕೆ ಹೀಗಿದೆ: ಸರ್ಕಾರಿ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರು, ಅಧ್ಯಕ್ಷರಲ್ಲಿ ಎಷ್ಟು ಮಂದಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು ಮತ್ತು ಮಹಿಳೆಯರಿದ್ದಾರೆ ಎಂಬ ಪ್ರಶ್ನೆಯನ್ನು (ಸಂಖ್ಯೆ 2469/04.08.2025) ನಾನು ಸಂಸತ್ತಿನಲ್ಲಿ ಹಣಕಾಸು ಸಚಿವರಿಗೆ ಎತ್ತಿದ್ದೆ. ಇದಕ್ಕೆ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ನೀಡಿದ ಉತ್ತರ ಆಘಾತಕಾರಿಯಾಗಿದೆ.

ಪ್ರಪಾತದಲ್ಲಿ ಪ್ರಾತಿನಿಧ್ಯ

ರಾಷ್ಟ್ರೀಕೃತ ಬ್ಯಾಂಕುಗಳ ಒಟ್ಟು 9 ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಇಒಗಳಲ್ಲಿ ಒಬ್ಬರೂ ಪರಿಶಿಷ್ಟ ಜಾತಿಗೆ ಸೇರಿದವರಲ್ಲ. ಪರಿಶಿಷ್ಟ ಪಂಗಡದವರೂ ಇಲ್ಲ, ಮಹಿಳೆಯರೂ ಇಲ್ಲ. ಅಲ್ಪಸಂಖ್ಯಾತರೂ ಇಲ್ಲ. ರಾಷ್ಟ್ರೀಕೃತ ಬ್ಯಾಂಕುಗಳ ನಿರ್ದೇಶಕ ಮಂಡಳಿ (board of director) ಬಗ್ಗೆ ನೀಡಲಾದ ವಿವರಗಳೂ ಹೀಗೆಯೇ ಇವೆ. ನಿರ್ದೇಶಕ ಮಂಡಳಿಯ ಒಟ್ಟು 98 ಸದಸ್ಯರ ಪೈಕಿ 6 ಮಂದಿ ಪರಿಶಿಷ್ಟ ಜಾತಿಗೆ ಸೇರಿದವರು. ತಲಾ ಒಬ್ಬರು ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತರಿಗೆ ಸೇರಿದವರು. ಮಹಿಳೆಯರ ಸಂಖ್ಯೆ 12. ಮಹಿಳೆಯರ ಜನಸಂಖ್ಯೆಯ ಶೇಕಡಾವಾರು ಮತ್ತು ಪ್ರಾತಿನಿಧ್ಯದ ನಡುವೆ ಅಗಾಧ ವ್ಯತ್ಯಾಸವಿದೆ.

ಎಲ್‌ಐಸಿಯಲ್ಲೂ ಕೆಟ್ಟ ಪರಿಸ್ಥಿತಿ

ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ನಿರ್ದೇಶಕ ಮಂಡಳಿಯ ಒಟ್ಟು 13 ಸದಸ್ಯರಲ್ಲಿ ಯಾರೂ ಪರಿಶಿಷ್ಟ ಜಾತಿ ಅಥವಾ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಲ್ಲ. ಒಬ್ಬರು ಮಾತ್ರ ಪರಿಶಿಷ್ಟ ಪಂಗಡದವರಿದ್ದಾರೆ. ಒಬ್ಬರು ಮಾತ್ರ ಮಹಿಳೆ. ಎಲ್‌ಐಸಿಯ ಸಿಎಒ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಹುದ್ದೆಯಲ್ಲಿ ಇರುವವರು ಸಹ ಈ ಮೇಲಿನ ವರ್ಗಕ್ಕೆ ಸೇರಿದವರಲ್ಲ. ಸರ್ಕಾರಿ ಒಡೆತನದ 'ಜನರಲ್ ಇನ್ಸುರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ' (ಜಿಐಸಿ)ದ ಒಟ್ಟು 48 ನಿರ್ದೇಶಕರಲ್ಲಿ ಕೇವಲ 5 ಮಂದಿ ಮಾತ್ರ ಪರಿಶಿಷ್ಟ ಜಾತಿಯವರು. ಒಬ್ಬನೇ ಒಬ್ಬ ಅಲ್ಪಸಂಖ್ಯಾತ ಅಥವಾ ಪರಿಶಿಷ್ಟ ಪಂಗಡದ ವ್ಯಕ್ತಿ ಇಲ್ಲ. 18 ಮಹಿಳೆಯರು. ಜಿಐಸಿಯ 6 ಮುಖ್ಯ ಕಾರ್ಯನಿರ್ವಾಹಕರಲ್ಲಿ ಒಬ್ಬರು ಮಾತ್ರ ಪರಿಶಿಷ್ಟ ಜಾತಿಗೆ ಸೇರಿದವರು. ಅಲ್ಪಸಂಖ್ಯಾತರು ಅಥವಾ ಪರಿಶಿಷ್ಟ ಪಂಗಡದವರು ಇಲ್ಲ. ಮೂವರು ಮಹಿಳೆಯರಿದ್ದಾರೆ.

ಬಹಿರಂಗಗೊಂಡ ಜಾತಿ ತಾರತಮ್ಯ

"ಸಚಿವರ ಉತ್ತರ ಕೇವಲ ಅಂಕಿಅಂಶಗಳಲ್ಲ. ಇದು ಜಾತಿ ತಾರತಮ್ಯದ ಅಭಿವ್ಯಕ್ತಿಯಾಗಿದೆ. ಮೀಸಲಾತಿ ಇಲ್ಲದ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು ಮತ್ತು ಮಹಿಳೆಯರನ್ನು ಎಷ್ಟರ ಮಟ್ಟಿಗೆ ನಿರ್ಲಕ್ಷಿಸಲಾಗುತ್ತಿದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಸರ್ಕಾರಿ ಸಂಸ್ಥೆಗಳ ಪರಿಸ್ಥಿತಿಯೇ ಹೀಗಾದರೆ, ಖಾಸಗಿ ಸಂಸ್ಥೆಗಳಲ್ಲಿನ ಪರಿಸ್ಥಿತಿ ಹೇಗಿರಬಹುದು!" ಎಂದು ಸಂಸದ ಎಸ್. ವೆಂಕಟೇಶನ್ ಹೇಳಿದ್ದಾರೆ.

ಭಾರತದ ಮೇಲೆ ಸಾಮ್ರಾಜ್ಯಶಾಹಿಯ ದಾದಾಗಿರಿ

ಪುಟ 10 ರಿಂದ

ಸಹ ಬಳಸದೆ, ದೇಶ ದೇಶಗಳು ಅಮೆರಿಕದ ಜೊತೆ ಹೊಂದಿಕೊಳ್ಳುವಂತೆ ಕೇಳಲಾಗುತ್ತಿದೆ ಮತ್ತು ತಮಗೆ ನಷ್ಟವನ್ನುಂಟುಮಾಡಿಕೊಳ್ಳುವ ಮೂಲಕ ಸಾಮ್ರಾಜ್ಯಶಾಹಿಯ ಹಿತಾಸಕ್ತಿಗಳನ್ನು ಪೂರೈಸುವಂತೆ ಅವರನ್ನು ಬಹಿರಂಗವಾಗಿ ಮತ್ತು ಸ್ಪಷ್ಟವಾಗಿ ಬೆದರಿಸಲಾಗುತ್ತಿದೆ.

ನಿರ್ಣಾಯಕವಾಗಿ ತಿರಸ್ಕರಿಸಿಲ್ಲ, ಏಕೆ?

ಮೋದಿ ಸರ್ಕಾರ ಈ ವಿಷಯದಲ್ಲಿ ಟ್ರಂಪ್ ಅವರನ್ನು ಧೈರ್ಯವಾಗಿ ಮತ್ತು ನಿರ್ಣಾಯಕವಾಗಿ ತಿರಸ್ಕರಿಸಿಲ್ಲ, ಏಕೆ? ಚೀನಾ ದೇಶದ ಮಾತಿರಲಿ, ಬ್ರೆಜಿಲ್‌ನಂತಹ ಒಂದು ಬಂಡವಾಳಶಾಹಿ ದೇಶದ ಸರ್ಕಾರವೂ ಸಹ ಟ್ರಂಪ್‌ರನ್ನು ಧೈರ್ಯದಿಂದ ಎದುರಿಸಿದೆ. ಬ್ರೆಜಿಲ್ ಸರಕುಗಳ ಮೇಲೆ ಶೇ. 50ರಷ್ಟು ಸುಂಕವನ್ನು ಟ್ರಂಪ್ ವಿಧಿಸಿದರೆ, ಬ್ರೆಜಿಲ್ ಕೂಡ ಅಮೆರಿಕದ ಸರಕುಗಳ ಮೇಲೆ ಶೇ. 50ರಷ್ಟು ಸುಂಕವನ್ನು ವಿಧಿಸುತ್ತದೆ ಎಂದು ಅಧ್ಯಕ್ಷ ಲೂಲಾ ಘೋಷಿಸಿದ್ದಾರೆ. ಕಾಂಗ್ರೆಸ್ ಪಕ್ಷವು ಮೋದಿಯವರ ಪುಕ್ಕಲತನವನ್ನು ಎತ್ತಿ ತೋರಿಸಿರುವುದು ಮತ್ತು ಅದನ್ನು ಬಾಂಗ್ಲಾದೇಶ ಯುದ್ಧದ ಸಮಯದಲ್ಲಿ ಅಮೆರಿಕದ ಅಂದಿನ ಅಧ್ಯಕ್ಷ ನಿಕ್ಸನ್ ಎದುರು ಇಂದಿರಾ ಗಾಂಧಿಯರು ತೋರಿದ ದಿಟ್ಟತನದೊಂದಿಗೆ ಹೋಲಿಕೆ ಮಾಡಿರುವುದು ಸರಿಯಾಗಿಯೇ ಇದೆ (ಇಂದಿರಾ ಅವರ ಕಣ್ಣಿನಲ್ಲಿ ಕಣ್ಣಿಟ್ಟು ಮಾತಾಡಲು ತಾನು ಹೆದರಿದ್ದಾಗಿ ನಿಕ್ಸನ್ ಒಮ್ಮೆ ಒಪ್ಪಿಕೊಂಡಿದ್ದರು). ಆದರೆ, ಒಬ್ಬ ನಾಯಕನು/ನಾಯಕಿಯು ತೋರುವ ಧೈರ್ಯ ಅಥವಾ ಪುಕ್ಕಲತನವು ವರ್ಗ ಆಸರೆಯಿಂದ ಮುಕ್ತವಲ್ಲ. ಹಾಗೆ ನೋಡಿದರೆ, ಲೂಲಾ ಮತ್ತು ಮೋದಿ ಇವರ ನಡುವೆ ಇರುವ ವ್ಯತ್ಯಾಸವೆಂದರೆ, ಲೂಲಾ ಅವರ ಬೇರುಗಳು ಕಾರ್ಮಿಕ ವರ್ಗದಲ್ಲಿ ನೆಲೆಸಿವೆ. ಮೋದಿಯವರು ಕಾರ್ಮಿಕರ ಕೆಲವು ಮತಗಳನ್ನು ಪಡೆಯುತ್ತಾರಾದರೂ, ಮೂಲತಃ ಅವರ ಊರುಗೋಲು ದೊಡ್ಡ ಬೂರ್ಜ್ವಾ ವರ್ಗದಲ್ಲಿ ನೆಲೆಸಿದೆ. ಅದೇ ರೀತಿಯಲ್ಲಿ, ಸಾಮ್ರಾಜ್ಯಶಾಹಿ ಅಮೆರಿಕದ ಬೆದರು ತಂತ್ರಗಳ ಎದುರಾಗಿ ಭಾರತ ಅಂದು ಹೊಂದಿದ್ದ ಮತ್ತು ಇಂದು ಹೊಂದಿರುವ ನಿಲುವುಗಳ ನಡುವೆ ಇರುವ ವ್ಯತ್ಯಾಸಗಳು, ನೆಹರೂ ಅಥವಾ ಇಂದಿರಾ ಗಾಂಧಿ ಮತ್ತು ಮೋದಿ ಇವರುಗಳು ಹೊಂದಿದ ವೈಯಕ್ತಿಕ ಗುಣಲಕ್ಷಣಗಳೊಂದಿಗೆ ಸಂಬಂಧ ಹೊಂದಿಲ್ಲ (ವ್ಯಕ್ತಿಗತ ಭಿನ್ನತೆಗಳನ್ನು ಖಂಡಿತವಾಗಿಯೂ ನಿರಾಕರಿಸಲಾಗದು). ಬದಲಿಗೆ, ಇದು ಅಂದಿನ ವಸಾಹತುಶಾಹಿ–ವಿರೋಧಿ ನಿಯಂತ್ರಣ ನೀತಿಗಳ ಆಳ್ವಿಕೆ ಮತ್ತು ಇಂದಿನ ನವ ಉದಾರವಾದಿ ಆಳ್ವಿಕೆ ಇವುಗಳ ನಡುವಿನ ವ್ಯತ್ಯಾಸಕ್ಕೆ ಸಂಬಂಧಪಟ್ಟದ್ದಾಗಿದೆ.

ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಫೇಸ್‌ಬುಕ್

ಒಂದು ದೇಶವು ಅನುಸರಿಸುವ ವಿದೇಶಾಂಗ ನೀತಿ ಮತ್ತು ಅದು ಹೊಂದಿರುವ ಆರ್ಥಿಕ ನೀತಿಗಳ ನಡುವೆ ಒಂದು ನಿಕಟ ಸಂಬಂಧವಂತೂ ಇದ್ದೇ ಇದೆ. ಸ್ವಾವಲಂಬನೆಗೆ ಆದ್ಯತೆ ನೀಡಿದ ನಿಯಂತ್ರಣ ನೀತಿಗಳ ಆಳ್ವಿಕೆಯು ಭಾರತದ ಅಲಿಪ್ತ ವಿದೇಶಾಂಗ ನೀತಿಯೊಂದಿಗೆ ಮತ್ತು ಆಮೂಲಕ ಸಾಮ್ರಾಜ್ಯಶಾಹಿ ಬೆದರಿಕೆಯನ್ನು ಎದುರಿಸುವ ಇಚ್ಛಾಶಕ್ತಿ ಮತ್ತು ಸಾಮರ್ಥ್ಯದೊಂದಿಗೆ ತಳಕು ಹಾಕಿಕೊಂಡಿತ್ತು. ಆದರೆ, ಸ್ವಾವಲಂಬನೆಯನ್ನು ಬುಡಮೇಲು ಮಾಡುವ ಬಗ್ಗೆಯೇ ಹೆಮ್ಮೆಪಡುವ ನವ ಉದಾರವಾದಿ ಆಳ್ವಿಕೆಯು 'ಭಾರತದಲ್ಲಿ ತಯಾರಿಕೆ ಮಾಡಿ' ಎಂದು ವಿದೇಶಿ ಬಂಡವಾಳವನ್ನು ಆಹ್ವಾನಿಸುತ್ತದೆ. ಅಭಿವೃದ್ಧಿಶೀಲ ದೇಶವನ್ನು ಅದರ ಸ್ವಾವಲಂಬನೆಯ ಪ್ರಯತ್ನಗಳಿಂದ ದೂರ ಸರಿಯುವಂತೆ ಮಾಡುವುದನ್ನೇ ಮೂಲೋದ್ದೇಶವಾಗಿ ಹೊಂದಿರುವ ನವ ಉದಾರವಾದವನ್ನು ಒಪ್ಪಿಕೊಂಡ ದೇಶವು ತೋಳು ತಿರುಚುವ ಸಾಮ್ರಾಜ್ಯಶಾಹಿಗೆ ತನ್ನನ್ನು ತಾನೇ ಅದರ ಗುರಿಯಾಗಿ ಮಾಡಿಕೊಳ್ಳುತ್ತದೆ.

ಭಾರತದಲ್ಲಿ ನವ ಉದಾರವಾದಿ ಆಳ್ವಿಕೆಯನ್ನು ಪರಿಚಯಿಸಿದಾಗ ಅದರ ಪರವಾಗಿ ಮುಂದಿಟ್ಟ ವಾದವೆಂದರೆ, ಜಾಗತಿಕವಾಗಿ ಚಲನಶೀಲವಾದ ಬಂಡವಾಳವು ಒಂದು ಶಾಶ್ವತ ಹೊಸ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ. ಬಂಡವಾಳವು ಹರಿದಾಡುವ ಕಾರಣದಿಂದಾಗಿ ಚಟುವಟಿಕೆಗಳು ಮೊದಲು ನೆಲೆಗೊಂಡಿದ್ದ ಜಾಗತಿಕ ಉತ್ತರದಿಂದ ಕಡಿಮೆ–ವೇತನದ ಜಾಗತಿಕ ದಕ್ಷಿಣದ ದೇಶಗಳು ಈಗ ಚಟುವಟಿಕೆಗಳು ನೆಲೆಗೊಳ್ಳುವ ಪ್ರಾಥಮಿಕ ತಾಣಗಳಾಗಿವೆ. ಹಾಗಾಗಿ, ಉತ್ತರದಿಂದ ದಕ್ಷಿಣಕ್ಕೆ ಚಟುವಟಿಕೆಗಳ ಸ್ಥಳಾಂತರವು ದಕ್ಷಿಣದಲ್ಲಿ ಅಭಿವೃದ್ಧಿಯ ಕೊರತೆಯನ್ನು ಮತ್ತು ಬಡತನವನ್ನು ತೊಡೆದುಹಾಕುತ್ತದೆ ಎಂಬುದು ಈ ವಾದದ ತಿರುಳಾಗಿದೆ. ಈ ವಾದದಲ್ಲಿರುವ ಸಮಸ್ಯೆಯೆಂದರೆ, ಜಾಗತಿಕ ವ್ಯವಸ್ಥೆಯ ಬಗ್ಗೆ ಏನನ್ನೂ ಶಾಶ್ವತವೆಂದು ಪರಿಗಣಿಸುವುದು ಸಾಧ್ಯವಿಲ್ಲ ಎಂಬುದು. ಸಾಮ್ರಾಜ್ಯಶಾಹಿ ರಚಿಸಿದ ವ್ಯವಸ್ಥೆಗಳು ಅದರ ಇಚ್ಛೆಯ ಮೇರೆಗೆ ಬದಲಾಗುತ್ತವೆ ಎಂಬುದು ಈಗ ಸ್ಪಷ್ಟವಾಗುತ್ತಿದೆ ಮತ್ತು ಅಸ್ತಿತ್ವದಲ್ಲಿರುವ ವ್ಯವಸ್ಥೆಯಿಂದ ಸಾಮ್ರಾಜ್ಯಶಾಹಿಯು ಹಿಂದೆ ಸರಿದಾಗ, ಅದರ ಹಿಡಿತದಲ್ಲಿ ಸಿಲುಕಿಕೊಂಡ ಭಾರತದಂತಹ ದಕ್ಷಿಣದ ದೇಶಗಳು ಅದರಿಂದ ಹೊರಬರಲು ಕಷ್ಟಪಡುತ್ತವೆ.

ಒಂದು ದೇಶವು ವ್ಯಾಪಾರ–ಅವಲಂಬಿತವಾದರೆ, ವ್ಯಾಪಾರದಲ್ಲಿ ಉಂಟಾಗುವ ಯಾವುದೇ ಅಡಚಣೆಯು ದೇಶವನ್ನು ಬಹಳವಾಗಿ ತಟ್ಟುತ್ತದೆ. ಹಾಗಾಗಿ, ತನ್ನ ಆರ್ಥಿಕ ನೀತಿಗಳಲ್ಲಿ ಮಹತ್ತರವಾದ ಮರು–ಹೊಂದಾಣಿಕೆಗಳನ್ನು ಮಾಡಿಕೊಳ್ಳಲು ಸಿದ್ಧವಿಲ್ಲದಿದ್ದರೆ, ಅದು ಸಾಮ್ರಾಜ್ಯಶಾಹಿಯು ನಿರ್ಲಜ್ಜವಾಗಿ ಬೆದರಿಸತೊಡಗಿದ ಪ್ರತಿ ಸಂದರ್ಭದಲ್ಲೂ ರಾಜಿ ಮಾಡಿಕೊಳ್ಳಬೇಕಾಗುತ್ತದೆ. ಆದರೆ, ಇಂತಹ ಒಂದು ಮರು–ಹೊಂದಾಣಿಕೆಯನ್ನು ನವ ಉದಾರವಾದಿ ಆಳ್ವಿಕೆಯ ಪ್ರಧಾನ ಫಲಾನುಭವಿಗಳಾದ ದೊಡ್ಡ ದೊಡ್ಡ ಬೂರ್ಜ್ವಾಗಳು ಮತ್ತು ನಗರ ಮಧ್ಯಮ ವರ್ಗದ ಮೇಲಿನ ಸ್ತರಗಳು ವಿರೋಧಿಸುತ್ತವೆ. ಆದ್ದರಿಂದ ಈ ವಿಭಾಗಗಳ ಹಿತಾಸಕ್ತಿಗಳ ಬಗ್ಗೆ ಕಾಳಜಿ ವಹಿಸುವ ಯಾವುದೇ ಸರ್ಕಾರವು ಸಾಮ್ರಾಜ್ಯಶಾಹಿಯ ದಾದಾಗಿರಿಯ ಆಗ್ರಹಗಳಿಗೆ ಮಣಿಯುತ್ತದೆ.

ಒಂದು ಉದಾಹರಣೆ ಈ ಅಂಶವನ್ನು ಸ್ಪಷ್ಟಪಡಿಸುತ್ತದೆ. ಸುಂಕ ಹೇರುವ ಟ್ರಂಪ್ ಅವರ ಬೆದರಿಕೆ ರೂಪಾಯಿಯನ್ನು ದುರ್ಬಲಗೊಳಿಸುತ್ತದೆ ಎಂಬುದು ಈಗಾಗಲೇ ಸಾಬೀತಾಗಿದೆ. ಹೆಚ್ಚಿನ ಸುಂಕಗಳು ಶುರುವಾಗುತ್ತಿದ್ದಂತೆಯೇ, ಬಂಡವಾಳವು ಹೊರಹರಿಯುವುದನ್ನು ನಿಯಂತ್ರಿಸದ ಹೊರತು ರೂಪಾಯಿಯು ಮತ್ತಷ್ಟು ಕುಸಿಯುತ್ತದೆ. ಮತ್ತು, ಅದರ ಜೊತೆಗೆ, ವಿದೇಶಿ ವಿನಿಮಯ ವಲಯವನ್ನು ನಿರ್ವಹಿಸುವುದಕ್ಕಾಗಿ ವಿದೇಶಿ ವ್ಯಾಪಾರದ ಮೇಲೆ ನಿಯಂತ್ರಣ ಹೇರಬೇಕಾಗುತ್ತದೆ. ಈ ಕ್ರಮಗಳು ಅಂತಿಮವಾಗಿ ನವ ಉದಾರವಾದಿ ಆಳ್ವಿಕೆಯಿಂದ ಹಿಂದೆ ಸರಿದು ಅದರ ಜಾಗದಲ್ಲಿ ಒಂದು ಪರ್ಯಾಯ ಆಳ್ವಿಕೆಯನ್ನು ತರಬೇಕಾಗುತ್ತದೆ. ಆದರೆ, ಜಾಗತೀಕರಣಗೊಂಡ ಹಣಕಾಸು ಬಂಡವಾಳದೊಂದಿಗೆ ಒಂದಾಗಿರುವ ದೊಡ್ಡ ಬೂರ್ಜ್ವಾಗಳು ಇದನ್ನು ಪ್ರತಿರೋಧಿಸುತ್ತಾರೆ ಮತ್ತು ಇಂತಹವರ ಹಿತಾಸಕ್ತಿಗಳಿಗೆ ಬದ್ಧವಾಗಿರುವ ಸರ್ಕಾರವು ಅಂತಹ ಯಾವುದೇ ಪರ್ಯಾಯವನ್ನು ಪರಿಗಣಿಸುವುದಿಲ್ಲ. ಬದಲಿಗೆ, ಸಾಮ್ರಾಜ್ಯಶಾಹಿಯ ದಾದಾಗಿರಿಗೆ ಶರಣಾಗಲು ಮುಂದಾಗುತ್ತದೆ.

ಸಾಮ್ರಾಜ್ಯಶಾಹಿಯಿಂದ ಸ್ವತಂತ್ರವಾಗಿ ಉಳಿಯುವುದು ಮೂಲಭೂತವಾಗಿ ನವ ಉದಾರವಾದಿ ಕಾರ್ಯತಂತ್ರವನ್ನು ಅನುಸರಿಸುವುದಕ್ಕೆ ತದ್ವಿರುದ್ಧವಾಗಿದೆ. ಈ ಅಂಶವನ್ನು ಭಾರತದ ಅರ್ಥವ್ಯವಸ್ಥೆಯು 1990ರ ದಶಕದಲ್ಲಿ ದಿಕ್ಕು ಬದಲಾಯಿಸುವುದಕ್ಕಿಂತ ಬಹಳ ಹಿಂದೆಯೇ ಅಧಿಕಾರಕ್ಕೆ ಬಂದ ಭಾರತದ ಸರ್ಕಾರಗಳು ಗುರುತಿಸಿದ್ದವು. ನವ ಉದಾರವಾದದ ಅನುಸರಣೆಯು ದೇಶದ ಸ್ವಾತಂತ್ರ್ಯವನ್ನು ನಿರ್ಬಂಧಿಸಿದೆ. ಡೊನಾಲ್ಡ್ ಟ್ರಂಪ್‌ರ ದಾದಾಗಿರಿಯ ಮಂಗಾಟಗಳು ಈ ಅಂಶವನ್ನು ಧಾರಾಳವಾಗಿ ಸ್ಪಷ್ಟಪಡಿಸುತ್ತವೆ. ●

ಪ್ರಜಾಪ್ರಭುತ್ವದ ಉದ್ಘಾಟನೆಯೊಂದಿಗೇ...

ಪುಟ 2 ರಿಂದ

ಸಾಧಿಸುವುದರಲ್ಲಿ ಮೇಲುಗೈ ಪಡೆದರು. ಇಂತಹ ಕೃತ್ಯಗಳಿಗೆ ಅಡ್ಡಿಯಾಗುವುದೆಂದೇ ಮತದಾನವನ್ನು ಕೇವಲ ಆಸ್ತಿವಂತ ವರ್ಗಗಳಿಗೇ ಸೀಮಿತ ಮಾಡಿಕೊಂಡರಲ್ಲವೇ! ಇಂತಹ ಸ್ವಾರ್ಥ ಸಾಧನೆ , ಮಹಾ ಭ್ರಷ್ಟಾಚಾರಕ್ಕೆ ಪಾರ್ಲಿಮೆಂಟ್ ನ ಬಹುಮತವೇ ಸಾಧನ ಎಂದ ಮೇಲೆ, ಅದಕ್ಕಾಗಿ ಚುನಾವಣೆಗಳಲ್ಲಿ ಭ್ರಷ್ಟಾಚಾರದ ಪರಿ ಕೇಳಬೇಕೆ.

ಚುನಾವಣಾ ಭ್ರಷ್ಟಾಚಾರ

1695ರ ಮೊದಲ ಚುನಾವಣೆಯಲ್ಲಿಯೇ ಅಭ್ಯರ್ಥಿಗಳು ಮನರಂಜನೆ ಕಾರ್ಯಕ್ರಮ ಏರ್ಪಡಿಸಿದರು. ಏಲ್ ಎಂಬ ಬ್ರಿಟನ್ ನ ಜನಪ್ರಿಯ ಮದ್ಯವನ್ನು ಕೇಸ್ ಗಟ್ಟಲೆ ಹಾಗೆಯೇ, ಹೊಗೆಸೊಪ್ಪನ್ನು ಯಥೇಚ್ಛವಾಗಿ ಸರಬರಾಜು ಮಾಡಿದರು. ಇದಕ್ಕಾಗಿ ಹಣದ ಹೊಳೆ ಹರಿಸಿದರು. ಕೆಲವರು ಒಂದೊಂದು ಮತವನ್ನೂ ಹಣ ಕೊಟ್ಟು ಕೊಂಡರು. ಆಗ ಒಂದು ಓಟಿನ ಬೆಲೆ 20 ಪೌಂಡ್‌ಗಳಷ್ಟು, ಮೂರು ಶತಮಾನಗಳ ನಂತರ ಈಗ ಅದರ ಬೆಲೆ ಎಷ್ಟು ಎಂದು ಲೆಕ್ಕಿಸಿದರೆ ಎಷ್ಟಾಗಬಹುದು! ಮತದಾನದ ದಿನ ಮತದಾರರನ್ನು ಸೆಳೆಯಲು ಅಭ್ಯರ್ಥಿಗಳು ಮಾಡುತ್ತಿದ್ದ ಆಬ್ಬರವೇನು! ಒಬ್ಬ ಅಭ್ಯರ್ಥಿ 900 ಕುದುರೆ ಸವಾರರ ಜೊತೆ ಮೆರವಣಿಗೆ ಮಾಡುತ್ತಾ ಬಂದ. ಮತ್ತೊಂದು ಕಡೆ ಕೇವಲ ಮೂರು ಸಾವಿರ ಮಾತ್ರ ಮತದಾರರಿದ್ದರು. ಆದರೆ ಅಭ್ಯರ್ಥಿ ಹತ್ತು ಸಾವಿರ ಜನರ ಮೆರವಣಿಗೆ ಮಾಡಿದ.

ಲಂಚದ ಪಾರ್ಲಿಮೆಂಟ್

1841ರ ಚುನಾವಣೆಯ ನಂತರದ ಪಾರ್ಲಿಮೆಂಟ್ ಲಂಚದ ಮೇಲೆ ಆಯ್ಕೆಯಾದ ಪಾರ್ಲಿಮೆಂಟ್ ಎಂದೇ ಹೆಸರಾಯಿತು. ಅಷ್ಟೊಂದು ಹಣದ ಹೊಳೆ ಹರಿದಿತ್ತು. ವಸಾಹತುಗಳಲ್ಲಿ ಕಪ್ಪು ಜನರನ್ನು ಗುಲಾಮರನ್ನಾಗಿ ದುಡಿಸಿಕೊಂಡು, ಸಾವಿರಾರು ಎಕರೆಗಳಷ್ಟು ವಿಶಾಲ ವಿಸ್ತೀರ್ಣದಲ್ಲಿ ಕಬ್ಬು, ಹತ್ತಿ, ಹೊಗೆಸೊಪ್ಪು ಬೆಳೆದು ಗಳಿಸಿದ ಲಾಭ, ಭಾರತದಂತಹ ದೇಶಗಳ ನೇಕಾರರನ್ನು ಉಪವಾಸ ಕೆಡವಿ ಮ್ಯಾಂಚೆಸ್ಟರ್ ಬಟ್ಟೆಗಳನ್ನು ಮಾರಿ ಗಳಿಸಿದ ಲಾಭ ಕುಣಿಯುತ್ತಿತ್ತಲ್ಲ. ಅದು ಈ ಚುನಾವಣೆಗಳಲ್ಲಿಯೂ ಕುಣಿಯಿತು.

ಚುನಾವಣಾ ವೆಚ್ಚದ ಮೇಲೆ ನಿರ್ಬಂಧ

ನಾವು ಭಾರತದ ಚುನಾವಣೆಗಳಲ್ಲಿ ಚುನಾವಣಾ ವೆಚ್ಚದ ಮೇಲೆ ಮಿತಿಯ ಕಾನೂನು, ಅದರ ಮೇಲೆ ಉಸ್ತುವಾರಿಯ ಕ್ರಮಗಳು, ಹಣ ಸಾಗಣೆಯ ಜಪ್ತಿ ಇತ್ಯಾದಿಗಳ ಬಗ್ಗೆ ಕೇಳುತ್ತೇವಲ್ಲ. ಇಂತಹ ಕ್ರಮಗಳ ತಾಯಿಯೂ ಜಗತ್ತಿನ ಪ್ರಜಾಪ್ರಭುತ್ವದ ತಾಯಿಯಾದ ಇಂಗ್ಲೆಂಡೇ! ಇಂಗ್ಲೆಂಡಿನಾದ್ಯಂತ ಜನರ ನಡುವೆ ಲಂಚದ ಪಾರ್ಲಿಮೆಂಟ್ ಬಗ್ಗೆ ಎದ್ದ ಅಸಹನೆ 1854ರಲ್ಲಿ ಪಾರ್ಲಿಮೆಂಟ್ ಚುನಾವಣಾ ವೆಚ್ಚ ನಿರ್ಬಂಧಕ ಕಾನೂನು ಅಂಗೀಕರಿಸುವಂತೆ ಮಾಡಿತು. ಆದರೆ ಈ ಕಾನೂನು ಚುನಾವಣಾ ಭ್ರಷ್ಟಾಚಾರವನ್ನು ನಿಯಂತ್ರಿಸುವಲ್ಲಿ ಬಹಳ ಪ್ರಯೋಜನವೇನೂ ಆಗಲಿಲ್ಲ ಎಂಬುದಕ್ಕೆ 1870ರಲ್ಲಿ ಪಾರ್ಲಿಮೆಂಟ್ ನೇಮಿಸಿದ ಜಂಟಿ ತನಿಖಾ ಸಮಿತಿಯ ವರದಿ ಸ್ಪಷ್ಟಪಡಿಸುತ್ತದೆ. ಅದರ ಪ್ರಕಾರ: ಬಹಳಷ್ಟು ಮತದಾರರು ಮೊದಲೇ ದುಡ್ಡು ಕೊಡದೇ ಇದ್ದರೆ ಮತಗಟ್ಟೆಗಳಿಗೇ ಬರುವುದಿಲ್ಲ. ಅದರ ಜೊತೆಗೆ ಮದ್ಯ ಸರಬರಾಜಿನ ಕೂಪನ್ ಕೂಡಾ ನೀಡಲಾಗುತ್ತಿದೆ.

ಬೆದರಿಕೆಗಳು, ದೈಹಿಕ ದಾಳಿಗಳು

ಇದೇ ಸಮಿತಿ ಮುಂದುವರೆದು ಚುನಾವಣೆಗಳಲ್ಲಿ ಬೆದರಿಕೆ ಹಾಕುವುದು, ಹೊರಗಿನ ಪ್ರಭಾವ ಕೂಡಾ ಚುನಾವಣಾ ಫಲಿತಾಂಶಗಳನ್ನು ವಿಕೃತಗೊಳಿಸುತ್ತದೆ. ಗ್ರಾಮೀಣ ಕ್ಷೇತ್ರಗಳಲ್ಲಿ ಇದು ಸಾಮಾನ್ಯ ಎಂದು ಹೇಳಿದೆ. ಇಷ್ಟೆಲ್ಲ ಹಣದ, ಮದ್ಯದ ಹೊಳೆ ಹರಿಯುವಾಗ ಕೈ ಕೈ ಮಿಲಾಯಿಸುವುದೂ, ಹಿಂಸೆ ಕೊಲೆಗಳೂ ನಡೆಯುತ್ತಿದ್ದವು. 1868ರ ಒಂದು ಚುನಾವಣೆಯಲ್ಲಿ 50 ದಿನಗಳ ಪ್ರಚಾರದ ಅವಧಿಯಲ್ಲಿ 39 ದಂಗೆಗಳು, 178 ಗಲಭೆಗಳು, 195 ಇತರ ಪ್ರಕರಣಗಳು ನಡೆದಿವೆ. 17 ಜನರ ಹತ್ಯೆಯಾಗಿದೆ. ಹೀಗೆ ಹಲವು ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಹಿಂಸೆ, ಕೊಲೆಗಳು ಚುನಾವಣೆಗಳನ್ನು ವಿಕೃತಗೊಳಿಸುತ್ತಿದ್ದವು. ಅದರ ನಿಯಂತ್ರಣಕ್ಕಾಗಿ ಹಲವೆಡೆ ಸೈನ್ಯವನ್ನು ನಿಯೋಜಿಸುವ ತುರ್ತು ಇತ್ತು. ಆದರೆ ಒಂದು ಪ್ರದೇಶದಲ್ಲಿ ಸೈನ್ಯವನ್ನೇ ಬೆದರಿಕೆಯ ಸಾಧನವಾಗಿ ಬಳಸಲಾಗುತ್ತಿತ್ತು ಎಂದು ಆ ವರದಿ ಹೇಳಿದೆ.

ಈ ವಿವರಗಳು ಪಾರ್ಲಿಮೆಂಟ್ ಎಂದರೆ ಆಸ್ತಿವಂತ , ಬಂಡವಾಳಶಾಹಿ ವರ್ಗಗಳು ತಮ್ಮ ಶೋಷಣೆಯನ್ನು ಮುಂದುವರೆಸಲು, ಸಂಪತ್ತನ್ನು ವೃದ್ಧಿಸಿಕೊಳ್ಳಲು ಎಲ್ಲ ಅನೀತಿಯುತ ಮಾರ್ಗಗಳಿಗೂ ಕೈ ಹಾಕುವುದು ಪ್ರಜಾಪ್ರಭುತ್ವದ ಮೊದಲ ದೇಶದಲ್ಲಿ, ಪ್ರಜಾಪ್ರಭುತ್ವದ ಮೊದಲ ದಿನಗಳಿಂದಲೇ ಅವಿರತವಾಗಿ ಸಾಗುತ್ತಿತ್ತು ಎಂಬುದನ್ನು ಸಾರುತ್ತವೆ.

ಟ್ರಂಪ್ ಸುಂಕ ಹೆಚ್ಚಳದ ಪರಿಣಾಮ...

ಪುಟ 7 ರಿಂದ

ಮತ್ತಷ್ಟು ಹೆಚ್ಚಾಗುತ್ತದೆ. ಜನರ ಖರೀದಿ ಶಕ್ತಿ ಕಡಿಮೆಯಾಗುತ್ತದೆ.

ತೈಲದ ಮೇಲಿನ ಪ್ರಾಬಲ್ಯಕ್ಕಾಗಿ

ಇರಾನ್ ಜೊತೆ ತೈಲ ಮತ್ತು ಪೆಟ್ರೋಕೆಮಿಕಲ್ ಉತ್ಪನ್ನಗಳ ವ್ಯವಹಾರದಲ್ಲಿ ನಮ್ಮ ದೇಶವು ಭಾಗಿಯಾಗಿದೆ ಎಂಬ ಆರೋಪದ ಮೇಲೆ, ಭಾರತದ ಆರು ಪ್ರಮುಖ ಕಂಪನಿಗಳ ಮೇಲೆ ಅಮೆರಿಕ ಆರ್ಥಿಕ ನಿರ್ಬಂಧಗಳನ್ನು ವಿಧಿಸಿದೆ. ವಿಶ್ವದಾದ್ಯಂತ 20 ತೈಲ ಕಂಪನಿಗಳ ಮೇಲೆ ನಿರ್ಬಂಧಗಳನ್ನು ವಿಧಿಸಲಾಗಿದೆ, ಅದರಲ್ಲಿ ಆರು ನಮ್ಮ ದೇಶದಲ್ಲಿವೆ. ಇರಾನ್‌ನ ತೈಲ ವ್ಯವಹಾರವನ್ನು ತಡೆಯಲು 'ಗರಿಷ್ಠ ಒತ್ತಡ ಅಭಿಯಾನ'ವನ್ನು ಅಮೆರಿಕ ಕೈಗೊಂಡಿದೆ. ಇರಾನ್ ಮತ್ತು ಭಾರತದ ನಡುವೆ ಐತಿಹಾಸಿಕ ವಾಣಿಜ್ಯ ಸಂಬಂಧಗಳಿವೆ. 2019ರವರೆಗೆ ಇರಾನ್‌ನಿಂದ ಭಾರತವು ಹೆಚ್ಚಿನ ಪ್ರಮಾಣದ ತೈಲವನ್ನು ಆಮದು ಮಾಡಿಕೊಳ್ಳುತ್ತಿತ್ತು. ಆದರೆ, ಆ ವರ್ಷ ಇರಾನ್ ಮೇಲೆ ಅಮೆರಿಕ ವಾಣಿಜ್ಯ ನಿರ್ಬಂಧಗಳನ್ನು ವಿಧಿಸಿತು. ಅಮೆರಿಕದ ಒತ್ತಡಕ್ಕೆ ಮಣಿದು ನಾವು ಇರಾನ್‌ನಿಂದ ತೈಲ ಆಮದನ್ನು ಗಣನೀಯವಾಗಿ ಕಡಿಮೆ ಮಾಡಿದ್ದೇವೆ. ಇರಾನ್‌ನಲ್ಲಿನ ತೈಲ ಅಗ್ಗದ ದರದಲ್ಲಿ ದೊರಕುತ್ತದೆ. ಈಗ ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳಬಾರದು ಎಂದು ಟ್ರಂಪ್ ಬೆದರಿಕೆ ಹಾಕುತ್ತಿದ್ದಾರೆ. ಇದಕ್ಕೂ ನಮ್ಮ ದೇಶದ ಆಡಳಿತಗಾರರು ಒಪ್ಪಿದ್ದಾರೆ ಎಂದು ಟ್ರಂಪ್ ಟ್ವೀಟ್ ಮಾಡಿದ್ದರೂ, ನಮ್ಮ ಆಡಳಿತಗಾರರಿಂದ ಯಾವುದೇ ಬಲವಾದ ಪ್ರತಿಕ್ರಿಯೆ ಬಂದಿಲ್ಲ.

–ಸಿ.ಚಿ

ಚನ್ನರಾಯಪಟ್ಟಣದ ಹಳ್ಳಿಗಳಿಗೆ ಅಶೋಕ್ ದವಳೆ ಭೇಟಿ



ಪುಟ 8 ರಿಂದ

ಅವರು ಈ ವರ್ಷ ಮಾವಿನ ಹಣ್ಣಿನ ಬೆಲೆ ಸಂಪೂರ್ಣ ಕುಸಿದಿರುವುದು ಮತ್ತು ಅಮೇರಿಕಾದಿಂದ ತಿರಸ್ಕರಿಸಲ್ಪಟ್ಟು ಹಣ್ಣುಗಳು ವಾಪಸ್ ಬಂದ ವಿಷಯವನ್ನು ತಿಳಿಸಿದರು. ನಾನು ಕಳೆದ ಮೂರು ದಿನಗಳ ಹಿಂದೆ ತಮಿಳುನಾಡು ಪ್ರವಾಸದಲ್ಲಿದ್ದೆ, ಅಲ್ಲಿಯೂ ಇಂತಹದ್ದೇ ಪರಿಸ್ಥಿತಿ ನಿರ್ಮಾಣವಾಗಿದೆ. ಕೃಷ್ಣಗಿರಿ ಜಿಲ್ಲೆಯ ತೋತಾಪುರಿ ಮಾವಿನ ಹಣ್ಣಿನ ಒಂದು ಟನ್ ಬೆಲೆ 16,000 ರೂ ಇತ್ತು. ಈಗ ಅದು ಒಂದು ಟನ್‌ಗೆ 4,000 ರೂಗೆ ಬಂದಿದೆ. ಕರ್ನಾಟಕದಲ್ಲಿ 2500 ರೂಗೆ ಕುಸಿದಿದೆ. ರೈತರು ಎಷ್ಟೇ ಕಷ್ಟಪಟ್ಟರೂ ಅವರು ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಮಹಾರಾಷ್ಟ್ರದಲ್ಲಿಯೂ ಟೊಮೊಟೋ, ಈರುಳ್ಳಿಗಳಿಗೆ ಬೆಲೆಯಿಲ್ಲದೆ ರಸ್ತೆಗೆ ಸುರಿಯುವಂತಹ ಪರಿಸ್ಥಿತಿ ಹಲವು ಬಾರಿ ನಿರ್ಮಾಣವಾಗಿದೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ ಸರ್ಕಾರಗಳು ರೈತರ ನೆರವಿಗೆ ದಾವಿಸುತ್ತಿಲ್ಲ.

ಒಂದೆಡೆ ಬಿತ್ತನೆ ಬೀಜ, ರಸಗೊಬ್ಬರ, ಕ್ರಿಮಿನಾಶಕಗಳು ಮತ್ತು ಯಂತ್ರೋಪಕರಣಗಳ ಬೆಲೆಗಳು ಗಗನಕ್ಕೇರಿವೆ. ವಿದ್ಯುತ್ ಡಿಜಿಟಲ್ ಸ್ಮಾರ್ಟ್ ಮೀಟರ್ ಅಳವಡಿಕೆಯಿಂದಾಗಿ ರೈತರಿಗೆ ವಿದ್ಯುತ್ ಬೆಲೆಯೂ ವಿಪರೀತ ಹೆಚ್ಚಾಗಿದೆ. ಮೊದಲು 1,000 ರೂ ಬಿಲ್ ಬರುತ್ತಿದ್ದ ಮನೆಗೆ ಈಗ 4,000 ರೂಗಳು ಬರುತ್ತಿದೆ. ಹೀಗಾಗಿ ಕೃಷಿ ಉತ್ಪಾದನಾ ವೆಚ್ಚ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಅದಕ್ಕೆ ತಕ್ಕಂತೆ ರೈತರ ಬೆಳೆಗಳಿಗೆ ಬೆಲೆ ನಿಗದಿಯಾಗುತ್ತಿಲ್ಲ. ಇದರಿಂದ ರೈತರು ಸಂಕಷ್ಟ ಅನುಭವಿಸುತ್ತಿದ್ದಾರೆ.

ಆದ್ದರಿಂದಲೇ ಅಖಿಲ ಭಾರತ ಕಿಸಾನ್ ಸಭಾ ಮತ್ತು ಸಂಯುಕ್ತ ಕಿಸಾನ್ ಮೋರ್ಚಾ ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಬೇಕಾದರೆ ರೈತರು ಬೆಳೆದ ಬೆಳೆಗಳಿಗೆ ರಾಷ್ಟ್ರೀಯ ಕೃಷಿ ಆಯೋಗದ ಅಧ್ಯಕ್ಷರಾಗಿದ್ದ, ಕೃಷಿ ತಜ್ಞ ಡಾ.ಎಂಎಸ್.ಸ್ವಾಮಿನಾಥನ್ ಅವರ ಆಯೋಗದ ಶಿಫಾರಸ್ಸಿನಂತೆ, ಸಿ2+50% ಸೂತ್ರದ ಆಧಾರದಲ್ಲಿ ಸಮಗ್ರ ಉತ್ಪಾದನಾ ವೆಚ್ಚಕ್ಕೆ ಶೇ. 50ರಷ್ಟು ಲಾಭಾಂಶವನ್ನು ಸೇರ್ಪಡೆ ಮಾಡಿ ಬೆಂಬಲ ಬೆಲೆ ನಿಗದಿಪಡಿಸಬೇಕು ಮತ್ತು ಇದಕ್ಕೆ ಕಾನೂನಿನ ಗ್ಯಾರಂಟಿ ನೀಡಬೇಕೆಂದು ಒತ್ತಾಯಿಸಿ ಚಳುವಳಿ ನಡೆಸುತ್ತಿದ್ದೇವೆ.

ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ರೈತರ ಪರವಾಗಿಲ್ಲ

2006ರಲ್ಲಿ ಸ್ವಾಮಿನಾಥನ್ ಅವರ ವರದಿ ಕೇಂದ್ರ ಸರ್ಕಾರಕ್ಕೆ ಸಲ್ಲಿಕೆಯಾಗುತ್ತದೆ. ಆ ಸಂದರ್ಭದಲ್ಲಿ ಅಧಿಕಾರ ನಡೆಸುತ್ತಿದ್ದ ಕಾಂಗ್ರೆಸ್ ನೇತೃತ್ವದ ಮನಮೋಹನ್ ಸಿಂಗ್ ಸರ್ಕಾರ 2013 ರವರೆಗೂ ಅಧಿಕಾರದಲ್ಲಿದ್ದರೂ, ಇದರ ಕುರಿತು ಒಂದು ದಿನವೂ ಸಂಸತ್ತಿನಲ್ಲಿ ಚರ್ಚಿಸಲಿಲ್ಲ. ಆ ನಂತರ ಈ ವರದಿಯನ್ನು ಜಾರಿಗೊಳಿಸುತ್ತೇನೆಂದು ಚುನಾವಣೆಯಲ್ಲಿ ಭರವಸೆ ನೀಡಿ 2014ರಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ 11 ವರ್ಷಗಳಿಂದ ಸತತವಾಗಿ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿದ್ದರೂ ಈ ಕುರಿತು ಮಾತನಾಡಲು ತಯಾರಿಲ್ಲ. ಮಾತ್ರವಲ್ಲ, ಅಧಿಕಾರಕ್ಕೆ ಬಂದ ಆರೇ ತಿಂಗಳಲ್ಲಿ ಡಾ.ಸ್ವಾಮಿನಾಥನ್ ಅವರ ವರದಿಯನ್ನು ಜಾರಿಮಾಡಲು ಸಾಧ್ಯವಿಲ್ಲವೆಂದು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದರು. ಅಂದರೆ ಇದುವರೆಗೂ ಅಧಿಕಾರ ನಡೆಸಿದ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಸರ್ಕಾರಗಳು ತಮ್ಮ ಅಧಿಕಾರವನ್ನು ರೈತರ ಪರವಾಗಿ ಬಳಕೆ ಮಾಡಲಿಲ್ಲ ಎಂಬುದು ಸ್ಪಷ್ಟವಾಗಿದೆ.

ಅಚಲ ಹೋರಾಟದಿಂದ ನಾವು ನಮ್ಮ ಹಕ್ಕನ್ನು ಪಡೆದುಕೊಂಡಿದ್ದೇವೆ

ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ 1777 ಎಕ್ಕರೆ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿದ್ದು ಯಡಿಯೂರಪ್ಪ ನೇತೃತ್ವದ ಬಿಜೆಪಿ ರಾಜ್ಯ ಸರ್ಕಾರ. ಆ ನಂತರದ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ ಸಿದ್ದರಾಮಯ್ಯ ಸರ್ಕಾರ ಅಧಿಕಾರಕ್ಕೆ ಬಂತು. ಆದರೂ ಇವರಾರೂ ಅಧಿಕಾರ ಬಂದ ಕೂಡಲೇ ನಮ್ಮ ವಿಚಾರವನ್ನು ಗಮನಿಸಲಿಲ್ಲ, ಈಗ ಸಿಕ್ಕಿರುವ ಜಯ ಸಿದ್ದರಾಮಯ್ಯನವರ ಅಥವಾ ಡಿ.ಕೆ.ಶಿವ ಕುಮಾರ್ ಅವರ ಕೃಪಾಕಟಾಕ್ಷದಿಂದ ಸಿಕ್ಕಿರುವುದಲ್ಲ, ಬದಲಾಗಿ ನಮ್ಮ ಅಚಲ ಹೋರಾಟದಿಂದ ನಾವು ನಮ್ಮ ಹಕ್ಕನ್ನು ಕಿತ್ತುಕೊಂಡಿದ್ದೇವೆ.

ಅಮೆರಿಕಾ ವಿಧಿಸುತ್ತಿರುವ 50ರಷ್ಟು ಸುಂಕದಿಂದ ರೈತರಿಗೆ ಸಂಕಷ್ಟ

ಈಗ ನಮ್ಮ ಮುಂದೆ ಮತ್ತೊಂದು ದೊಡ್ಡ ವಿಷಯವಿದೆ. ಅದೇನೆಂದರೆ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದ ಸರಕುಗಳ ಮೇಲೆ ವಿಧಿಸುತ್ತಿರುವ ಶೇ. 25 ರಿಂದ 50 ರಷ್ಟು ಸುಂಕ ಹೇರಿಕೆ. ಇದರಿಂದ ಭಾರತದ ಎಲ್ಲಾ ರೀತಿಯ ಬೆಳೆಗಾರರು ಮತ್ತು ಬಹಳ ಮುಖ್ಯವಾಗಿ ಹೈನುಗಾರಿಕೆಯ ರೈತರು ಸಂಕಷ್ಟವನ್ನು ಎದುರಿಸಬೇಕಾಗಿ ಬರುತ್ತದೆ. ದೇಶದಲ್ಲಿ ಸುಮಾರು 8 ಕೋಟಿ ಹೈನುಗಾರಿಕಾ ರೈತರಿದ್ದಾರೆ. ಅಮೆರಿಕಾ ನಮ್ಮ ಕೃಷಿ ಉತ್ಪನ್ನಗಳ ಮೇಲೆ ದೊಡ್ಡ ಪ್ರಮಾಣದಲ್ಲಿ ಸುಂಕ ವಿಧಿಸುತ್ತಿರುವಾಗಲೇ, ವಿದೇಶಗಳಿಂದ ನಮ್ಮ ದೇಶಕ್ಕೆ ಅತ್ಯಂತ ಕಡಿಮೆ ದರದಲ್ಲಿ ಕೃಷಿ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಇತ್ತೀಚೆಗೆ ಮಾನ್ಯ ಪ್ರಧಾನಿ ಮೋದಿಯವರು ಸುಂಕದ ವಿಷಯದ ಕುರಿತು ಮಾತನಾಡಲು ಸ್ವಲ್ಪ ಬಾಯಿ ತೆರೆದಿದ್ದಾರೆ. ಆದರೆ ಅವರು ಇದಕ್ಕೆ ಕಾರಣವಾಗಿರುವ ಟ್ರಂಪ್ ಬಗ್ಗೆ ಮಾತನಾಡುತ್ತಿಲ್ಲ ಮತ್ತು ಈ ನೀತಿಗಳನ್ನು ಖಂಡಿಸುತ್ತಿಲ್ಲ. ಇದರಿಂದ ದೇಶದ ರೈತರ ಹಿತವನ್ನು ಕಾಪಾಡಲು ಸಾಧ್ಯವಾಗುವುದಿಲ್ಲ. ಹಿಂದೆ ಅಮೆರಿಕಾದ ಅಧ್ಯಕ್ಷೀಯ ಚುನಾವಣೆ ನಡೆದ ಸಂದರ್ಭದಲ್ಲಿ ಭಾರತದಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ನವರು ಟ್ರಂಪ್ ಗೆಲ್ಲಬೇಕೆಂದು ಯಾಗ ಯಜ್ಞಗಳನ್ನು ನಡೆಸಿದ್ದನ್ನು ನಾವು ಮರೆಯಲು ಸಾಧ್ಯವಿಲ್ಲ. ಸ್ವತಃ ಮೋದಿಯವರೇ ಅಮೆರಿಕಾಕ್ಕೆ ಹೋಗಿ "ಅಬ್ ಕಿ ಬಾರ್, ಟ್ರಂಪ್ ಸರ್ಕಾರ್" ಎಂದು ಚುನಾವಣಾ ಪ್ರಚಾರ ಮಾಡಿ ಬಂದಿದ್ದರು.

ಪ್ರಜಾಪ್ರಭುತ್ವ ಅತ್ಯಂತ ಅಪಾಯದಲ್ಲಿದೆ

ಈಗ ದೇಶದ ಪ್ರಜಾಪ್ರಭುತ್ವ ಅತ್ಯಂತ ಅಪಾಯದಲ್ಲಿದೆ. ಚುನಾವಣಾ ಆಯೋಗದ ಕೆಲಸದಿಂದಾಗಿ ಬೆಂಗಳೂರಿನ ಮಹದೇವಪುರ ಲೋಕಸಭಾ ಕ್ಷೇತ್ರದಲ್ಲಿ ಸುಮಾರು ಒಂದು ಲಕ್ಷದಷ್ಟು ಮತಗಳು ನಕಲಿಯಾಗಿವೆ. ಚುನಾವಣಾ ಆಯೋಗವು ಬಿಜೆಪಿಯ ಬಿ ಟೀಮ್ ಆಗಿ ಕೆಲಸ ನಿರ್ವಹಿಸುತ್ತಿದೆ. ಧರ್ಮದ ಹೆಸರಿನಲ್ಲಿ ಹಿಂದೂ, ಮುಸ್ಲಿಂ ಎಂದು, ಜಾತಿಯ ಹೆಸರಿನಲ್ಲಿ ಜನಸಾಮಾನ್ಯರ, ರೈತರ ಐಕ್ಯತೆಯನ್ನು ಬಿಜೆಪಿ ಒಡೆಯುತ್ತಿದೆ.

ಇಂತಹ ಎಲ್ಲಾ ಜನವಿರೋಧಿ ನೀತಿಗಳ ವಿರುದ್ಧ ರೈತ ಸಮುದಾಯ ಒಗ್ಗಟ್ಟಿನಿಂದ ಹೊಸ ದಾರಿ ಹುಡುಕಬೇಕಿದೆ. ಈ ದೇಶದ ಸ್ವಾತಂತ್ರ್ಯಕ್ಕಾಗಿ ಹಲವರು ಹುತಾತ್ಮರಾಗಿದ್ದಾರೆ. ಅದರಲ್ಲಿ ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಹುತಾತ್ಮರಾದ ಭಗತ್ ಸಿಂಗ್ ಸ್ವಾತಂತ್ರ್ಯದ ಕುರಿತು ಹೀಗೆ ಹೇಳುತ್ತಾನೆ: "ಸ್ವಾತಂತ್ರ್ಯ ಎಂದರೆ ಕೇವಲ ಯಜಮಾನರ ಬದಲಾವಣೆ ಮಾತ್ರ ಎಂದಾದರೆ, ಪುರಾತನ ಶೋಷಣಾ ವ್ಯವಸ್ಥೆ ಹಾಗೆ ಉಳಿಯುತ್ತದೆ, ಈ ವ್ಯವಸ್ಥೆಯನ್ನು ನಾಶಮಾಡದೆ ಹೊಸ ವ್ಯವಸ್ಥೆಯನ್ನು ನಿರ್ಮಾಣ ಮಾಡಲು ಸಾಧ್ಯವಿಲ್ಲ." ಇಂದು ಎಲ್ಲರ ಸಮಸ್ಯೆಗಳಿಗೂ ಲಾಭಕೋರ, ಶೋಷಕ ಬಂಡವಾಳಶಾಹಿ ಮತ್ತು ಭೂಮಾಲಕ ವ್ಯವಸ್ಥೆಯೇ ನೇರ ಕಾರಣವಾಗಿದೆ. ಮುಂದುವರೆದು ಭಗತ್ ಸಿಂಗ್ 1931 ಫೆಬ್ರವರಿ 2ರಲ್ಲಿ 'ಯುವ ರಾಜಕೀಯ ಕಾರ್ಯಕರ್ತರಿಗಾಗಿ' ಎಂಬ ದೀರ್ಘ ಲೇಖನದಲ್ಲಿ ನಮ್ಮೆಲ್ಲಾ ಸಮಸ್ಯೆಗಳಿಗೆ 'ಸಮಾಜವಾದ'ವೇ ಪರಿಹಾರ ಎಂದಿದ್ದಾರೆ. ಅಂತಹ ಹೊಸ ದಾರಿಗಾಗಿ ನಾವೆಲ್ಲರೂ ಐಕ್ಯತೆಯಿಂದ ಚಳುವಳಿಯನ್ನು ಮುಂದುವರೆಸಬೇಕಾಗಿದೆ. ಇಂಕ್ವಿಲಾಬ್ ಜಿಂದಾಬಾದ್.

ಅಶೋಕ್ ದವಳೆಯವರ ಪ್ರವಾಸದ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಯಶವಂತ, ರಾಜ್ಯ ಹಣಕಾಸು ಕಾರ್ಯದರ್ಶಿ ಹೆಚ್.ಆರ್.ನವೀನ್‌ಕುಮಾರ್, ರಾಜ್ಯ ಜಂಟಿ ಕಾರ್ಯದರ್ಶಿ ಪ್ರಭಾ ಎನ್.ಬೆಳವಂಗಲ, ರಾಜ್ಯ ಸಮಿತಿ ಸದಸ್ಯರಾದ ಆರ್.ಚಂದ್ರತೇಜಸ್ವಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಿಪಿಐ(ಎಂ) ಕಾರ್ಯದರ್ಶಿ ನರಸಿಂಹ ಮೂರ್ತಿ, ನಂಜಪ್ಪ, ಕಾರಳ್ಳಿ ಶ್ರೀನಿವಾಸ್, ಪಿ.ಎ.ವೆಂಕಟೇಶ್, ರುದ್ರಾರಾಧ್ಯ, ನಟರಾಜ್ ವೆಂಕಟರಾಜ್, ಮೋಹನ್ ಬಾಬು, ಸಿ.ಎಚ್.ರಾಮಕೃಷ್ಣ, ರಾಜಮ್ಮ, ಮಾರೇಗೌಡ, ಅಶ್ವತ್ಥಪ್ಪ, ಮುಕುಂದ, ಮೋಹನ್, ವೆಂಕಟಮ್ಮ, ಮುನಿಯಮ್ಮ, ಪಿಳ್ಳಣ್ಣ, ನಂಜೇಗೌಡ, ಮಂಜುನಾಥ್, ಮುನಿಶಾಮಣ್ಣ, ಮಾರಣ್ಣಗೌಡ ಮತ್ತಿತರರು ಇದ್ದರು. ●

ಚುನಾವಣಾ ಆಯೋಗಕ್ಕೆ ಸಲಹೆ....

ಪುಟ 9 ರಿಂದ

6 ಲಕ್ಷದಷ್ಟು ಹೆಚ್ಚು ಮಹಿಳೆಯರ ಹೆಸರುಗಳನ್ನು ಕೈಬಿಟ್ಟಿದ್ದೇಕೆ? ಬಹುಶಃ ಅವರಲ್ಲಿ ಶಿಕ್ಷಣದ ಪ್ರಮಾಣ ಕಡಿಮೆ ಇರುವುದೇ ಕಾರಣವಿರಬಹುದು ಎಂದು ಊಹಿಸಲಾಗಿದೆ. ಅಂದರೆ ಚುನಾವಣಾ ಆಯೋಗದ ಮತದಾರ ಪಟ್ಟಿಗಳನ್ನು 'ಶುಚಿಗೊಳಿಸುವ' ನಿಬಂಧನೆಗಳು ಶಿಕ್ಷಣದಿಂದ ವಂಚಿತರಾದವರನ್ನು ಇತರರಿಗಿಂತ ಹೆಚ್ಚಾಗಿ ತಟ್ಟಿದೆಯೇ?

ಇವಲ್ಲದೆ, ಗಣತಿ ಪ್ರಪತ್ರಗಳನ್ನು ಸಲ್ಲಿಸುವ ವೇಳೆಯಲ್ಲೇ ಆಗಿರಬಹುದಾದ ಎಸ್‌ಐಆರ್ ಪ್ರಕ್ರಿಯೆಯ ಉಲ್ಲಂಘನೆಗಳತ್ತ ಸಾಕ್ಷಿ ಸಹಿತ ಗಮನ ಸೆಳೆದ, ಅದರಿಂದಾಗಿ ಎಫ್‌ಐಆರ್‌ಗೂ ಗುರಿಯಾದ ಬಿಹಾರದ ಪ್ರಖ್ಯಾತ ಪತ್ರಕರ್ತ ಅಜಿತ್ ಅಂಜುಮ್ ತನಗೆ ಬಂದ ಮಾಹಿತಿಗಳ ಆಧಾರದಲ್ಲಿ ಹಲವು ವಿಷಯಗಳನ್ನು ಆಯೋಗದ ಗಮನಕ್ಕೆ ತಂದಿದ್ದಾರೆ.

ಕರಡು ಪಟ್ಟಿಯಲ್ಲಿ ನಿಧನರಾದವರ ಹೆಸರುಗಳೂ ಗಮನಾರ್ಹ ಸಂಖ್ಯೆಯಲ್ಲಿ ಇರುವುದನ್ನು ಅವರು ತೋರಿಸಿ ಕೊಟ್ಟಿದ್ದಾರೆ. ಔರಾಯಿ ಎಂಬ ಊರಲ್ಲಿ ಒಂದು ಮನೆಯ ವಿಳಾಸದಲ್ಲಿ 65 ಹೆಸರುಗಳು ಇದ್ದರೆ, ಜಮುಇ ಎಂಬಲ್ಲಿ ಒಂದು ಮನೆಯ ವಿಳಾಸದಲ್ಲಿ 300 ಹೆಸರುಗಳು ಇರುವುದು ಕಂಡು ಬಂದಿದೆ ಎಂದು ಪ್ರತ್ಯಕ್ಷವಾಗಿ ತೋರಿಸಿದ್ದಾರೆ. ಇವೆಲ್ಲವೂ ಗಣತಿ ಪತ್ರಗಳನ್ನು ಬಿಎಲ್‌ಒ ಸಹಿ ಹಾಕಿ ಅಪ್‌ಲೋಡ್ ಮಾಡದೆ ಕರಡು ಪಟ್ಟಿಯಲ್ಲಿ ಬರಲು ಸಾಧ್ಯವಿಲ್ಲ. ಈ ಪ್ರಕ್ರಿಯೆಯಲ್ಲಿ ಹಲವೆಡೆಗಳಲ್ಲಿ ನಿಬಂಧನೆಗಳ ಪ್ರಕಾರ ಕನಿಷ್ಠ 3 ಬಾರಿ ಮತದಾರರನ್ನು ಭೇಟಿ ಮಾಡಬೇಕಾದ ಬಿಎಲ್‌ಒಗಳು ಒಂದು ಬಾರಿಯೂ ಭೇಟಿ ನೀಡಿರಲಿಲ್ಲ ಎಂಬುದೂ ಬೆಳಕಿಗೆ ಬಂದಿರುವುದನ್ನು ತೋರಿಸಿದ್ದಾರೆ. ಕೇವಲ 30 ದಿನಗಳೊಳಗೆ ಪ್ರತಿಮನೆಗೆ ಮೂರು ಬಾರಿ ಭೇಟಿ ಮಾಡಿ, ಗಣತಿ ಪತ್ರಗಳನ್ನು ಸಂಗ್ರಹಿಸಿ, ಅವನ್ನು ಪರಿಶೀಲಿಸಿ, ಸಹಿ ಮಾಡಿ, ಅಪ್‌ಲೋಡ್ ಮಾಡಬೇಕು ಎಂಬ ಒತ್ತಡದಲ್ಲಿ ಇಂತಹ ಪ್ರಮಾದಗಳು ಆಗಿವೆಯೇ ಎಂಬ ಪ್ರಶ್ನೆಯನ್ನೂ ಕೇಳಲಾಗುತ್ತಿದೆ

ಇದಲ್ಲದೆ, ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿಯವರು ವಿವರವಾಗಿ ಮಂಡಿಸಿದ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಒಂದು ವಿಧಾನಸಭಾ ಕ್ಷೇತ್ರವಾದ ಮಹದೇವಪುರದ ಮತದಾರ ಪಟ್ಟಿಗಳಲ್ಲಿ ಆಗಿದೆ ಎನ್ನಲಾದ 'ಅಕ್ರಮ'ಗಳು ಬಿಹಾರದ ಮತದಾರ ಪಟ್ಟಿಗಳು 'ಶುಚಿಗೊಳಿಸಲು' ನಡೆಸಿರುವ ಎಸ್‌ಐಆರ್‌ನಲ್ಲೂ ಕಾಣಬರುತ್ತಿರುವುದು ಪ್ರಜಾಪ್ರಭುತ್ವವಾದಿಗಳಲ್ಲಿ ಆತಂಕವನ್ನೂ ಮೂಡಿಸಲಾರಂಭಿಸಿತ್ತು.

ಆದರೆ ಇವೆಲ್ಲವೂ 'ಸಾಮೂಹಿಕ ಹೊರದಬ್ಬುವಿಕೆ' ಎಂದು ಪರಿಗಣಿಸಲ್ಪಡುವುದೇ, ಎಸ್‌ಐಆರ್ ಪ್ರಕ್ರಿಯೆ ಒಳಗೊಳ್ಳುವಂತದ್ದಾಗಬೇಕೇ ವಿನಃ ಹೊರದಬ್ಬುವಂತದ್ದಾಗಬಾರದು ಎಂದಿರುವ ಸುಪ್ರಿಂ ಕೋರ್ಟ್, ನ್ಯಾಯಪೀಠ ಮಧ್ಯಪ್ರವೇಶಿಸುವಂತಾಗ ಬಹುದೇ? ಎಂಬ ಪ್ರಶ್ನೆಗೆ ಆಗಸ್ಟ್ 12-13ರಂದು ನಡೆಯಲಿದ್ದ ನ್ಯಾಯ ವಿಚಾರಣೆಯಲ್ಲಿ ಉತ್ತರ ಸಿಗಬಹುದೇ ಎಂದು ಎಲ್ಲರೂ ಕಾದಿದ್ದ ಸಮಯದಲ್ಲಿ ಸುಪ್ರಿಂ ಕೋರ್ಟಿನ ಆಗಸ್ಟ್ 14ರ ಆದೇಶ ಬಂದಿದೆ.

ಆಗಸ್ಟ್ 12 ಮತ್ತು 13ರಂದು ಅರ್ಜಿದಾರರ ವಾದಗಳನ್ನು ಆಲಿಸಿದ ನ್ಯಾಯಪೀಠ ಈ ಎಸ್‌ಐಆರ್ ಚುನಾವಣಾ ಆಯೋಗದ "ಅಧಿಕಾರ" ಮತ್ತು ಸಾಮಾನ್ಯ ನಾಗರಿಕರ ಮತ ಚಲಾಯಿಸಲು ಅವಕಾಶ ಪಡೆಯುವ ಹಕ್ಕಿನ ನಡುವಿನ ಒಂದು ಸಮರವಾಗಿದೆ, ಮತದಾರರಿಗೆ ತಿಳಿಯುವ ಹಕ್ಕಿದೆ ಎಂದು ಟಿಪ್ಪಣಿ ಮಾಡಿತು.

ಆದರೂ ಆಗಸ್ಟ್ 13ರ ಸಂಜೆ ಚುನಾವಣಾ ಆಯೋಗದ ಪತ್ರಿಕಾ ಹೇಳಿಕೆಯು, ಮತ್ತೆ 65 ಲಕ್ಷ ಹೆಸರುಗಳನ್ನು ಕೈಬಿಟ್ಟಿರುವುದರ ಬಗ್ಗೆ ಕೇವಲ 0.2% ಆಕ್ಷೇಪಗಳು ಬಂದಿವೆ, 99.8% ಹೆಸರುಗಳಿಗೆ ಯಾವುದೇ ಸವಾಲು ಬಂದಿಲ್ಲ ಎಂದಿತ್ತು. ರಾಜಕೀಯ ಪಕ್ಷಗಳಿಂದಂತೂ ಯಾವುದೇ ಆಕ್ಷೇಪಗಳು, ದಾವೆಗಳು ಬಂದಿಲ್ಲ ಎಂದೂ ಹೇಳಿತು. ಅಂದರೆ, ತಾವು ಆಕ್ಷೇಪಗಳನ್ನು ಸಲ್ಲಿಸಲು ಹೋದಾಗ, ಅವನ್ನು ಫಾರ್ಮ್ 6 ರಲ್ಲಿಯೇ (ಅಂದರೆ ಹೊಸ ಮತದಾರರನ್ನು ಸೇರಿಸುವ ಅರ್ಜಿ) ಸಲ್ಲಿಸಬೇಕು ಎಂದು ಹೇಳುವ ಚುನಾವಣಾ ಅಧಿಕಾರಿಗಳು ಅವನ್ನು 'ಆಕ್ಷೇಪ'ಗಳೆಂದು ಪರಿಗಣಿಸುತ್ತಿಲ್ಲ ಎಂದು ಹಲವು ರಾಜಕೀಯ ಪಕ್ಷಗಳು ಈಗಾಗಲೇ ದೂರಿರುವುದನ್ನು ಆಯೋಗ ಈಗಲೂ ನಿರ್ಲಕ್ಷಿಸಿರುವುದು ಕಂಡುಬರುತ್ತಿದೆ.

ಹೀಗಿರುವಾಗ, ಇದುವರೆಗೆ ಸದಾಶಯಗಳನ್ನು ವ್ಯಕ್ತಪಡಿಸುತ್ತ ಬಂದರೂ, ಅವುಗಳ ಉಲ್ಲಂಘನೆಯಾಗದಂತೆ ಆದೇಶಗಳನ್ನು ನೀಡಿರದಿದ್ದ ನ್ಯಾಯಪೀಠ ಈಗ ಕಾರಣಗಳ ಸಹಿತ ಕೈಬಿಟ್ಟವರ ವಿವರಗಳನ್ನು ಸಲ್ಲಿಸಬೇಕು ಎಂದು ಮಧ್ಯಂತರ ಆದೇಶ ನೀಡಿರುವುದು ಗಮನಾರ್ಹ ಸಂಗತಿ ಎಂದು ವಿಶ್ಲೇಷಕರು ಹೇಳುತ್ತಾರೆ.

ಆದರೂ, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಎಂ.ಎ.ಬೇಬಿಯವರು ಹೇಳಿರುವಂತೆ, ಎಸ್‌ಐಆರ್ ಎಬ್ಬಿಸಿರುವ ಚರ್ಚೆ ಮತದಾರ ಪಟ್ಟಿಯ ಆಚೆಗೂ ವ್ಯಾಪಿಸಿದ್ದು, ಮತದಾರ ಪಟ್ಟಿಯನ್ನು ವ್ಯವಸ್ಥಿತವಾಗಿ ಬುಡಮೇಲು ಮಾಡುವ, ಆ ಮೂಲಕ ಪ್ರಜಾಪ್ರಭುತ್ವವನ್ನೇ ದುರ್ಬಲಗೊಳಿಸುವ ಆತಂಕವನ್ನು ಎಬ್ಬಿಸಿರುವುದರಿಂದ, ಸರ್ವೋಚ್ಚ ನ್ಯಾಯಾಲಯ ಈ ಬಗ್ಗೆ ಏನು ತೀರ್ಮಾ ಕೊಡುತ್ತದೆ ಎಂಬ ಕಾತುರ ಮುಂದುವರೆಯುತ್ತಿದೆ.

ಟಿಸಿಎಸ್ ಸಾಮೂಹಿಕ ರಿಟ್ರೆಂಚ್‌ಮೆಂಟ್ ದಾರಿ ಆಯ್ದುಕೊಂಡಿರುವುದೇಕೆ?

ಬಂಡವಾಳಶಾಹಿ ವ್ಯವಸ್ಥೆಯ ಹುಚ್ಚು ದುರಾಸೆಗೆ ಐಟಿ ವಲಯವು ಒಂದು ಜ್ವಲಂತ ಉದಾಹರಣೆ. ಬಂಡವಾಳ ಮತ್ತು ಸೇವಾ ಹರಿವಿನ ವಿಷಯದಲ್ಲಿ ಬಹುಮಟ್ಟಿಗೆ ಜಾಗತಿಕ ಸ್ವರೂಪದಲ್ಲಿರುವ ಈ ವಲಯದ ಉದ್ಯೋಗಿಗಳು ಪ್ರತಿಕೂಲ ಭೌಗೋಳಿಕ ರಾಜಕೀಯ ಬೆಳವಣಿಗೆಗಳಿಗೆ ಹೆಚ್ಚು ಗುರಿಯಾಗುತ್ತಾರೆ. ಇದು ಕೆಲವು ಅತ್ಯಂತ ಆಧುನಿಕ ಮತ್ತು ವೇಗವಾಗಿ ವಿಕಸನಗೊಳ್ಳುತ್ತಿರುವ ತಂತ್ರಜ್ಞಾನಗಳನ್ನು ಒಳಗೊಳ್ಳುವ ವಲಯವೂ ಆಗಿರುವುದರಿಂದ, ಒಟ್ಟಾರೆ ತಾಂತ್ರಿಕ ಬದಲಾವಣೆಗಳ ಹೊಡೆತಗಳಿಗೆ ಮೊದಲ ಗುರಿಯೂ ಆಗುತ್ತಾರೆ. ಇಂತಹ ಬದಲಾವಣೆಗಳ ಪರಿಣಾಮಗಳನ್ನು ಜವಾಬ್ದಾರಿಯುತ ಕ್ರಮಗಳ ಮೂಲಕ ನಿಭಾಯಿಸುವ ಬದಲು, ಐಟಿ ಉದ್ಯಮದಲ್ಲೇ ಅತಿ ಹೆಚ್ಚು ಲಾಭ ದಾಖಲಿಸಿರುವ ಟಿಸಿಎಸ್ ಅದರ ಹೊರೆಯನ್ನು ಉದ್ಯೋಗಿಗಳ ಮೇಲೆ ದಾಟಿಸುವ ಸುಲಭ ದಾರಿಯನ್ನು ಆಯ್ಕೆ ಮಾಡಿಕೊಳ್ಳುತ್ತಿದೆ. ಇದು ಟಿಸಿಎಸ್‌ಗೆ ಮಾತ್ರ ಸೀಮಿತವಾಗಿಲ್ಲ. ಏಕೆಂದರೆ ಈ ಕಂಪನಿಗಳ ನಿಜವಾದ ಕಾರ್ಯಸೂಚಿ ಲಾಭಗಳನ್ನು ಗರಿಷ್ಟ ಪ್ರಮಾಣಕ್ಕೇರಿಸುವುದೇ ಹೊರತು, ಉದ್ಯಮದ ಸುಸ್ಥಿರತೆ ಮತ್ತು ತಮ್ಮ ಉದ್ಯೋಗಿಗಳ ಭದ್ರತೆ ಅಲ್ಲ. ಆದರೆ ಸರಕಾರ ಮಧ್ಯಪ್ರವೇಶಿಸಬೇಕು–ನಿರ್ಣಾಯಕ ಸೇವೆಗಳನ್ನು ಒದಗಿಸುವ ಮತ್ತು ಭಾರತದ ವಿದೇಶಿ ವಿನಿಮಯ ಗಳಿಕೆಗೆ ಗಮನಾರ್ಹವಾಗಿ ಕೊಡುಗೆ ನೀಡುವ ಲಕ್ಷಾಂತರ ಐಟಿ ಉದ್ಯೋಗಿಗಳ ಜೀವನೋಪಾಯವನ್ನು ರಕ್ಷಿಸಬೇಕು.

ತಪನ್ ಸೇನ್
ಪ್ರಧಾನ ಕಾರ್ಯದರ್ಶಿಗಳು, ಸಿಐಟಿಯು



ಭಾರತದ ಅತಿದೊಡ್ಡ ಐಟಿ ಕಂಪನಿಯಾದ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್)ನ ಸಾಮೂಹಿಕ ರಿಟ್ರೆಂಚ್‌ಮೆಂಟ್ ಯೋಜನೆಯು ಲಜ್ಜೆಗೆಟ್ಟ ಮತ್ತು ವಿನಾಶಕಾರಿ ನಡೆ. ಇದು ಜಾಗತಿಕವಾಗಿ ಅದರ ಉದ್ಯೋಗಿಗಳ ಶೇ. 2ರಷ್ಟು, ಭಾರತದಾದ್ಯಂತ 12,000ಕ್ಕೂ ಹೆಚ್ಚು ಉದ್ಯೋಗಿಗಳನ್ನು ಬಾಧಿಸಲಿದೆ.

ಟಿಸಿಎಸ್ 2024–25ರ ಹಣಕಾಸು ವರ್ಷದಲ್ಲಿ ರೂ. 2,55,324 ಕೋಟಿಗಳ ಆದಾಯವನ್ನು ಗಳಿಸಿ, ಶೇ. 6ರಷ್ಟು ವಾರ್ಷಿಕ ಬೆಳವಣಿಗೆಯನ್ನು ದಾಖಲಿಸಿದೆ. ಶೇ. 24.3ರಷ್ಟು ಲಾಭಾಂಶ ಗಳಿಸಿದೆ. ಇದು ಐಟಿ ಉದ್ಯಮದಲ್ಲೇ ಅತಿ ಹೆಚ್ಚು. ಕಂಪನಿಯ ಆಡಳಿತ ಮಂಡಳಿ ಅನುಮೋದಿಸಿದ ಡಿವಿಡೆಂಡ್ ಮೊತ್ತ ರೂ. 45,588 ಕೋಟಿ – ಹಿಂದಿನ ವರ್ಷಕ್ಕಿಂತ ಶೇ. 20 ಹೆಚ್ಚಳ. ಹಣಕಾಸು ವರ್ಷ 2025ರಲ್ಲಿ ಪ್ರತಿ ಉದ್ಯೋಗಿಯು ಕಂಪನಿಗೆ ತಂದು ಕೊಟ್ಟ ಆದಾಯ ರೂ.42.45 ಲಕ್ಷವಾಗಿದ್ದು, ಇದರಲ್ಲೂ ಹಿಂದಿನ ವರ್ಷಕ್ಕಿಂತ ಶೇ. 15.8ರಷ್ಟು ಹೆಚ್ಚಳವಾಗಿದೆ. ಈ ನಡುವೆ ಟಿಸಿಎಸ್‌ನ ಸಿಇಒ ಎರಡಂಕಿಯ ವೇತನ ಹೆಚ್ಚಳದ ಮೂಲಕ, ರೂ.28 ಕೋಟಿಗೂ ಹೆಚ್ಚು ಸಂಭಾವನೆ ಪಡೆದರು.

ಆದರೂ ಅದೇ ವೇಳೆಗೆ ಉದ್ಯೋಗಿಗೆ ಸರಾಸರಿ ವೇತನ ಹೆಚ್ಚಳವನ್ನು ನಿರಾಕರಿಸಲಾಯಿತು. ಮತ್ತು ಜತೆಗೆ ದೊಡ್ಡ ಪ್ರಮಾಣದ ರಿಟ್ರೆಂಚ್‌ಮೆಂಟ್ ಬೆದರಿಕೆ! (ದೇಶಾದ್ಯಂತ ಆಕ್ರೋಶ ವ್ಯಕ್ತವಾದ ಮೇಲೆ ಈಗ ಸೆಪ್ಟೆಂಬರ್‌ನಿಂದ ಶೇ.80 ಉದ್ಯೋಗಿಗಳಿಗೆ ವೇತನ ಹೆಚ್ಚಳ ಮಾಡುವುದಾಗಿ ಕಂಪನಿ ವಕ್ತಾರರು ಈಗ ಪ್ರಕಟಿಸಿದ್ದಾರೆ).

ಏಕೆ ಇಂತಹ ಸ್ಥಿತಿ?

ನವ ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯ ಹುಚ್ಚು ದುರಾಸೆಗೆ ಐಟಿ ವಲಯವು ಒಂದು ಜ್ವಲಂತ ಉದಾಹರಣೆಯಾಗಿದೆ. ಭಾರತದಲ್ಲಿನ ಐಟಿ ಉದ್ಯೋಗಿಗಳು ತಮ್ಮ ದೇಶೀಯ ಮತ್ತು ಅಂತರರಾಷ್ಟ್ರೀಯ ಉದ್ಯೋಗದಾತರಿಗೆ ಭಾರಿ ಪ್ರಮಾಣದ ಮಿಗುತಾಯವನ್ನು ಉತ್ಪಾದಿಸುತ್ತಾರೆ ಮತ್ತು ಬಹುಪಾಲು ಯಾವುದೇ ಕಾರ್ಮಿಕ ಹಕ್ಕಿನಿಂದ ವಂಚಿತರಾಗಿರುತ್ತಾರೆ.

ಬಂಡವಾಳ ಮತ್ತು ಸೇವಾ ಹರಿವಿನ ವಿಷಯದಲ್ಲಿ ಬಹುಮಟ್ಟಿಗೆ ಜಾಗತಿಕ ಸ್ವರೂಪದಲ್ಲಿರುವ ಈ ವಲಯದ ಕಾರ್ಯಪಡೆಯು ಪ್ರತಿಕೂಲ ಭೌಗೋಳಿಕ ರಾಜಕೀಯ ಬೆಳವಣಿಗೆಗಳಿಗೆ ಹೆಚ್ಚು ಗುರಿಯಾಗುತ್ತದೆ. ಚೀನಾ ಮತ್ತು ಭಾರತೀಯ ತಂತ್ರಜ್ಞಾನ ಉಪಕರಣಗಳು ಮತ್ತು ಸೇವೆಗಳನ್ನು ಗುರಿಯಾಗಿಸಿಕೊಂಡು ಅಮೆರಿಕ ನೇತೃತ್ವದ ಸುಂಕ ಸಮರವು ಖಂಡಿತವಾಗಿಯೂ ಅಮೆರಿಕದ ಕಂಪನಿಗಳ ಲಾಗುವಾಡು ವೆಚ್ಚವನ್ನು ಹೆಚ್ಚಿಸುತ್ತದೆ ಮತ್ತು ಹೊರಗುತ್ತಿಗೆಯಿಂದ ಪಡೆಯುವ ಲಾಭಾಂಶಗಳನ್ನು ಕುಗ್ಗಿಸುತ್ತದೆ. ಇದರ ದುಷ್ಪರಿಣಾಮ ಭಾರತೀಯ ಐಟಿ ವಲಯದ ಮೇಲೆ ತೀವ್ರವಾಗಿರುತ್ತದೆ– ಏಕೆಂದರೆ ಇದು ಹೊರಗುತ್ತಿಗೆ ಆಧಾರಿತವಾಗಿದೆ.

ಈ ವಲಯವು ಕೆಲವು ಅತ್ಯಂತ ಆಧುನಿಕ ಮತ್ತು ವೇಗವಾಗಿ ವಿಕಸನಗೊಳ್ಳುತ್ತಿರುವ ತಂತ್ರಜ್ಞಾನಗಳನ್ನು ಒಳಗೊಳ್ಳುವ ವಲಯ. ಆದ್ದರಿಂದ, ಒಟ್ಟಾರೆ ತಾಂತ್ರಿಕ ಬದಲಾವಣೆಗಳ ಹೊಡೆತಗಳಿಗೆ ಮೊದಲ ಗುರಿಯೂ ಆಗುತ್ತದೆ. ಸ್ವಯಂಚಾಲಕತೆ (ಆಟೋಮೇಷನ್) ಹೆಚ್ಚುತ್ತಿರುವುದು (ವಿಶೇಷವಾಗಿ ಕೃತಕ ಬುದ್ಧಿಮತ್ತೆಯ ಆಗಮನ) ಕೋಡಿಂಗ್‌ನಂತಹ ಉದ್ಯೋಗಗಳನ್ನು ತೆಗೆದುಹಾಕುವ ಬೆದರಿಕೆ ಹಾಕುತ್ತಿದೆ. ಇಂತಹ ಬದಲಾವಣೆಗಳ ಪರಿಣಾಮಗಳನ್ನು ಜವಾಬ್ದಾರಿಯುತ ಕ್ರಮಗಳ ಮೂಲಕ ಹೀರಿಕೊಳ್ಳುವ ಬದಲು, ಟಿಸಿಎಸ್‌ನಂತಹ ಭಾರತೀಯ ಸಂಸ್ಥೆಗಳು ಅದರ ಹೊರೆಯನ್ನು ನೌಕರರ ಮೇಲೆ ದಾಟಿಸುವ ಸುಲಭ ದಾರಿಯನ್ನು ಆಯ್ಕೆ ಮಾಡಿಕೊಳ್ಳುತ್ತಿವೆ.

ಲಾಭದ ಪ್ರಮಾಣವನ್ನು ಉಳಿಸಿಕೊಳ್ಳಲಿಕ್ಕಾಗಿ

ಟಿಸಿಎಸ್ ರೂ.47,000 ಕೋಟಿಗೂ ಹೆಚ್ಚು ನಗದು ಮತ್ತು ನಗದು ಸಮಾನ ಸಂಪತ್ತನ್ನು ಹೊಂದಿದೆ, ಇದು ಭಾರತದ ಅತ್ಯಂತ ನಗದು–ಸಮೃದ್ಧ ಖಾಸಗಿ ಕಂಪನಿಗಳಲ್ಲಿ ಒಂದಾಗಿದೆ. ಈ ಬೃಹತ್ ಮೀಸಲು ಮತ್ತು ಹಲವು ವರ್ಷಗಳ ಪುಷ್ಕಳ ಬೆಳವಣಿಗೆಯ ಹೊರತಾಗಿಯೂ, ಕಂಪನಿಯು ಈ ಆರ್ಥಿಕ ಸಂಪನ್ಮೂಲಗಳನ್ನು ತನ್ನ ಉದ್ಯೋಗಿಗಳನ್ನು ರಕ್ಷಿಸಲು ಬಳಸುವ ಬದಲು, ತನ್ನ ಕಾರ್ಯಪಡೆಯನ್ನು ಕಡಿತಗೊಳಿಸುವ ದಾರಿಯನ್ನು ಆಯ್ದುಕೊಂಡಿದೆ. ಇದು ಟಿಸಿಎಸ್‌ನ ನಿಜವಾದ ಕಾರ್ಯಸೂಚಿ ಲಾಭಗಳನ್ನು ಗರಿಷ್ಟ ಪ್ರಮಾಣಕ್ಕೇರಿಸುವುದೇ ಹೊರತು, ಉದ್ಯಮದ ಸುಸ್ಥಿರತೆ ಮತ್ತು ಕಾರ್ಯಪಡೆಯ ರಕ್ಷಣೆ ಅಲ್ಲ ಎಂಬುದನ್ನು ಬಯಲಿಗೆಳೆಯುತ್ತದೆ.

ಜವಾಬ್ದಾರಿಯುತ ನಿಲುವನ್ನು ತಳೆಯುವ ಬದಲು, ಟಿಸಿಎಸ್ ಆಡಳಿತವು "ಸ್ಕಿಲ್ ಫಿಟ್‌ಮೆಂಟ್" (ಕೌಶಲವನ್ನು ಹೊಂದಿಸಿಕೊಳ್ಳುವುದು) ಎಂಬ ಸೋಗಿನಲ್ಲಿ ಮಧ್ಯಮಮಟ್ಟದ ಮತ್ತು ಹಿರಿಯ ಉದ್ಯೋಗಿಗಳ ಮೇಲೆ ವ್ಯವಸ್ಥಿತವಾಗಿ ಗುರಿಯಾಗಿಸಲು ಪ್ರಾರಂಭಿಸಿದೆ. ಈ ಅನುಭವಿ ವೃತ್ತಿಪರರಲ್ಲಿ ಅನೇಕರು ಟಿಸಿಎಸ್‌ನಲ್ಲಿ 20 ರಿಂದ 25 ವರ್ಷಗಳಿಗಿಂತ ಹೆಚ್ಚು ಕಾಲ ಕಳೆದಿದ್ದಾರೆ, ಈಗ ಅವರನ್ನು ಬಲವಂತವಾಗಿ ಹೊರಹಾಕಲಾಗುತ್ತಿದೆ ಮತ್ತು ಅವರ ಜಾಗದಲ್ಲಿ ಶೇ. 80–85ರಷ್ಟು ಕಡಿಮೆ ಸಂಬಳಕ್ಕೆ ಹೊಸಬರನ್ನು ನೇಮಿಸಿಕೊಳ್ಳಲಾಗುತ್ತಿದೆ.

ಅಸ್ತಿತ್ವದಲ್ಲಿರುವ ಉದ್ಯೋಗಿಗಳ ಮರು ಕೌಶಲ್ಯ ಅಥವಾ ಅವರ ಕೌಶಲವನ್ನು ಉನ್ನತೀಕರಿಸುವುದು ವ್ಯವಸ್ಥಾಪನಾ ಜವಾಬ್ದಾರಿಯಾಗಿರಬೇಕು. ಈ ಜವಾಬ್ದಾರಿಯನ್ನು ನೌಕರರಿಗೆ ದಾಟಿಸುವುದು –ಅವರಿಗೆ ಮರು ಕೌಶಲ್ಯದ ಅವಕಾಶಗಳನ್ನು ನಿರಾಕರಿಸುವುದು ಮತ್ತು ಅವರನ್ನು ಬಲವಂತವಾಗಿ ಹೊರಹಾಕುವುದು– ನೈಸರ್ಗಿಕ ನ್ಯಾಯದ ಉಲ್ಲಂಘನೆಯಾಗಿದೆ.

ಸಾಮೂಹಿಕ ರಿಟ್ರೆಂಚ್‌ಮೆಂಟ್ ನಡೆಸುತ್ತಿರುವಾಗಲೇ, ಹೊಸ ಉದ್ಯೋಗಿಗಳ ನೇಮಕಾತಿಯು ಭರದಿಂದ ನಡೆಯುತ್ತಿರುವುದು ಕಂಪನಿಯ ಆಕ್ರಾಮಕ "ಜ್ಯೂನಿಯರ್ೈಸೇಷನ್ ತಂತ್ರ"ವನ್ನು, ಅಂದರೆ, ಹಿರಿಯ ಸಿಬ್ಬಂದಿಯ ವೆಚ್ಚವನ್ನು ಕಡಿಮೆಮಾಡಲು ಕಡಿಮೆ ಸಂಬಳದ ಹೊಸಬರ ಪ್ರಮಾಣವನ್ನು ಉದ್ದೇಶಪೂರ್ವಕವಾಗಿ ಹೆಚ್ಚಿಸುವ ತಂತ್ರ. ಇವೆಲ್ಲವೂ ಲಾಭಾಂಶವನ್ನು ಉಳಿಸಿಕೊಳ್ಳಲಿಕ್ಕಾಗಿ. ಆದರೆ ಅದೇ ವೇಳೆಯಲ್ಲಿ ಅತ್ಯಂತ ಮೇಲ್ಮಟ್ಟದಲ್ಲಿರುವ ನಿರ್ವಾಹಕರುಗಳ ಆದಾಯಗಳನ್ನು ಅಸಹ್ಯಕರ ಮಟ್ಟಗಳಿಗೆ ಏರಿಸಲಾಗುತ್ತಿದೆ.

ಕಾರ್ಪೊರೇಟ್–ಕೋಮುವಾದಿ ನಂಟಿನ ಸರಕಾರದ ಹಿಂಜರಿಕೆ

ಕೇಂದ್ರ ಸರ್ಕಾರವು ಈ ವಿಷಯದ ಬಗ್ಗೆ ಟಿಪ್ಪಣಿಮಾಡಲು ಕೂಡ ಹಿಂಜರಿಯುತ್ತಿದೆ ಎಂಬುದು ಗಂಭೀರ ಕಳವಳದ ಸಂಗತಿ ಕೇಂದ್ರದಲ್ಲಿನ ಕಾರ್ಪೊರೇಟ್–ಕೋಮುವಾದಿ ನಂಟು ಟಿಸಿಎಸ್‌ಗೆ ಒಲವು ತೋರುತ್ತಿದೆ, ಅದಕ್ಕೆ ಹಲವಾರು ಸಾರ್ವಜನಿಕ ವಲಯದ ಯೋಜನೆಗಳನ್ನು ವಹಿಸಿ ಕೊಡುತ್ತಿದೆ. ಟಿಸಿಎಸ್ ಬಿಎಸ್‌ಎನ್‌ಎಲ್ 4ಜಿ/5ಜಿ, ರಕ್ಷಣಾ ಪಿಂಚಣಿದಾರರಿಗೆ 'ಸ್ಪರ್ಶ್' ಪಿಂಚಣಿ ವ್ಯವಸ್ಥೆ, ಮುಂದಿನ ತಲೆಮಾರಿನ ಪಾಸ್‌ಪೋರ್ಟ್ ಯೋಜನೆ ಮತ್ತು ಡಿಜಿಟಲ್ ಚುನಾವಣಾ ಪಟ್ಟಿಗಳ ನಿರ್ವಹಣೆ ಸೇರಿದಂತೆ ಸಾವಿರಾರು ಕೋಟಿ ರೂ. ಮೌಲ್ಯದ ಸರ್ಕಾರಿ ಒಪ್ಪಂದಗಳನ್ನು ಪಡೆಯುತ್ತಲೇ ಇದೆ. ಈ ಯೋಜನೆಗಳಿಗೆ ತೆರಿಗೆದಾರರು ಹಣವನ್ನು ನೀಡುತ್ತಾರೆ, ಆದರೆ ಲಾಭವನ್ನು ಕಾರ್ಪೊರೇಟ್ ಗಣ್ಯರಿಗೆ ವರ್ಗಾಯಿಸಲಾಗುತ್ತದೆ ಮತ್ತು ಉದ್ಯೋಗಗಳನ್ನು ಕಡಿತಗೊಳಿಸಲಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ನಿರ್ಣಾಯಕ ಸೇವೆಗಳನ್ನು ಒದಗಿಸುವ ಮತ್ತು ಭಾರತದ ವಿದೇಶಿ ವಿನಿಮಯ ಗಳಿಕೆಗೆ ಗಮನಾರ್ಹವಾಗಿ ಕೊಡುಗೆ ನೀಡುವ ಲಕ್ಷಾಂತರ ಐಟಿ ಉದ್ಯೋಗಿಗಳ ಜೀವನೋಪಾಯವನ್ನು ರಕ್ಷಿಸಲು ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ಟಿಸಿಎಸ್ ಆಡಳಿತದೊಂದಿಗೆ ಸಂವಾದವನ್ನು ಪ್ರಾರಂಭಿಸಬೇಕು ಎಂದು ಸಿಐಟಿಯು ಸಲಹೆ ನೀಡುತ್ತದೆ.

ಬಲವಂತದ ರಾಜೀನಾಮೆಗಳು, ವಜಾಗೊಳಿಸುವ ಬೆದರಿಕೆಗಳು, ಹೆಚ್ಚಿದ ಕೆಲಸದ ಒತ್ತಡ ಮತ್ತು ವಜಾಗೊಳಿಸುವ ಅನೌಪಚಾರಿಕ ಸಾಧನಗಳಾಗಿ ಬಳಸುವ 'ಕಾರ್ಯಕ್ಷಮತೆ'ಯ ಹುಸಿಮಾಪನಗಳು 1947ರ ಕೈಗಾರಿಕಾ ವಿವಾದ ಕಾಯ್ದೆಯ ಉಲ್ಲಂಘನೆಯಾಗಿದೆ ಎಂಬ ಸಂಗತಿಯತ್ತ ಸಿಐಟಿಯು ಗಮನ ಸೆಳೆಯುತ್ತದೆ. ಯಾವುದೇ ಸಂಸ್ಥೆಯಲ್ಲಿ 100ಕ್ಕೂ ಹೆಚ್ಚು ಕಾರ್ಮಿಕರನ್ನು ವಜಾಗೊಳಿಸುವುದಾದರೆ, ಅದಕ್ಕೆ ಸರ್ಕಾರದ ಪೂರ್ವಾನುಮೋದನೆ ಕಡ್ಡಾಯವಾಗಿರುತ್ತದೆ ಎಂದು ಈ ಕಾಯಿದೆಯ ಸೆಕ್ಷನ್ 25ಎನ್ ಹೇಳುತ್ತದೆ. ಟಿಸಿಎಸ್ "ಸ್ವಯಂಪ್ರೇರಿತ ನಿರ್ಗಮನ"ಕ್ಕೆ ನೌಕರರ ಮೇಲೆ ಒತ್ತಡ ಹೇರುವ ಮೂಲಕ ಇದರಿಂದ ತಪ್ಪಿಸಿಕೊಳ್ಳುತ್ತಿದೆ. ಈ ಮೂಲಕ ಉದ್ಯೋಗಿಗಳಿಗೆ ಕಾನೂನು ರಕ್ಷಣೆ, ಪರಿಹಾರ ಮತ್ತು ಉದ್ಯೋಗ ಭದ್ರತೆಯನ್ನು ವಂಚಿಸಲಾಗುತ್ತಿದೆ.

1947ರ ಕೈಗಾರಿಕಾ ವಿವಾದ ಕಾಯ್ದೆಯ ಸೆಕ್ಷನ್ 25ಕ್ಯು ಅಡಿಯಲ್ಲಿ, ಉದ್ಯೋಗಿಗಳನ್ನು ವಜಾಗೊಳಿಸುವ ಕಾರ್ಯವಿಧಾನಗಳನ್ನು ಉಲ್ಲಂಘಿಸಿದ್ದಕ್ಕಾಗಿ ಮತ್ತು ಅನ್ಯಾಯದ ಶ್ರಮ ಆಚರಣೆಗಳಲ್ಲಿ ತೊಡಗಿದ್ದಕ್ಕಾಗಿ ಸೆಕ್ಷನ್ 25ಟಿ ಮತ್ತು 25ಯು ಅಡಿಯಲ್ಲಿ ಟಿಸಿಎಸ್ ಆಡಳಿತದ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸಿಐಟಿಯು ಒತ್ತಾಯಿಸುತ್ತಿದೆ. ಇದು ಟಿಸಿಎಸ್‌ಗೆ ಮಾತ್ರ ಸೀಮಿತವಾಗಿಲ್ಲ, ಹಲವಾರು ಇತರ ಕಂಪನಿಗಳು ಸಹ ಉದ್ಯೋಗಿಗಳ ರಿಟ್ರೆಂಚ್‌ಮೆಂಟ್ ಮತ್ತು ಲೇ–ಆಫ್‌ಗಳನ್ನು ಪ್ರಾರಂಭಿಸುತ್ತಿವೆ.

ಸುಂಕ ಸಮರ ಮತ್ತು ಇತರ ಬಾಹ್ಯ ಅಂಶಗಳಿಂದಾಗಿ ಹೊರಗುತ್ತಿಗೆ–ಅವಲಂಬಿತ ಐಟಿ ವಲಯ ಎದುರಿಸುತ್ತಿರುವ ಸವಾಲುಗಳನ್ನು ಪರಿಹರಿಸಲು ಐಟಿ ಕಂಪನಿಗಳು, ಕಾರ್ಮಿಕ ಸಂಘಗಳು ಮತ್ತು ಸೂಕ್ತ ಸರ್ಕಾರಿ ಅಧಿಕಾರಿಗಳ ನಡುವೆ ತ್ರಿಪಕ್ಷೀಯ ಸಭೆಗಳನ್ನು ಕರೆಯಬೇಕೆಂದು ಸಿಐಟಿಯು ಒತ್ತಾಯಿಸುತ್ತಿದೆ.

ಆಗಸ್ಟ್ 19, 2025ರಂದು ದೇಶಾದ್ಯಂತ ಟಿಸಿಎಸ್ ಕಚೇರಿಗಳ ಎದುರು ಪ್ರತಿಭಟನೆ

ಭಾರತದ ಅತಿದೊಡ್ಡ ಐಟಿ ಕಂಪನಿಯಾದ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್)ನ ಸಾಮೂಹಿಕ ರಿಟ್ರೆಂಚ್‌ಮೆಂಟ್ ಯೋಜನೆ ಲಜ್ಜೆಗೆಟ್ಟ ಮತ್ತು ವಿನಾಶಕಾರಿ ನಡೆ ಎಂದು ಸಿಐಟಿಯು ಬಲವಾಗಿ ಖಂಡಿಸಿದೆ, ಇದು ಜಾಗತಿಕವಾಗಿ ಅದರ ಉದ್ಯೋಗಿಗಳ ಶೇ. 2ರಷ್ಟು ಅಂದರೆ, ಭಾರತದಾದ್ಯಂತ 12,000ಕ್ಕೂ ಹೆಚ್ಚು ಉದ್ಯೋಗಿಗಳನ್ನು ಬಾಧಿಸಲಿದೆ.

ಆದರೆ ಇದು ಟಿಸಿಎಸ್‌ಗೆ ಮಾತ್ರ ಸೀಮಿತವಾಗಿಲ್ಲ, ಹಲವಾರು ಇತರ ಕಂಪನಿಗಳು ಸಹ ಉದ್ಯೋಗಿಗಳ ರಿಟ್ರೆಂಚ್‌ಮೆಂಟ್ ಮತ್ತು ಲೇ–ಆಫ್‌ಗಳನ್ನು ಪ್ರಾರಂಭಿಸುತ್ತಿವೆ. ಸುಂಕ ಸಮರ ಮತ್ತು ಇತರ ಬಾಹ್ಯ ಅಂಶಗಳಿಂದಾಗಿ ಹೊರಗುತ್ತಿಗೆ–ಅವಲಂಬಿತ ಐಟಿ ವಲಯ ಎದುರಿಸುತ್ತಿರುವ ಸವಾಲುಗಳನ್ನು ಪರಿಹರಿಸಲು ಐಟಿ ಕಂಪನಿಗಳು, ಕಾರ್ಮಿಕ ಸಂಘಗಳು ಮತ್ತು ಸೂಕ್ತ ಸರ್ಕಾರಿ ಅಧಿಕಾರಿಗಳ ನಡುವೆ ತ್ರಿಪಕ್ಷೀಯ ಸಭೆಗಳನ್ನು ಕರೆಯಬೇಕೆಂದು ಸಿಐಟಿಯು ಒತ್ತಾಯಿಸುತ್ತಿದೆ.

ಈ ಹಿನ್ನೆಲೆಯಲ್ಲಿ, ಸಿಐಟಿಯು ತನ್ನ ಸಂಯೋಜಿತ ಸಂಘಟನೆಗಳು ಮತ್ತು ಎಲ್ಲಾ ಐಟಿ ನೌಕರರು ಆಗಸ್ಟ್ 19, 2025ರಂದು ದೇಶಾದ್ಯಂತ ಟಿಸಿಎಸ್ ಕಚೇರಿಗಳ ಮುಂದೆ ಪ್ರತಿಭಟನಾ ಕ್ರಮಗಳನ್ನು ಸಂಘಟಿಸಬೇಕು ಎಂದು ಕರೆ ನೀಡಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE August 18- 24, 2025 Price: Rs. 10/- Date of Publication: 15 August 2025 RNI No. KARKAN/2006/17926 Posted on 18-08-2025
Posted at BG PSO, BG - 560026 **Posted at Periodical Rate -** Rs. 2



ಪಶ್ಚಿಮ ಆಫ್ರಿಕಾದಲ್ಲಿರುವ ಸಹೇಲಿ ಪ್ರದೇಶದಲ್ಲಿರುವ ಮೂರು ದೇಶಗಳು (ಮಾಲಿ, ನೈಜರ್, ಬುರ್ಕಿನಾ ಫಾಸೋ) ಸೇರಿ ಸಾಹೇಲ್ ದೇಶಗಳ ಮೈತ್ರಿಕೂಟ (AES) ರಚಿಸಿದ್ದಾರೆ. ಸುಮಾರು 27.8 ಲಕ್ಷ ಚದರ ಕಿ.ಮೀ. ವ್ಯಾಪ್ತಿಯ 7.14 ಕೋಟಿ ಜನಸಂಖ್ಯೆ ಇರುವ ಈ ಸಾಹೇಲ್ ಪ್ರದೇಶದಲ್ಲಿ ನೆಲೆ ಹೊಂದಿದ್ದ ಫ್ರೆಂಚ್ ಮಿಲಿಟರಿ ತುಕಡಿಗಳನ್ನು ಹೊರ ಹಾಕಲಾಗಿದೆ. ವಿದೇಶೀ ನಿಯಂತ್ರಣದ (ಪ್ರಮುಖವಾಗಿ ಫ್ರೆಂಚ್) ಗಣಿ ಮುಂತಾದ ಸಂಪನ್ಮೂಲಗಳನ್ನು ರಾಷ್ಟ್ರೀಕರಣ ಮಾಡಲಾಗಿದೆ. ಸಾಹೇಲ್ ದೇಶಗಳ ಸಾಮಾನ್ಯ ಮಾರುಕಟ್ಟೆಯನ್ನು ಸ್ಥಾಪಿಸುವುದು, ಪಾಸ್ಪೋರ್ಟ್‌ಗಳನ್ನು ಏಕೀಕರಿಸುವುದು ಮತ್ತು ಮೈತ್ರಿ ಹೂಡಿಕೆ ಬ್ಯಾಂಕ್ ಅನ್ನು ನಿರ್ಮಿಸುವುದಕ್ಕೆ ಅವರು ಬದ್ಧರಾಗಿದ್ದಾರೆ. ಈ ದೇಶಗಳಿಗೆ ಮಾರಕವಾಗಿದ್ದ CFA ಫ್ರಾಂಕ್ ಹಣಕಾಸು ವ್ಯವಸ್ಥೆಯನ್ನು ಬದಲಿಸಲು ಪ್ರಾದೇಶಿಕ ಕರೆನ್ಸಿಯನ್ನು ಆರಂಭಿಸುವ ಪ್ರಯತ್ನವೂ ಸೇರಿದೆ.

ವಸಂತರಾಜ ಎನ್.ಕೆ.

ಪಶ್ಚಿಮ ಆಫ್ರಿಕಾದಲ್ಲೊಂದು ಮೌನ ಕ್ರಾಂತಿ

ಪಶ್ಚಿಮ ಆಫ್ರಿಕಾದಲ್ಲೊಂದು ಮೌನ ಕ್ರಾಂತಿ ನಡೆಯುತ್ತಿದೆ. ಪಶ್ಚಿಮ ಆಫ್ರಿಕಾದಲ್ಲಿರುವ ಸಹೇಲಿ ಪ್ರದೇಶದಲ್ಲಿರುವ ಮೂರು ದೇಶಗಳು (ಮಾಲಿ, ನೈಜರ್, ಬುರ್ಕಿನಾ ಫಾಸೋ) ಸೇರಿ ಸಾಹೇಲ್ ದೇಶಗಳ ಮೈತ್ರಿಕೂಟ (AES) ರಚಿಸಿದ್ದಾರೆ. ಸುಮಾರು 27.8 ಲಕ್ಷ ಚದರ ಕಿ.ಮೀ. ವ್ಯಾಪ್ತಿಯ 7.14 ಕೋಟಿ ಜನಸಂಖ್ಯೆ ಇರುವ ಈ ಸಾಹೇಲ್ ಪ್ರದೇಶದಲ್ಲಿ ನೆಲೆ ಹೊಂದಿದ್ದ ಫ್ರೆಂಚ್ ಮಿಲಿಟರಿ ತುಕಡಿಗಳನ್ನು ಹೊರಹಾಕಲಾಗಿದೆ. ವಿದೇಶೀ ನಿಯಂತ್ರಣದ (ಪ್ರಮುಖವಾಗಿ ಫ್ರೆಂಚ್) ಗಣಿ ಮುಂತಾದ ಸಂಪನ್ಮೂಲಗಳನ್ನು ರಾಷ್ಟ್ರೀಕರಣ ಮಾಡಲಾಗಿದೆ. ಉತ್ತರದಲ್ಲಿ ಸಹಾರ ಮರುಭೂಮಿ ಮತ್ತು ಪಶ್ಚಿಮದಲ್ಲಿ ಕರಾವಳಿ ನಡುವೆ ಇರುವ ಪ್ರದೇಶಕ್ಕೆ ಸಾಹೆಲ್ ಎನ್ನಲಾಗುತ್ತದೆ. ಈ ಇಡೀ ಪ್ರದೇಶ (ಮಾತ್ರವಲ್ಲ ಆಫ್ರಿಕಾದ ಹೆಚ್ಚಿನ ಪ್ರದೇಶಗಳು) ಫ್ರೆಂಚ್ ವಸಾಹತುವಾಗಿದ್ದು, 1960–70–80ರ ದಶಕಗಳಲ್ಲಿ ಮಾತ್ರವೇ ಸ್ವತಂತ್ರವಾಗಿದ್ದವು.

ಈ "ಮೌನಕ್ರಾಂತಿ"ಗೆ ಮುಂದೊಡಗು ಬಂದಿದ್ದು ಬರ್ಕಿನಾ ಫಾಸೊ ದ ಯುವ ನಾಯಕ ಕ್ಯಾಪ್ಟನ್ ಇಬ್ರಾಹಿಂ ಟ್ರಾವೊರೇ ಅವರಿಂದ. ಅವರ ಸರಕಾರ ಚಿನ್ನದ ಗಣಿಗಳನ್ನು ರಾಷ್ಟ್ರೀಕರಿಸಿದೆ. ಬುರ್ಕಿನಾ ಫಾಸೊ ಜನಸಂಖ್ಯೆಯ ಬಹುಪಾಲು ರೈತರ ಆಹಾರ ಭದ್ರತೆಯನ್ನು ಹೆಚ್ಚಿಸಲು, ಅವರ ಆಡಳಿತವು 400 ಟ್ರಾಕ್ಟರ್‌ಗಳು ಮತ್ತು ನೂರಾರು ಮೋಟಾರು ಪಂಪುಗಳನ್ನು ಒಳಗೊಂಡಂತೆ ಅಗತ್ಯ ಕೃಷಿ ಉಪಕರಣಗಳನ್ನು ಗ್ರಾಮೀಣ ಸಹಕಾರಿ ಸಂಘಗಳಿಗೆ ವಿತರಿಸಲು ಪ್ರಾರಂಭಿಸಿದೆ. ಇಂತಹುದೇ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವ ಮಾಲಿ, ನೈಜರ್ ಜತೆಗೆ ನಿಕಟ ಸಹಕಾರ ಸಹಯೋಗ ಸಾಧಿಸಲು ಸಾಹೇಲ್ ದೇಶಗಳ ಮೈತ್ರಿಕೂಟ (AES) ರಚಿಸಿದ್ದಾರೆ. ನವ–ವಸಾಹತುಶಾಹಿ ಲೂಟಿಯನ್ನು ಹಿಮ್ಮೆಟ್ಟಿಸಲು ಇದು ಅಗತ್ಯವೆಂದು ಅವರಿಗೆ ಮನವರಿಕೆಯಾಗಿದೆ.

AESಯ ಆರ್ಥಿಕ ಆಶಯಗಳು ಕೇವಲ ಸಂಕೇತಾತ್ಮಕವಾಗಿಲ್ಲ. ಅದರ ಸ್ಥಾಪಕ ನಾಯಕರು ಸಾಹೇಲ್ ದೇಶಗಳ ಸಾಮಾನ್ಯ ಮಾರುಕಟ್ಟೆಯನ್ನು ಸ್ಥಾಪಿಸುವುದು, ಪಾಸ್ಪೋರ್ಟ್ ಗಳನ್ನು ಏಕೀಕರಿಸುವುದು ಮತ್ತು ಸಾಹೇಲ್ ದೇಶಗಳ ಮೈತ್ರಿ ಹೂಡಿಕೆ ಬ್ಯಾಂಕ್ ಅನ್ನು ನಿರ್ಮಿಸುವುದಕ್ಕೆ ಬದ್ಧರಾಗಿದ್ದಾರೆ. ಈ ದೇಶಗಳಿಗೆ ಮಾರಕವಾಗಿದ್ದ CFA ಫ್ರಾಂಕ್ ಹಣಕಾಸು ವ್ಯವಸ್ಥೆಯನ್ನು ಬದಲಿಸಲು ಪ್ರಾದೇಶಿಕ ಕರೆನ್ಸಿಯನ್ನು ಆರಂಭಿಸುವ ಪ್ರಯತ್ನವೂ ಸೇರಿದೆ. ಇದು ಫ್ರೆಂಚ್ ನವ ವಸಾಹತುಶಾಹಿಗೆ ಮಹತ್ತರ ಸವಾಲಾಗಿದ್ದು, ಹಣಕಾಸು ನೀತಿಯನ್ನು ಮರುಸ್ವಾಧೀನಗೊಳಿಸುವ ಕ್ರಮವಾಗಿದೆ.

ಫ್ರಾಂಕ್ ಹಣಕಾಸು ವ್ಯವಸ್ಥೆ

CFA ಫ್ರಾಂಕ್ ಹಣಕಾಸು ವ್ಯವಸ್ಥೆ ಆಫ್ರಿಕಾದ ಫ್ರೆಂಚ್ ವಸಾಹತುಗಳ ಹಣಕಾಸು ಆಮದು–ರಫ್ತು ವ್ಯವಹಾರವನ್ನು ಈ ದೇಶಗಳು ಸ್ವತಂತ್ರವಾದ ಮೇಲೂ ನಿಯಂತ್ರಿಸಲು ಅನುವು ಮಾಡಿಕೊಡುವ ವ್ಯವಸ್ಥೆ. ಇದರ ಪ್ರಕಾರ ಮೊದಲು ಈ CFA ಫ್ರಾಂಕ್ ಫ್ರೆಂಚ್ ಫ್ರಾಂಕ್ ಗೆ ತಳುಕು ಹಾಕಿಕೊಂಡಿತ್ತು ಮತ್ತು ಅದಕ್ಕಿಂತ ಕಡಿಮೆ ಮೌಲ್ಯವನ್ನು ಹೊಂದಿರುತ್ತಿತ್ತು. ಅದರ ಮೌಲ್ಯವನ್ನು ಫ್ರೆಂಚ್ ಕೇಂದ್ರೀಯ ಬ್ಯಾಂಕ್ ನಿರ್ಧರಿಸುತ್ತಿತ್ತು. ಈ ಆಫ್ರಿಕನ್ ದೇಶಗಳ ರಫ್ತು ಅಗ್ಗವಿರುವ ಮತ್ತು ಫ್ರೆಂಚ್ ಅಥವಾ ಇತರ ಪಾಶ್ಚಿಮಾತ್ಯ ಆಮದುಗಳು ದುಬಾರಿಯಾಗುವ ಹಾಗೆ CFA ಫ್ರಾಂಕ್ ಮತ್ತು ಫ್ರೆಂಚ್ ಫ್ರಾಂಕ್ ವಿನಿಮಯ ದರವನ್ನು ನಿರ್ಧರಿಸುತ್ತಿತ್ತು. ಅಂದರೆ ಈ ದೇಶಗಳಿಗೆ ತಮ್ಮ ಕರೆನ್ಸಿಯ ಮೌಲ್ಯ ನಿರ್ಧರಿಸುವ ಮತ್ತು ಆ ಮೂಲಕ ಆರ್ಥಿಕ ಸಾರ್ವಭೌಮತ್ವವಿರಲಿಲ್ಲ. ಫ್ರಾನ್ಸ್ ಯುರೋ ಕೂಟಕ್ಕೆ ಸೇರಿದ ಮೇಲೆ CFA ಫ್ರಾಂಕ್ ಯುರೋಗೆ ತಳುಕು ಹಾಕಿಕೊಂಡಿತ್ತು.

ಈ ವ್ಯವಸ್ಥೆಯ ಮೂಲಕ ಈ ದೇಶಗಳು ಸ್ವತಂತ್ರವಾದ ಮೇಲೂ ಫ್ರಾನ್ಸ್ ಈ ದೇಶಗಳ ಹಣಕಾಸು ಲೂಟಿಯಲ್ಲಿ ತೊಡಗಿತ್ತು. ಆಫ್ರಿಕಾದ ಮಾಜಿ ವಸಾಹತುಗಳ ಮೇಲೆ ಈ ವ್ಯವಸ್ಥೆಯ ಮೂಲಕ ತನ್ನ ನಿಯಂತ್ರಣ ಹೊಂದಿತ್ತು ಮತ್ತು ಅವುಗಳ ಬೆಳವಣಿಗೆಗೆ ತೊಡಕಾಗಿತ್ತು. ಇದಕ್ಕೆ ಬದಲಿ ವ್ಯವಸ್ಥೆ ರೂಪಿಸಲು ಹಲವು ಆಫ್ರಿಕನ್ ದೇಶಗಳು ಮತ್ತು ದೇಶಗಳ ಕೂಟಗಳು ಹಿಂದೆ ಪ್ರಯತ್ನಿಸಿದ್ದವು. ಇಡೀ (ಅಥವಾ ಬಹುಪಾಲು) ಆಫ್ರಿಕಾದ ದೇಶಗಳ ಸಾಮಾನ್ಯ ಮಾರುಕಟ್ಟೆ, ಆರ್ಥಿಕ ಒಕ್ಕೂಟ ಮತ್ತು ಸಾಮಾನ್ಯ ಕರೆನ್ಸಿಯ ವ್ಯವಸ್ಥೆಗೆ ಇತ್ತೀಚೆಗೆ ಲಿಬ್ಯಾ ನಾಯಕ ಗದ್ದಾಫಿ ಪ್ರಯತ್ನಿಸದ್ದರಿಂದಲೇ, ಯುರೋ ಕೂಟ ಮತ್ತು ಯುಎಸ್ ಸೇರಿದ್ದ ನಾಟೋ ಕೂಟ ಅವರ ಬಲಿ ತೆಗೆದುಕೊಂಡಿತ್ತು. CFA ಫ್ರಾಂಕ್ ಹಣಕಾಸು ವ್ಯವಸ್ಥೆ ಕಿತ್ತು ಹಾಕಿ ಬದಲಿ ವ್ಯವಸ್ಥೆ ಮಾಡದೇ ಈ ದೇಶಗಳ ಆರ್ಥಿಕ ಪ್ರಗತಿ ಸಾಧ್ಯವಿಲ್ಲ. ಇಂತಹ ಪ್ರಯತ್ನವನ್ನು AES ತಮ್ಮ ದೇಶಗಳಿಂದ ಆರಂಭಿಸಲಿದೆ. ಫ್ರೆಂಚ್ ಮತ್ತು ಯುರೋಪಿನ ನವ–ವಸಾಹತುಶಾಹಿ ವ್ಯವಸ್ಥೆಗೆ ಸವಾಲು ಹಾಕುವ ಪ್ರಯತ್ನ ಮಹತ್ವದ ಬೆಳವಣಿಗೆ. ಈ ಮೌನಕ್ರಾಂತಿಯ ಪ್ರಮುಖ ಭಾಗ.

ಇವು 1983ರ ಆಗಸ್ಟ್ 4ರಂದು ಬುರ್ಕಿನಾ ಫಾಸೊದಲ್ಲಿ ಅಧಿಕಾರಕ್ಕೆ ಬಂದು, ಆಫ್ರಿಕಾದಾದ್ಯಂತ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಉತ್ಸಾಹ ತಂದ, ಥಾಮಸ್ ಶಂಕರ ಎಂಬ ಪ್ರಸಿದ್ಧ ನಾಯಕ ಕಂಡ ಕನಸು. ಅವರನ್ನು 1987ರಲ್ಲಿ ಹತ್ಯೆ ಮಾಡಿದರೂ ಅವರ ಆಶಯಗಳನ್ನು ಜೀವಂತವಿರಿಸಿ, ಈಗಿನ ನಾಯಕರು ನನಸು ಮಾಡಹೊರಟಿದ್ದಾರೆ..



AES ಕೂಟದ ಪ್ರಯತ್ನಗಳು, ಸ್ವಾತಂತ್ರ್ಯದ ನಂತರ ಹಳೆಯ ಫ್ರೆಂಚ್ ವಸಾಹತುಗಳಿಂದ ಹೊರಹೋಗಿದ್ದ ಬಿಲಿಯನ್ ಯೂರೊಗಳನ್ನು ಹಿಂತಿರುಗಿಸುವ ಗುರಿಯನ್ನು ಹೊಂದಿವೆ. ಇವು CFA ವಲಯ ಮತ್ತು ಇತರ ಆರ್ಥಿಕತೆಗಳ ನಡುವೆ ಇರುವ ವಾರ್ಷಿಕ ಬೆಳವಣಿಗೆಯ ಅಂತರವನ್ನು ಕಡಿಮೆ ಮಾಡುವತ್ತವೂ ದೃಷ್ಟಿ ಹರಿಸುತ್ತಿವೆ.

AES ಕೂಟದ ಭದ್ರತಾ ಸಹಕಾರವೂ ಈ ಆರ್ಥಿಕ ಕಾರ್ಯಕ್ರಮಗಳಿಗೆ ಬಲನೀಡಿದೆ. AES ಕೂಟದ ಸಂಯುಕ್ತ ಪಡೆಗಳು ಲಿಪ್ಟಾಕೊ–ಗೌರ್ಮಾ ತ್ರಿ–ಸೀಮಾ ಪ್ರದೇಶದಲ್ಲಿ ಗಸ್ತು ತಿರುಗುತ್ತಿವೆ. ಸಮುದಾಯಗಳನ್ನು ನಾಶಮಾಡಿದ ಜಿಹಾದಿ ಹೋರಾಟಗಳನ್ನು ನಿಯಂತ್ರಿಸಲು. 2023 ಡಿಸೆಂಬರ್ ವೇಳೆಗೆ ಫ್ರೆಂಚ್ ಸೇನೆಯನ್ನು ತಮ್ಮ ದೇಶಗಳಿಂದ ಹೊರಹಾಕುವ ಮೂಲಕ, 1960ರಿಂದ ಪ್ರತಿ ವರ್ಷ ಆಫ್ರಿಕಾ ರಾಷ್ಟ್ರಗಳಲ್ಲಿ ಫ್ರಾನ್ಸ್ ನಡೆಸುತ್ತಿರುವ ಸೇನಾ ಹಸ್ತಕ್ಷೇಪದ ನೇರ ಸವಾಲು ಹಾಕಿದೆ.

ಆರು ವಾರಗಳಲ್ಲಿ (ಸೆಪ್ಟೆಂಬರ್ 16, 2025ರಂದು), ಅಧಿಕೃತ ಸ್ಥಾಪನೆಯ ಎರಡು ವರ್ಷಗಳನ್ನು ಮುಗಿಸಲಿರುವ. AES ಕೂಟ ಇನ್ನೂ ಅನಿಶ್ಚಿತ ಭವಿಷ್ಯ ಹೊಂದಿರುವ ನಾಜೂಕಾದ ಶಿಶುವಾಗಿದೆ. ಅದರ ಬ್ಯಾಂಕ್ ಆಫ್ರಿಕಾದ ಸ್ವಾಯತ್ತ ಸಂಪತ್ತಿನ ನಿಧಿಗಳು, ವಲಸೆ ಹೂಡಿಕೆಗಳು ಮತ್ತು BRICS+ ಪಾಲುದಾರಿಕೆಯನ್ನು ಭದ್ರಪಡಿಸಬೇಕಿದೆ. ಜೊತೆಗೆ, ನವ–ವಸಾಹತುಶಾಹಿ ಶಕ್ತಿಗಳಿಂದ ಬರುವ ನಿರ್ಬಂಧಗಳು ಮತ್ತು ಗುಪ್ತ ಧ್ವಂಸಕಾರ್ಯಗಳನ್ನು ಸಹ ಎದುರಿಸಬೇಕಿದೆ.

ರಾಷ್ಟ್ರೀಯ ವಿಮೋಚನಾ ಹೋರಾಟಗಳ ಅನುಭವ ತೋರಿಸುವಂತೆ, ಜನರನ್ನು ಕೇಂದ್ರದಲ್ಲಿ ಇರಿಸದೆ ಘನತೆಗೆ ಹೋರಾಟವನ್ನು ಮುಂದುವರಿಸಲಾಗುವುದಿಲ್ಲ. ಸಾಹೇಲ್‌ನಲ್ಲಿ ಎದ್ದಿರುವ ಕ್ರಾಂತಿಗಳಂತೆ, ಜನರು ಸ್ವತಂತ್ರ, ದೇಶಪ್ರೇಮಿ ಕ್ರಾಂತಿಗಳ ಪ್ರಮುಖ ಚಾಲನಾ ಶಕ್ತಿಯೂ, ಅಂತಿಮ ಲಾಭಾರ್ಥಿಗಳೂ ಆಗಿದ್ದಾರೆ.

ಈ ಕ್ರಾಂತಿಯ ಹಿನ್ನಡೆಯ ವಿರುದ್ಧದ ಏಕೈಕ ಅರ್ಥಪೂರ್ಣ ಭದ್ರತಾ ವ್ಯವಸ್ಥೆ ಎಂದರೆ, ಜನಪ್ರಿಯ ಶಕ್ತಿಗಳು ಮತ್ತು AES ಸರ್ಕಾರಗಳ ನಡುವಿನ ಸಹಕಾರ ಮತ್ತು ಸಂವಾದ. ತಮ್ಮ ಜನರಷ್ಟೇ ಅಲ್ಲ, ಸಂಪೂರ್ಣ ಖಂಡದ ನಿರೀಕ್ಷೆಗಳನ್ನು ಹೊತ್ತಿರುವ ಈ ಸರ್ಕಾರಗಳು, ಈ ಸಂವಾದದ ಮೂಲಕ AES ಕೂಟದ ಭವಿಷ್ಯವನ್ನು ಸಂಯುಕ್ತವಾಗಿ ಕಟ್ಟಬೇಕಿದೆ.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**